ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 24 | ಜೂನ್ 8–14, 2020 | ಪುಟ 16 | ರೂ. 10


Web : www.janashakthi.co.in e-mail : js_weekly@yahoo.com



ಮೋದಿ ಸರ್ಕಾರದ ವಿಫಲತೆ



ಜೂನ್ 16 ಅಖಿಲ ಭಾರತ ಪ್ರತಿಭಟನಾ ದಿನಾಚರಣೆ



ಭಕ್ತರಪ್ಪೊ ಭಕ್ತರು! ನಮ್ಮ ಜನಗಳು



ಕರಾಳ ಮೋಡಗಳನ್ನು ಕರಗಿಸಿ ಬೆಳ್ಳಿರೇಖೆಯನ್ನು ವಿಸ್ತರಿಸಬೇಕಿದೆ



ಸ್ವಾವಲಂಬನೆ ಎಂಬ ಪ್ರಹಸನ





ದಿಕ್ಕೆಟ್ಟ ಆರ್ಥಿಕತೆ: ಕಂಗೆಟ್ಟ ಕಾರ್ಮಿಕರು

ತಕ್ಷಣವೇ ನಗದು ವರ್ಗಾವಣೆ ಮತ್ತು ಉಚಿತ ರೇಶನ್‌ಗಳನ್ನು ಕೊಡಬೇಕು–ಎಡಪಕ್ಷಗಳ ಆಗ್ರಹ

ಮೋದಿ 2.0 ಸರಕಾರ ಮೊದಲ ವರ್ಷವನ್ನು ಪೂರ್ಣಗೊಳಿಸುತ್ತಿರುವ ಸಂದರ್ಭದಲ್ಲೇ 2019–20ರ ಜಿಡಿಪಿ ಬೆಳವಣಿಗೆ ಮಾಹಿತಿ ಬಿಡುಗಡೆಯಾಗಿದೆ. ಇದು, ನಮ್ಮ ಅರ್ಥವ್ಯವಸ್ಥೆಯನ್ನು ಧ್ವಂಸ ಮಾಡಲಾಗುತ್ತಿದೆ ಮತ್ತು ನಮ್ಮ ಬಹುಪಾಲು ಜನಗಳ ಮೇಲೆ ಅಭೂತಪೂರ್ವ ಹೊರೆಗಳನ್ನು ಹೇರಲಾಗುತ್ತಿದೆ ಎಂದು ಎಡಪಕ್ಷಗಳು ಹೇಳುತ್ತಾ ಬರುತ್ತಿರುವುದನ್ನು ಪೂರ್ಣವಾಗಿ ಸಾಬೀತು ಮಾಡಿದೆ.

ಈ ರೀತಿ ಜನಗಳ ಬದುಕುಗಳು ನಾಶವಾಗಿರುವುದರ ಮೇಲೆ ಈಗ ಕೊವಿಡ್ ಮಹಾಮಾರಿಯ ಪಿಡುಗು ಹಾಗೂ ಅದಕ್ಕೆ ಸರಕಾರದ ಯಾವುದೇ ನಿಶ್ಚಿತ ಯೋಜನೆಯಿಲ್ಲದ ಪ್ರತಿಕ್ರಿಯೆ. ಕೇವಲ ನಾಲ್ಕು ಗಂಟೆಗಳ ನೋಟೀಸಿನಲ್ಲಿ ಇದ್ದಕ್ಕಿದ್ದಂತೆ ಹಾಕಿದ ಅಯೋಜಿತವಾದ ಲಾಕ್ಡೌನ್ ನಮ್ಮ ಬಹುಪಾಲು ಜನಗಳ ಮೇಲೆ ಮತ್ತಷ್ಟು ಅಪಾನವೀಯು ಸಂಕಟಗಳನ್ನು ಹೇರಿದೆ. ವಲಸಿಗ ಕಾರ್ಮಿಕರ ಪರಿಸ್ಥಿತಿ ಈಗಲೂ ಅಸಹನೀಯವಾಗಿದೆ ಎಂದು ಐದು ಎಡಪಕ್ಷಗಳು, ಸಿಪಿಐ(ಎಂ), ಸಿಪಿಐ, ಸಿಪಿಐ(ಎಂ.ಎಲ್.), ಆರ್.ಎಸ್.ಪಿ. ಮತ್ತು ಫಾರ್ವರ್ಡ್ ಬ್ಲಾಕ್ ಹೇಳಿವೆ.

ಜನಗಳ ಯಾತನೆಗಳು, ಆತಂಕಗಳು ಮುಂದುವರೆಯುತ್ತಲೇ ಇವೆ, ಹಸಿವಿನಿಂದ, ಸುಸ್ತಿನಿಂದ ಮತ್ತು ಅಪಘಾತಗಳಿಂದ ಅವರು ಜೀವ ಕಳಕೊಳ್ಳುತ್ತಲೇ ಇದ್ದಾರೆ. ಲಾಕ್‌ಡೌನ್ ಮಹಾಮಾರಿಯನ್ನು ಎದುರಿಸುವ ನಮ್ಮ ಸಾಮರ್ಥ್ಯವನ್ನೂ ಹೆಚ್ಚಿಸಿಲ್ಲ, ಅತ್ತ ಈ ಪರಿಸ್ಥಿತಿಗಳಿಂದ ಬದುಕುಳಿಯಲು ಜನಗಳಿಗೆ ಅಗತ್ಯವಾದ ಯಾವ ಪರಿಹಾರಗಳನ್ನೂ ಕೊಟ್ಟಿಲ್ಲ.

ಆದ್ದರಿಂದ ಎಡಪಕ್ಷಗಳು ತಮ್ಮ ನಾಲ್ಕು ಬೇಡಿಕೆಗಳನ್ನು ಪುನರುಚ್ಚರಿಸಿವೆ:

1. ಆದಾಯ ತೆರಿಗೆದಾರರಲ್ಲದ ಕುಟುಂಬಗಳಿಗೆ ತಿಂಗಳಿಗೆ ರೂ.7500ರಂತೆ ಆರು ತಿಂಗಳ ಕಾಲ ಕೊಡಬೇಕು.
2. ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ. ಧಾನ್ಯದಂತೆ ಆರು ತಿಂಗಳ ಕಾಲ ಉಚಿತವಾಗಿ ಲಭ್ಯಗೊಳಿಸಬೇಕು.
3. ತಮ್ಮೂರುಗಳಿಗೆ ಹೋಗಲಾರದೆ ಸಿಲುಕಿಕೊಂಡಿರುವ ವಲಸಿಗ ಕಾರ್ಮಿಕರಿಗೆ ಉಚಿತವಾಗಿ ಆಹಾರ ಮತ್ತು ನೀರು ಒದಗಿಸುವುದರೊಂದಿಗೆ ಅವರವರ ಮನೆಗಳಿಗೆ ತಲುಪಲು ಸಾರಿಗೆಯ ವ್ಯವಸ್ಥೆ ಮಾಡಬೇಕು.
4. ಮನರೇಗದ ಅಡಿಯಲ್ಲಿ ಕೂಲಿಯನ್ನು ಹೆಚ್ಚಿಸಿ ಕನಿಷ್ಟ 200 ದಿನಗಳ ಕೆಲಸ ಒದಗಿಸಬೇಕು. ಉದ್ಯೋಗ ಖಾತ್ರಿ ಯೋಜನೆಯನ್ನು ನಗರದ ಬಡವರಿಗೂ ವಿಸ್ತರಿಸಬೇಕು.

ಎಡಪಕ್ಷಗಳ ಎಲ್ಲ ಘಟಕಗಳು, ಈ ಬೇಡಿಕೆಗಳನ್ನೆತ್ತಿ, ಅವುಗಳನ್ನು ಜಾರಿಗೊಳಿಸುವಂತೆ ಒತ್ತಡ ತರಬೇಕು, ಇದಕ್ಕಾಗಿ, ತಂತಮ್ಮ ಸ್ಥಳಗಳಲ್ಲಿನ ಮೂರ್ತ ಪರಿಸ್ಥಿತಿಗಳಿಗೆ ಅನುಗುಣವಾಗಿ ಅಗತ್ಯ ಭೌತಿಕ ಅಂತರಗಳನ್ನು ಕಾಯ್ದುಕೊಂಡು ಮತ್ತು ಮುಖಗವಸುಗಳನ್ನು ಧರಿಸಿ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಬೇಕು ಈ ಐದು ಎಡಪಕ್ಷಗಳ ಪ್ರಧಾನ ಕಾರ್ಯದರ್ಶಿಗಳಾದ ಸೀತಾರಾಮ್ ಯೆಚುರಿ, ಡಿ. ರಾಜ, ದೀಪಂಕರ್ ಭಟ್ಟಾಚಾರ್ಯ, ಮನೋಜ್ ಭಟ್ಟಾಚಾರ್ಯ ಮತ್ತು ದೇಬಬ್ರತ ಬಿಸ್ವಾಸ್ ಸಹಿ ಹಾಕಿರುವ ಜಂಟಿ ಹೇಳಿಕೆ ಕರೆ ನೀಡಿದೆ. •

ಕೇಂದ್ರ ಸಂಪುಟ ಮಂಜೂರು ಮಾಡಿರುವ ಸುಗ್ರೀವಾಜ್ಞೆಗಳನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು

"ಬ್ರಿಟಿಶರ ಕಾಲದ ನಿರ್ದಯ ರೈತ ಶೋಷಣೆಯ ದಿನಗಳನ್ನು ಮತ್ತೆ ತರಲಿರುವ ತಿದ್ದುಪಡಿಗಳು"

ಜೂನ್ 3 ರಂದು ಕೃಷಿಗೆ ಸಂಬಂಧಪಟ್ಟಂತೆ ಮೂರು ಸುಗ್ರೀವಾಜ್ಞೆಗಳನ್ನು ಕೇಂದ್ರ ಸಂಪುಟ ಮಂಜೂರು ಮಾಡಿದೆ. ಇವನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ವಿರೋಧಿಸಿದೆ.

ಆವಶ್ಯಕ ಸರಕುಗಳ ಕಾಯ್ದೆಗೆ ಪ್ರಸ್ತಾವಿಸಿರುವ ಈ ಸುಗ್ರೀವಾಜ್ಞೆಗಳ ತಿದ್ದುಪಡಿಗಳು ದೇಶದ ಆಹಾರ ಭದ್ರತೆಗೆ ಅತ್ಯಗತ್ಯವಾದ ಪ್ರಮುಖ ಕೃಷಿ ಸರಕುಗಳ ಬೆಲೆ ನಿರ್ಧಾರ ಮತ್ತು ಲಭ್ಯತೆಯ ಮೇಲಿರುವ ಎಲ್ಲ ನಿಬಂಧನೆಗಳನ್ನು ತೆಗೆದು ಹಾಕುತ್ತವೆ. ಈ ಪ್ರಸ್ತಾವಗಳು ಮಧ್ಯವರ್ತಿಗಳ ಮತ್ತು ವ್ಯಾಪಾರಿಗಳ ಸಟ್ಟಾಕೋರತನದಿಂದಾಗಿ ಕೃತಕ ಕೊರತೆಗಳನ್ನು ಸೃಷ್ಟಿಸಲು ದಾರಿ ಮಾಡಿಕೊಡುತ್ತವೆ. ಇದು ದೇಶದ ಆಹಾರ ಭದ್ರತೆಯನ್ನು ಪ್ರತಿಕೂಲವಾಗಿ ತಟ್ಟುತ್ತದೆ. ಅಲ್ಲದೆ, ಈ ತಿದ್ದುಪಡಿಗಳು ಎಲ್ಲ ನಿರ್ಬಂಧಗಳನ್ನು ತೆಗೆದು ಮತ್ತು ಕೃಷಿ ಉತ್ಪನ್ನಗಳ "ತಡೆಮುಕ್ತ ಅಂತರ–ರಾಜ್ಯ ಮತ್ತು ರಾಜ್ಯದೊಳಗೆ" ಮಾರಾಟಕ್ಕೆ ಅವಕಾಶ ಮಾಡಿಕೊಟ್ಟು ಗುತ್ತಿಗೆ ಕೃಷಿಗೆ ದಾರಿ ಮಾಡಿಕೊಡುತ್ತವೆ, ಇದಕ್ಕಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ(ಅಂದರೆ ಮಂಡಿಗಳ) ಅಡಿಯಲ್ಲಿ ಬರುವ ಮಾರುಕಟ್ಟೆಗಳ ಅಥವ ಆವರಣಗಳ ಹೊರಗೆ ವ್ಯಾಪಾರ ಮತ್ತು ವಾಣಿಜ್ಯವನ್ನು ಉತ್ತೇಜಿಸುತ್ತವೆ ಎಂದು ಪೊಲಿಟ್ ಬ್ಯುರೊ ಇವನ್ನು ವಿಶ್ಲೇಷಿಸುತ್ತ ಹೇಳಿದೆ. ಎಲೆಕ್ಟ್ರಾನಿಕ್ ವ್ಯಾಪಾರಕ್ಕೆ ಪರವಾನಿಗೆಗಳನ್ನು ಕೊಡುವುದು ಎಲ್ಲ ಕೃಷಿ ಸರಕುಗಳಲ್ಲಿ ಸಟ್ಟಾಕೋರ ಫಾರ್ವರ್ಡ್ ಟ್ರೇಡಿಂಗ್ ವ್ಯಾಪಾರಕ್ಕೆ ದಾರಿ ಮಾಡಿಕೊಡುತ್ತದೆ. ಇವೆಲ್ಲವೂ ಭಾರತದ ಕೃಷಿ ಉತ್ಪನ್ನಗಳು ಹಾಗೂ ಮಾರುಕಟ್ಟೆಗಳನ್ನು ಬಹುರಾಷ್ಟ್ರೀಯ ಕೃಷಿ ವ್ಯಾಪಾರ ಕಂಪನಿಗಳು ಮತ್ತು ದೇಶೀ ಕಾರ್ಪೊರೇಟ್‌ಗಳು ಮುಕ್ತವಾಗಿ ಪ್ರವೇಶಿಸಲು ಅವಕಾಶ ಕಲ್ಪಿಸುತ್ತವೆ.

ಈ ಸಂಪುಟ ಪ್ರಸ್ತಾವಗಳು ಕರ್ಷಕ ಬಿಕ್ಕಟ್ಟು ಮಹಾಮಾರಿ ಮತ್ತು ರಾಷ್ಟ್ರೀಯ ಲಾಕ್‌ಡೌನಿನಿಂದಾಗಿ ಉಲ್ಬಣಗೊಳ್ಳುತ್ತಿರುವ ಸಮಯದಲ್ಲಿ ಬರುತ್ತಿವೆ, ನಮ್ಮ ರೈತರಿಗೆ ಹೆಚ್ಚಿನ ರಕ್ಷಣೆ ಅಗತ್ಯವಿರುವ ಸಮಯದಲ್ಲಿ ಈ ಕ್ರಮಗಳು ಒಂದು ನ್ಯಾಯಯುತ ಕನಿಷ್ಟ ಬೆಂಬಲ ಬೆಲೆಯಲ್ಲಿ ಖರೀದಿ ಮಾಡುವುದನ್ನು ಕೈಬಿಡುವಂತಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಎಚ್ಚರಿಸಿದೆ.

ಈ ಎಲ್ಲ ತಿದ್ದುಪಡಿಗಳಿಂದ ಒಟ್ಟಾರೆಯಾಗಿ ಲಾಭ ಗಿಟ್ಟಿಸುವವರು ಮಧ್ಯವರ್ತಿಗಳು, ವ್ಯಾಪಾರಿಗಳು ಮತ್ತು ಹಣಕಾಸು ಮಧ್ಯವರ್ತಿಗಳು. ಇವರೆಲ್ಲರೂ ಉತ್ಪಾದಕರನ್ನು, ಅಂದರೆ ರೈತರನ್ನು ಹಾಗೂ ಬಳಕೆದಾರರನ್ನು ಇಬ್ಬರನ್ನೂ ಹಿಂಡುತ್ತಾರೆ. ಇದು ಅಳಿದುಳಿದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕೂಡ ಸಂಪೂರ್ಣವಾಗಿ ನಾಶ ಮಾಡುವ ಪಥ್ಯ ಎಂದು ಪೊಲಿಟ್ ಬ್ಯುರೊ ವರ್ಣಿಸಿದೆ.

ಈ ಸುಗ್ರೀವಾಜ್ಞೆಗಳು ರೈತರಿಗೆ "ನಿಜ ಸ್ವಾತಂತ್ರ್ಯ" ಎಂದು ಕೃಷಿ ಮಂತ್ರಿಗಳು ವರ್ಣಿಸ ಹೊರಟಿರುವುದು ನಿಜಕ್ಕೂ ಅಸಹ್ಯ ಉಂಟುಮಾಡುತ್ತದೆ. ದೇಶ 1947ರಲ್ಲಿ ಸ್ವಾತಂತ್ರ್ಯ ಪಡೆಯಿತು, ಆದರೆ ರೈತರು ಪಡೆಯಲಿಲ್ಲ ಎಂದು ಅವರು ಹೇಳಿಕೊಂಡಿದ್ದಾರೆ. ಭಾರತ ಸ್ವತಂತ್ರವಾದ ನಂತರ ಬಂದ ಸರಕಾರಗಳ ನಿರ್ಧಾರಗಳು ಎಷ್ಟೇ ಸೀಮಿತವಾಗಿಯಾದರೂ ಸ್ವಾತಂತ್ರ್ಯದ ನಂತರ ಹಲವು ವರ್ಷಗಳ ಕಾಲ ರೈತರನ್ನು ಮತ್ತು ದೇಶದ ಆಹಾರ ಭದ್ರತೆಯನ್ನು ಸಾಪೇಕ್ಷವಾಗಿ ಕಾಪಾಡಿಕೊಂಡು ಬಂದಿವೆ. ಮೋದಿ ಸರಕಾರ ಈ ನವ–ಉದಾರವಾದಿ ಸುಧಾರಣೆಗಳನ್ನು ಆಕ್ರಾಮಕ ರೀತಿಯಲ್ಲಿ ಅನುಸರಿಸುತ್ತಿರುವುದು ಬ್ರಿಟಿಶ್ ಆಳ್ವಿಕೆಯಲ್ಲಿ ಭಾರತೀಯ ರೈತರ ನಿರ್ದಯ ಶೋಷಣೆಯ ದಿನಗಳನ್ನು ಮತ್ತೆ ಕಾಣುವ ಬೆದರಿಕೆಯನ್ನು ಒಡ್ಡಿದೆ ಎಂದು ಎಚ್ಚರಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಸುಗ್ರೀವಾಜ್ಞೆಗಳು ಸಂಸತ್ತು ಈ ಬಗ್ಗೆ ಚರ್ಚಿಸಿ ಶಾಸನವನ್ನು ತರುವ ವರೆಗೆ ಜಾರಿಗೆ ಬರಲು ಸಾಧ್ಯವಿಲ್ಲ ಎಂಬುದು ತನ್ನ ದೃಢ ಅಭಿಪ್ರಾಯ ಎಂದಿದೆ. ಇದನ್ನು ಕಾಯ್ದೆಗಳಾಗಿ ಮಾಡುವ ಮೊದಲು ಕೃಷಿ ಕುರಿತ ಸಂಸದೀಯ ಸ್ಥಾಯಿ ಸಮಿತಿಯಿಂದ ಇವುಗಳ ಕ್ರಮಬದ್ಧ ತಪಾಸಣೆ ನಡೆಯಬೇಕು ಎಂದು ಅದು ಹೇಳಿದೆ.

ಇನ್ನೂ ಮಹತ್ವದ ಸಂಗತಿಯೆಂದರೆ ಭಾರತೀಯ ಸಂವಿಧಾನದ ಅಡಿಯಲ್ಲಿ ಕೃಷಿ ರಾಜ್ಯಪಟ್ಟಿಯಲ್ಲಿರುವ ವಿಷಯ. ಕೇಂದ್ರ ಸಂಪುಟ ಚುನಾಯಿತ ರಾಜ್ಯ ಸರಕಾರಗಳೊಡನೆ ಸಮಾಲೋಚನೆಗಳನ್ನು ನಡೆಸದೆಯೇ ಈ ಸುಗ್ರೀವಾಜ್ಞೆಗಳಿಗೆ ಮಂಜೂರಾತಿ ನೀಡಿದೆ. ಇದು ಸಂವಿಧಾನದ ಘೋರ ಉಲ್ಲಂಘನೆ. ಸಂಸತ್ತು ಇದನ್ನು ಪರಿಶೀಲಿಸಿ ಶಾಸನವನ್ನು ತಂದರೂ ಇದು ರಾಜ್ಯ ಶಾಸಕಾಂಗಗಳ ಮಂಜೂರಾತಿಗೆ ಒಳಪಡಬೇಕಾಗುತ್ತದೆ, ಆದ್ದರಿಂದ ಕೇಂದ್ರ ಸರಕಾರ ಅದನ್ನು ಏಕಪಕ್ಷೀಯವಾಗಿ ಹೇರುವಂತಿಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ನೆನಪಿಸಿದೆ.

ಈ ಸುಗ್ರೀವಾಜ್ಞೆಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಅದು ಆಗ್ರಹಿಸಿದೆ.

ಭಾರತದಲ್ಲಿ ಕಾರ್ಮಿಕ ಕಾನೂನುಗಳ 'ಸುಧಾರಣೆ'ಗಳ ಬಗ್ಗೆ ಐಎಲ್‌ಒ ಆತಂಕ

ರಾಜ್ಯಗಳಿಗೆ ಸ್ಪಷ್ಟ ಸಂದೇಶ ನೀಡುವಂತೆ ಪ್ರಧಾನ ಮಂತ್ರಿಗಳಿಗೆ ಆಗ್ರಹ

ಅಂತರ್‍ರಾಷ್ಟ್ರೀಯ ಶ್ರಮ ಸಂಘಟನೆ (ಐ.ಎಲ್.ಒ.) ಹತ್ತು ಭಾರತೀಯ ಕಾರ್ಮಿಕ ಸಂಘಟನೆಗಳು ದೇಶದಲ್ಲಿ ಕಾರ್ಮಿಕ ಕಾನೂನುಗಳನ್ನು ಬದಲಾಯಿಸುತ್ತಿರುವ ಬಗ್ಗೆ ಎದ್ದಿರುವ ಆತಂಕಗಳ ಬಗ್ಗೆ ಮೇ 14ರ ಪತ್ರವನ್ನು ನೋಡಿದ ನಂತರ ಅದನ್ನು ಗಂಭೀರವಾಗಿ ತೆಗೆದುಕೊಂಡು ಈ ವಿಷಯದಲ್ಲಿ ಪ್ರಧಾನ ಮಂತ್ರಿಗಳಿಗೆ ಈ ಕುರಿತಂತೆ ಮನವಿ ಮಾಡಿಕೊಂಡಿದೆ ಎಂದು ವರದಿಯಾಗಿದೆ.

ಭಾರತದ ಅಂತರ್‍ರಾಷ್ಟ್ರೀಯ ಬದ್ಧತೆಗಳನ್ನು ಎತ್ತಿ ಹಿಡಿಯುವಂತೆ ಮತ್ತು ಪರಿಣಾಮಕಾರಿ ಸಾಮಾಜಿಕ ಸಂವಾದದಲ್ಲಿ ತೊಡಗಲು ಪ್ರೋತ್ಸಾಹಿಸುವಂತೆ ಕೇಂದ್ರ ಮತ್ತು ರಾಜ್ಯಸರಕಾರಗಳಿಗೆ ಸ್ಪಷ್ಟ ಸಂದೇಶವನ್ನು ನೀಡಬೇಕು ಎಂದು ಐ.ಎಲ್.ಒ. ಮಹಾನಿರ್ದೇಶಕರು ಪ್ರಧಾನ ಮಂತ್ರಿಗಳನ್ನು ಆಗ್ರಹಪೂರ್ವಕ ಕೇಳಿಕೊಂಡಿದ್ದಾರೆ ಎಂದು ಐ.ಎಲ್.ಓ. ದ ಸಂಜಿ ಕಟ್ಟಿಕೊಳ್ಳುವ ಸ್ವಾತಂತ್ರ್ಯ ಶಾಖೆಯ ಮುಖ್ಯಸ್ಥರು ಭಾರತದ್ ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಪತ್ರಕ್ಕೆ ಸ್ಪಂದಿಸುತ್ತ ಬರೆದಿದ್ದಾರೆ.

ಈ ಹತ್ತು ಭಾರತೀಯ ಕಾರ್ಮಿಕ ಸಂಘಟನೆಗಳು ಮೇ 25 ರಂದು ಐ.ಎಲ್.ಒ. ಗೆ ಮತ್ತೊಂದು ಪತ್ರವನ್ನು ಬರೆದು ಭಾರತ ಸರಕಾರ ದೇಶದಲ್ಲಿರುವ ಹೆಚ್ಚಿನ ವಿಧಾಯಕ ಕಾನೂನುಗಳನ್ನು ನಿರರ್ಥಕಗೊಳಿಸುವ ಕಾರ್ಮಿಕ–ವಿರೋಧಿ ಪ್ರತಿಗಾಮಿ ಕಸರತ್ತು ನಡೆಸುತ್ತಿದೆ ಎಂಬುದನ್ನು ಐ.ಎಲ್.ಒ. ಗಮನಕಕ್ಕೆ ತಂದಿವೆ, ಜತೆಗೆ ಗುಜರಾತ್, ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಹರಿಯಾಣ, ರಾಜಸ್ತಾನ, ಝಾರ್ಖಂಡ, ಪಂಜಾಬ್, ಒಡಿಶಾ, ಮಹಾರಾಷ್ಟ್ರ, ಅಸ್ಸಾಂ, ಬಿಹಾರ ಮತ್ತು ಕರ್ನಾಟಕ ರಾಜ್ಯ ಸರಕಾರಗಳು ಈ ನಿಟ್ಟಿನಲ್ಲಿ ಕೈಗೊಳ್ಳುತ್ತಿರುವ ಕ್ರಮಗಳನ್ನು ಪಟ್ಟಿ ಮಾಡಿವೆ.

ಕೇಂದ್ರ ಸರಕಾರ ಎಪ್ರಿಲ್ 3 ರಿಂದ 10ರ ನಡುವೆ ಉದ್ಯಮಿಗಳ ಸಂಘಗಳ ನಾಲ್ಕು ಗುಂಪುಗಳನ್ನು ಭೇಟಿ ಮಾಡಿದ್ದು, ಅವರು ಕಾರ್ಮಿಕ ಸಂಘಗಳ ಚಟುವಟಿಕೆಗಳನ್ನು ತಡೆಗಟ್ಟಲು ಹೇಳಿದ್ದಾರೆ, ಮತ್ತು ಕೇಂದ್ರ ಸರಕಾರ ಒತ್ತಾಯ ಮಾಡಿದ್ದರಿಂದ ರಾಜ್ಯ ಸರಕಾರಗಳು ಈ ಕ್ರಮಗಳನ್ನು ಕೈಗೊಂಡಿವೆ ಎಂದೂ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಐ.ಎಲ್.ಒ. ಗಮನಕ್ಕೆ ತಂದಿವೆ.

ಲಾಕ್‌ಡೌನ್ ಸನ್ನಿವೇಶದಲ್ಲಿ ಕಾರ್ಮಿಕರು ಯಾವುದೇ ಪ್ರತಿಭಟನಾ ಕಾರ್ಯಾಚರಣೆ ನಡೆಸಲು ಸಾಧ್ಯವಾಗುವುದಿಲ್ಲ ಎಂಬುದರ ಪ್ರಯೋಜನವನ್ನು ಪಡೆದು ರಾಜ್ಯ ಸರಕಾರಗಳು ಕೇಂದ್ರ ಸರಕಾರದ ಶಾಮೀಲಿನೊಂದಿಗೆ ಇಂತಹ ಕ್ರಮಗಳನ್ನು ಕೈಗೊಳ್ಳುತ್ತಿವೆ, ಇವು ಐ.ಎಲ್.ಒ.ದ ಫಿಲಡೆಲ್ಫಿಯಾ ಘೋಷಣೆಯ ಉಲ್ಲಂಘನೆಯಾಗಿವೆ ಎಂಬುದನ್ನು ತಮ್ಮ ಪತ್ರದಲ್ಲಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ನೆನಪಿಸಿವೆ.

ಅಂತರ–ರಾಜ್ಯ ವಲಸೆ ಕಾರ್ಮಿಕರ ರಕ್ಷಣೆಯ ಕಾಯ್ದೆಯಿದ್ದರೂ ಕೂಡ ಲಾಕ್‌ಡೌನಿನಿಂದಾಗಿ ಉಂಟಾದ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಕೇಂದ್ರ ಸರಕಾರದ ನಿಷ್ಕ್ರಿಯತೆಯನ್ನೂ ಈ ಪತ್ರ ಐ.ಎಲ್.ಒ. ಗಮನಕ್ಕೆ ತಂದಿದೆ.

ಜನಾಂಗವಾದಿ ಹಿಂಸಾಚಾರವನ್ನು ನಿಲ್ಲಿಸಿ:

ಅಮೆರಿಕದಲ್ಲಿ ನ್ಯಾಯ, ಸಾಮರಸ್ಯವನ್ನು ಖಾತ್ರಿಗೊಳಿಸಿ

ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಜಾರ್ಜ್ ಫ್ಲೋಯ್ಡ್ ಕೊಲೆಗೆ ಜಗತ್ತಿನಾದ್ಯಂತ ವ್ಯಾಪಕ ಖಂಡನೆ ಮತ್ತು ಜನಾಂಗವಾದಿ ಹಿಂಸಾಚಾರವನ್ನು ನಿಲ್ಲಿಸಿ ಸಾಮಾಜಿಕ ಸಾಮರಸ್ಯ ಮತ್ತು ನ್ಯಾಯವನ್ನು ಖಾತ್ರಿಗೊಳಿಸಬೇಕು ಎಂಬ ಆಗ್ರಹ ವ್ಯಕ್ತವಾಗುತ್ತಿದೆ. ಈ ಅಂತರ್‍ರಾಷ್ಟ್ರೀಯ ಸೌಹಾರ್ದತೆಯಲ್ಲಿ ಸಿಪಿಐ(ಎಂ) ಕೂಡ ಸೇರಿಕೊಳ್ಳುವುದಾಗಿ ಪಕ್ಷದ ಪೊಲಿಟ್ ಬ್ಯುರೊ ಹೇಳಿದೆ.

ಅಮೆರಿಕ ಕೂಡಲೇ ನ್ಯಾಯದ ಕೈಮೇಲಾಗುವಂತೆ ಮಾಡಬೇಕು ಮತ್ತು ಇಂತಹ ಜನಾಂಗವಾದಿ ಹಿಂಸಾಚಾರ ಎಸಗುವವರನ್ನು ಅಮೆರಿಕಾದ ಕಾನೂನಿನ ಪ್ರಕಾರ ಶಿಕ್ಷಿಸಬೇಕು ಎಂದು ಪೊಲಿಟ್ ಬ್ಯುರೊ ಆಗ್ರಹಿಸಿದೆ.



ಸಂಪಾದಕೀಯ

"ಭಕ್ತರಪ್ಪ ಭಕ್ತರೋ, ನಮ್ಮ ಜನಗಳು!"

ಭಕ್ತರ ಹೊಸ ಫೀಳಿಗೆಯೊಂದು ನಮ್ಮ ದೇಶವಾಸಿಗಳ ನಡುವೆ ಬೆಳೆದು ಬರುತ್ತಿದೆ. ಈ ಬೆಳವಣಿಗೆ ಗುಟ್ಟಾಗಿ ಉಳಿದಿಲ್ಲ. ಅದು ಸಾಕಷ್ಟು ಗಮನ ಸೆಳೆಯುತ್ತಿದೆ. ಅದಕ್ಕೂ ಹೆಚ್ಚಾಗಿ ಜನರಲ್ಲಿ ವ್ಯಾಪಕವಾಗಿ ಗಮನ ಸೆಳೆಯುತ್ತಿದೆ. ಅದಕ್ಕೂ ಹೆಚ್ಚಾಗಿ ಜನರಲ್ಲಿ ವ್ಯಾಪಕವಾಗಿ ಹರಡುತ್ತಿರುವ ಈ ಪ್ರವೃತ್ತಿ ಆತಂಕವನ್ನು ಹುಟ್ಟಿಸುತ್ತದೆ. ಅದು ಬೇರೆ ಯಾವೂದೂ ಅಲ್ಲ. ಅದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಅನುಯಾಯಿಗಳ ಹೊಸ ಪೀಳಿಗೆ! ಮೋದಿಯವರ ಈ ಪೀಳಿಗೆ ಅಷ್ಟೇನು ಕಟ್ಟಾ ಬಿಜೆಪಿಯ ಅನುಯಾಯಿಗಳಲ್ಲ. ಅಥವ ಆರೆಸ್ಸೆಸ್ ಸಿದ್ಧಾಂತದಲ್ಲಿ ಪಳಗಿದವರಲ್ಲ. ಬಾಲ್ಯದಲ್ಲಿ ಆರೆಸ್ಸೆಸ್ ಶಾಖೆಗಳಲ್ಲಿ ಕಾಲ ಕಳೆದವರಲ್ಲ. ಅವರು 'ಭಕ್ತರು' ಮೋದಿಯವರ ಭಕ್ತಗಣಕ್ಕೆ ಸೇರಿದವರು. ಅವರು ಮೋದಿಯವರ ಭಕ್ತರು ಏಕೆಂದರೆ ಅವರು ಮೋದಿ ಹೇಳುವುದನ್ನು, ಅವರು ವ್ಯಾಖ್ಯಾನಿಸುವುದನ್ನು ಅವರ ಈ ಅನುಯಾಯಿಗಳು ತರ್ಕರಹಿತವಾಗಿ, ವಿಮರ್ಶೆಇಲ್ಲದೆ ಒಪ್ಪಿಕೊಳ್ಳುತ್ತಾರೆ. ಈ ರೀತಿಯಲ್ಲಿ ಕುರಡು ಭಕ್ತರನ್ನು ಸೃಷ್ಟಿಸಿ ಬೆಳೆಸುವುದರಲ್ಲಿ ನಮ್ಮ ಸಾಮಾಜಿಕ ಮಾಧ್ಯಮಗಳ ಪಾತ್ರ ಬಾರೀ ದೊಡ್ಡದು. ಈ ಭಕ್ತರ ವಿಶ್ವ ಕನ್ನೋಟವನ್ನು ರೂಪಿಸುವುದರಲ್ಲಿ ವಾಟ್ಸ್ಆಫ್, ಫೆಸ್‌ಬುಕ್, ಟ್ವಿಟರ್, ಕೆಲವು ಟಿವಿ ಆ್ಯಂಕರ್‌ಗಳು, ಮತ್ತು ಕೆಲವು ಚಾನಲ್‌ಗಳು ಮತ್ತು ಕೆಲವು ಪ್ರಿಂಟ್ ಪ್ರಕಟನೆಗಳು ವ್ಯಕ್ತಿ ಉಪಾಸನೆಯನ್ನು ಹಬ್ಬಿಸುವುದರಲ್ಲಿ ಬಾರೀ ಕೊಡುಗೆಯನ್ನು ನೀಡುತ್ತಿವೆ.

ಒಬ್ಬ ನಾಯಕನ ವ್ಯಕ್ತಿತ್ವವನ್ನು ಹಿಗ್ಗಿಸಲು ನಮ್ಮ ದೇಶದ ಇತರ ನಾಯಕರನ್ನು ಹಿಯಾಳಿಸಲಾಗುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ, ಅದಕ್ಕಾಗಿ ತಮ್ಮ ಅಮೂಲ್ಯ ಪ್ರಾಣವನ್ನೇ ಬಲಿದಾನಗೈದ ಹುತಾತ್ಮರನ್ನು ಅವಹೇಳನ ಮಾಡಲಾಗುತ್ತದೆ. ಮಹಾತ್ಮ ಗಾಂಧಿಯವರನ್ನು ಕೊಲೆಗೈದ ಹಿಂಸಾವಾದಿ ನಾಥುರಾಮ್ ಗೋಡ್ಸೆಯನ್ನು ಸಮರ್ಥಿಸುತ್ತಾರೆ. ಆತನನ್ನು ಮಹಾನ್ ದೇಶಭಕ್ತನೆಂದು ಬಣ್ಣಿಸಿ ಆತನಿಗೆ ಗುಡಿ ಕಟ್ಟಿಸಿ ಪೂಜಿಸಲಾಗುತ್ತದೆ. ದೇಶದ ಮೊದಲ ಪ್ರಧಾನಿ, ಆಧುನಿಕ ಭಾರತದ ನಿರ್ಮಾಪಕ ಪಂಡಿತ್ ನೆಹರುರವರ ಬಗ್ಗೆ ಅತ್ಯಂತ ಕೀಳು ಮಟ್ಟದ ಪ್ರಚಾರಗಳನ್ನು ಮಾಡುತ್ತಾ ದೇಶದ ಇಂದಿನ ಎಲ್ಲಾ ಸಮಸ್ಯೆಗಳಿಗೆ ನೆಹರು ಕಾರಣ ಎಂದು ಮೋದಿ ಭಕ್ತರ ನಡುವೆ ಪ್ರಚಾರ ಮಾಡಿ ಮೋದಿ ವ್ಯಕ್ತಿತ್ವವನ್ನು ಹಿಗ್ಗಿಸಲಾಗುತ್ತಿದೆ. ಮೋದಿ ಬಳಿಯಲ್ಲಿ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಿದೆ. ಅವರೊಬ್ಬ ವ್ಯಕ್ತಿ ಅಲ್ಲ. ಅವರೊಂದು ಶಕ್ತಿ ಎಂದು ಭಕ್ತರನ್ನು ಮೋಡಿಮಾಡಲಾಗುತ್ತಿದೆ.

ಮೋದಿ ಸರ್ಕಾರದ 2ನೇ ಅವಧಿಯ ಮೊದಲ ವರ್ಷವನ್ನು ಪೂರೈಸಿದ ಸಂದರ್ಭವನ್ನು ಭಕ್ತರನ್ನು ಭಕ್ತಿ ಎಂಬ ಸುರಪಾನದಲ್ಲಿ ಮುಳುಗಿಸುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಲಾಯಿತು. ಮೋದಿಯವರ ಅಸಾಧಾರಣ ಆಡಳಿತ ವೈಖರಿಯಿಂದಾಗಿ ಇಡೀ ಜಗತ್ತು ಭಾರತದತ್ತ ನೋಡುವಂತಾಗಿದೆ ಎಂದು ಮಾಧ್ಯಮಗಳ ಮೂಲಕ ಹಾಡಿ ಹೊಗಳಲಾಯಿತು. ಭಕ್ತರು ಪುಳಕಿತರಾಗಿ ನಮೋ ಜಯಘೋಷದಲ್ಲಿ ಮೈಮರೆತರು. ಅಮೆರಿಕ ಅಧ್ಯಕ್ಷ ಟ್ರಂಪ್ ಮೋದಿಯವರನ್ನು ಹೊಗಳಿದ್ದೇ ಹೊಗಳಿದ್ದು. ಮೋದಿಯವರು ಪ್ರತಿಯಾಗಿ ಟ್ರಂಪ್ ಪರವಾಗಿ ಚುನಾವಣಾ ಭಾಷಣ ಮಾಡಲು ಹೇಸಲಿಲ್ಲ.

ಮೋದಿಯವರು ದೇಶವಾಸಿಗಳಿಗೆ ಪತ್ರವೊಂದನ್ನು ಬರೆದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಸಂಭ್ರಮಿಸಿದರು. ಕೊರೊನಾ ಧಾಳಿಯನ್ನು ತಡೆಯುವುದರಲ್ಲಿ ತನ್ನ ಸಾಧ್ಯತೆಗೆ ವಿಶ್ವ ಮಾನ್ಯತೆ ದೊರೆತಿದೆ ಎಂದು ಹೇಳಲು ಹಿಂಜರಿಯಲಿಲ್ಲ. ಹೀಗೆ ದೇಶ ವಿದೇಶಗಳಲ್ಲಿ ಭಕ್ತರ ಸಂಖ್ಯೆಯನ್ನು ವ್ಯವಸ್ಥಿತವಾಗಿ ಬೆಳಸಲಾಗುತ್ತಿದೆ. ಈ ರೀತಿ ದೇಶ ಒಂದು ಆಘಾತಕಾರಿ ತಿರುವು ಪಡೆಯುತ್ತಿದೆ. ನಮ್ಮ ದೇಶವಾಸಿಗಳ ಮುಗ್ಧತೆಯ ಲಾಭ ಪಡೆದು ಇಂತಹ ನಾಯಕರು ದೇವರಾಗುತ್ತಾರೆ. ಮೋದಿ ಉಪಾಸಕರಾಗಿ ಪರಿವರ್ತನೆಗೊಳ್ಳುತ್ತಿರುವ ದೇಶದ ಪುರುಷರು ಹಾಗೂ ಮಹಿಳೆಯರು ತಮ್ಮ ಆರಾಧಕನಿಗಾಗಿ ಏನೂ ಬೇಕಾದರೂ ಮಾಡಲು ಸಿದ್ಧ. ನಮೋ ಮಾತುಗಳು ಎಷ್ಟೇ ತರ್ಕ ವಿರೋಧಿಯಾಗಿದ್ದರೂ ಅವರ ಭಕ್ತರು ಅದನ್ನು ಪ್ರಶ್ನಿಸಲಾರರು. ಪ್ರಶ್ನಿಸಲು ಮುಂದಾಗುವವರನ್ನು ಸುಮ್ಮನೆ ಬಿಡಲಾರರು. "ಭಕ್ತರಪ್ಪ ಭಕ್ತರೋ, ನಮ್ಮ ಜನಗಳು". ಇದು ಖ್ಯಾತ ಕವಿ ಸಿದ್ದಲಿಂಗಯ್ಯನವರ ಒಂದು ಪ್ರಸಿದ್ಧ ಕವನದ ಒಂದು ಸಾಲು. ಎಂದೋ ಬರೆದ ಕವನದ ಸಾಲು ಇಂದಿನ ಬೆಳವಣಿಗೆಗೆ ಸರಿಯಾಗಿ ಒಗ್ಗುತ್ತದೆ. ಭಕ್ತರಪ್ಪ ಭಕ್ತರೊ! ನಮ್ಮ ದೇಶವಾಸಿಗಳು.

ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ – 2020 ನ್ನು ರಾಜ್ಯದಲ್ಲಿ ಜಾರಿಗೊಳಿಸದಿರಲು ಒತ್ತಾಯ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ಮಾನ್ಯರೇ,

ಭಾರತ ಸರಕಾರ ಸಾರ್ವಜನಿಕ ವಿದ್ಯುತ್ ರಂಗವನ್ನು ಇಡೀಯಾಗಿ ಖಾಸಗೀಕರಿಸಲು, ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ– 2020 ನ್ನು ದೇಶದಾದ್ಯಂತ ಜಾರಿಗೆ ತರುವ ತೀವ್ರ ಪ್ರಯತ್ನದಲ್ಲಿದೆ. ಸದರಿ ಉದ್ದೇಶದಿಂದ ಕೇಂದ್ರ ಸರಕಾರ ರಾಜ್ಯ ಸರಕಾರಗಳ ಮೇಲೆ ಒತ್ತಡ ಹೇರುತ್ತಿರುವುದು ತಮ್ಮ ಗಮನಕ್ಕಿದೆಯೆಂದು ಸಿಪಿಐಎಂ ಭಾವಿಸಿದೆ.

ವಿದ್ಯುತ್ ಎಂಬುದು ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ಮಹತ್ವದ ಒಂದು ಸೇವೆ ಎಂಬ ಇದುವರೆಗಿನ ನಿಲುಮೆಯಿಂದ ದೂರ ಸರಿದು, ಅದನ್ನು ಮಾರುಕಟ್ಟೆ ಪ್ರೇರಿತ ಲಾಭದ ಸರಕನ್ನಾಗಿ ಪರಿವರ್ತಿಸುವ ಖಂಡನಾರ್ಹ ಕೆಲಸಕ್ಕೆ ಕೇಂದ್ರ ಸರಕಾರ ಈ ಮೂಲಕ ಕ್ರಮ ವಹಿಸಿದೆ.

ಸದರೀ ಮಸೂದೆಯನ್ನು ರಾಜ್ಯದಲ್ಲಿ ಜಾರಿಗೊಳಿಸಿದಲ್ಲಿ ರಾಜ್ಯದ ವಿದ್ಯುತ್ ಉತ್ಪಾದನೆ, ಸರಬರಾಜು ಹಾಗೂ ವಿತರಣೆಯ ಕಂಪನಿಗಳು, (KPCL, KPTCL, BESCOM, MESCOM, GESCOM, HESCOM etc) ಹಾಗೂ ಅವುಗಳ ಲಕ್ಷಾಂತರ ಕೋಟಿ ಆಸ್ತಿಗಳು ಕಾರ್ಪೋರೇಟ್ ಕಂಪನಿಗಳ ಕೈ ವಶವಾಗಲಿವೆ.

ಅದೇ ರೀತಿ, ರಾಜ್ಯ ಸರಕಾರದ ಹಾಲಿ ವಿದ್ಯುತ್ ನೀತಿಯಿಂದ ಮಿಲಿಯಾಂತರ ಕೃಷಿ ಪಂಪ್ ಸೆಟ್ ಗಳ ರೈತ ಕುಟುಂಬಗಳು, ಹಾಗೂ ಭಾಗ್ಯ ಹಾಗೂ ಕುಠೀರ ಜ್ಯೋತಿ ಯೋಜನೆಗಳಿಂದ ಕೋಟ್ಯಾಂತರ ಬಡ ಕುಟುಂಬಗಳು ಹಾಗೂ ಮಿಲಿಯಾಂತರ ಸಣ್ಣ ಕೈಗಾರಿಕೆಗಳ ಕುಟುಂಬಗಳು, ಉಚಿತ ಹಾಗೂ ಸಹಾಯಧನದ ಆಧಾರದಲ್ಲಿ ವಿದ್ಯುತ್ ಪ್ರಯೋಜನ ಪಡೆಯುತ್ತಿವೆ. ಈಗ ಇವರೆಲ್ಲರೂ ಅಂತಹ ಪ್ರಯೋಜನವನ್ನು ಕಳೆದು ಕೊಳ್ಳ ಬೇಕಾಗುತ್ತದೆ. ಮಾತ್ರವಲ್ಲಾ, ಇವರಲ್ಲಿ ಬಹುತೇಕರು ಉದ್ಯೋಗ ಕಳೆದು ಕೊಳ್ಳ ಬೇಕಾಗುತ್ತದೆ.

ಖಾಸಗೀ ಕಂಪನಿಗಳ ವ್ಯವಹಾರವು ರಾಜ್ಯದ ಎಲ್ಲ ಗ್ರಾಹಕರ ಭಾರೀ ಲೂಟಿಗೆ ಕಾರಣವಾಗಲಿದೆ. ಹೀಗಾಗಿ, ಇದರಿಂದ ರಾಜ್ಯದ ಶೇ 90 ಕ್ಕೂ ಅಧಿಕ ಜನತೆ ತೀವ್ರ ಸಂಕಷ್ಟಕ್ಕೀಡಾಗ ಬೇಕಾಗುತ್ತದೆ. ರಾಜ್ಯದ ಒಟ್ಟು ಆಂತರಿಕ ಉತ್ಪಾದನೆ ಗಹನವಾಗಿ ಕುಸಿಯಲಿದೆ.

ಇದು, ಅದಾಗಲೇ ಸಂಕಷ್ಟದಲ್ಲಿರುವ ರಾಜ್ಯವನ್ನು ಮತ್ತಷ್ಟು ತೀವ್ರ ತೆರನಾದ ಸಂಕಷ್ಟಕ್ಕೀಡು ಮಾಡಲಿದೆ. ಇದು ರಾಜ್ಯದ ಸ್ವಾವಲಂಬಿ ಆರ್ಥಿಕ ಬದುಕಿನ ಮೇಲಿನ ಬಲವಾದ ಧಾಳಿಯಾಗಲಿದೆ.

ರಾಜ್ಯದ ಅಭಿವೃದ್ಧಿ ಗೆ ಸಾರ್ವಜನಿಕ ರಂಗದ ಈ ವಿದ್ಯುತ್ ವಲಯದ ಕೊಡುಗೆ ಅಪಾರವಾಗಿರುವುದನ್ನು ಮತ್ತು ಮುಂದೆಯೂ ರಾಜ್ಯದ ಅಭಿವೃದ್ಧಿಗೆ ಅದರ ಕೊಡುಗೆಯ ಮಹತ್ವವನ್ನು ಗಮನಿಸ ಬೇಕಾಗಿದೆ.

ಆದ್ದರಿಂದ, ಕೃಷಿ ಹಾಗೂ ಕೈಗಾರಿಕಾ ರಂಗದ ಅಭಿವೃದ್ಧಿ ದೃಷ್ಠಿಯಿಂದ ಮತ್ತು ಕಾರ್ಪೋರೇಟ್ ಕಂಪನಿಗಳ ಲೂಟಿಯ ಧಾಳಿಯಿಂದ ರಾಜ್ಯದ ಸ್ವಾತಂತ್ರ್ಯ ಮತ್ತು ಸ್ವಾವಲಂಬಿ ಬದುಕನ್ನು ಸಂರಕ್ಷಿಸಲು, ರಾಜ್ಯದಲ್ಲಿ ಈ ಜನವಿರೋಧಿ ಮಸೂದೆಯನ್ನು ಜಾರಿಗೊಳಿಸಬಾರದೆಂದು ಭಾರತ ಕಮ್ಯುನಿಸ್ಠ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿಯು ಒತ್ತಾಯಿಸುತ್ತದೆ.

ಅದೇ ರೀತಿ, ರಾಜ್ಯದ ಎಲ್ಲಾ ಉತ್ಪಾದನೆ, ಸರಬರಾಜು ಹಾಗೂ ವಿತರಣೆಯ ವಲಯಗಳ ವಿದ್ಯುತ್ ಕಂಪನಿಗಳ ಸಾಮರ್ಥ್ಯ ವನ್ನು ಹೆಚ್ಚಿಸಲು ಅಗತ್ಯ ಕ್ರಮ ವಹಿಸಲು ವಿನಂತಿಸುತ್ತದೆ.

ಕರ್ನಾಟಕ ಸರಕಾರ ಕೇಂದ್ರ ಸರಕಾರದ ಈ ಜನವಿರೋಧಿ ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ– 2020 ನ್ನು ವಾಪಾಸು ಪಡೆಯುವಂತೆ ಒತ್ತಾಯಿಸಿ ಪತ್ರ ಬರೆಯಲು ಈ ಕುರಿತು ವಿಧಾನಸಭೆಯಲ್ಲಿ ನಿರ್ಣಯ ಕೈಗೊಳ್ಳಲು ಕೂಡಾ ಈ ಮೂಲಕ ಸಿಪಿಐಎಂ ವಿನಂತಿಸುತ್ತದೆ.

ಯು. ಬಸವರಾಜ ಕಾರ್ಯದರ್ಶಿ, (31–05–2020)

ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ – 2020 ನ್ನು ರಾಜ್ಯದಲ್ಲಿ ಜಾರಿಗೊಳಿಸದಿರಲು ಕೆಪಿಆರ್‌ಎಸ್ ನ ಬಲವಾದ ಒತ್ತಾಯ

ಇಡೀ ದೇಶ ಮತ್ತು ಜಗತ್ತು ಕೋವಿಡ್ –19 ರ ವಿರುದ್ದ ಎಲ್ಲ ಭೇದಗಳನ್ನು ಮರೆತು ಹೋರಾಟದಲ್ಲಿ ತೊಡಗಿರುವಾಗ, ಸದರಿ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು, ಕೇಂದ್ರ ಸರಕಾರ ತನ್ನ ಒಕ್ಕೂಟವಾದಿ ಸ್ವರೂಪವನ್ನು ಧಿಕ್ಕರಿಸಿ, ದೇಶದ ರೈತರು ಹಾಗೂ ಕೂಲಿಕಾರರು, ಕಾರ್ಮಿಕರು, ಸಣ್ಣ ಕೈಗಾರಿಕೆಗಳು ಹಾಗೂ ವಿದ್ಯುತ್ ಗ್ರಾಹಕರ ಮೇಲೆ ಕಾರ್ಪೋರೇಟ್ ಕಂಪನಿಗಳ ಲೂಟಿಗಾಗಿ, ಮತ್ತೊಂದು ಗಂಭೀರ ಧಾಳಿ ಮಾಡಲು, ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ –2020 ನ್ನು ಜಾರಿಗೊಳಿಸಲು ಕ್ರಮವಹಿಸಿದೆ. ಮಾತ್ರವಲ್ಲಾ, ಎಲ್ಲಾ ರಾಜ್ಯ ಸರಕಾರಗಳು ಕೂಡಲೇ ಅದರ ಜಾರಿಗೆ ಸೂಕ್ತ ಕ್ರಮ ವಹಿಸುವಂತೆ ಒತ್ತಡವನ್ನು ಹೇರಿದೆ.

ಇದು ಜಾರಿಯಾದರೇ, ವಿದ್ಯುತ್ ಉತ್ಪಾದನೆ, ಸರಬರಾಜು ಮತ್ತು ವಿತರಣೆಗಳ ಕಂಪನಿಗಳು ಹಾಗೂ ಅವುಗಳ ಲಕ್ಷಾಂತರ ಕೋಟಿ ರೂಗಳ ಆಸ್ತಿ–ಪಾಸ್ತಿಗಳು, ಖಾಸಗೀ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಕೈ ವಶವಾಗಲಿವೆ.

ಅದೇ ರೀತಿ, ರೈತರ ದಶಲಕ್ಷಾಂತರ ಕೃಷಿ ಪಂಪ್ ಸೆಟ್ ಗಳಿಗೆ ಮತ್ತು ಭಾಗ್ಯ ಜ್ಯೋತಿ, ಕುಠೀರ ಜ್ಯೋತಿ ಗಳಿಗೆ ಹಾಗೂ ಸಣ್ಣ ಕೈಗಾರಿಕೆಗಳಿಗೆ ಒದಗಿಸಲಾಗುತ್ತಿರುವ ಉಚಿತ/ ಸಹಾಯ ಧನದ ವಿದ್ಯುತ್ ಗೆ ಸಂಪೂರ್ಣ ಕತ್ತರಿ ಬೀಳಲಿದೆ.

ಕಾರ್ಪೋರೇಟ್ ಕಂಪನಿಗಳ ಕೈ ವಶವಾದ ಕೂಡಲೇ,ರಾಜ್ಯದ ಕೋಟ್ಯಾಂತರ ಗ್ರಾಹಕರ ವ್ಯಾಪಕ ಲೂಟಿಗೂ ಇದು ಅನುಕೂಲ ಮಾಡಿಕೊಡಲಿದೆ.

ಆದ್ದರಿಂದ, ಈ ಮಸೂದೆಯು ಸ್ಪಷ್ಠವಾಗಿ, ರಾಜ್ಯದ ಅಭಿವೃದ್ದಿ ಹಾಗೂ ಬಡವರ ವಿರೋಧಿಯಾಗಿದೆ.

ಕರ್ನಾಟಕ ಸರಕಾರ ಸದರಿ ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ – 2020 ನ್ನು ಯಾವುದೇ ಕಾರಣಕ್ಕೆ ರಾಜ್ಯದಲ್ಲಿ ಜಾರಿಗೆ ತರಬಾರದು ಮತ್ತು ವಿದ್ಯುತ್ ರಂಗವನ್ನು ಖಾಸಗೀಕರಣ ಮಾಡಲು ಕ್ರಮವಹಿಸಬಾರದೆಂದು ಕರ್ನಾಟಕ ಪ್ರಾಂತ ರೈತ ಸಂಘ ಮುಖ್ಯಮಂತ್ರಿಗಳನ್ನು ಬಲವಾಗಿ ಒತ್ತಾಯಿಸುತ್ತದೆ. ಅದೇ ರೀತಿ, ಕಾರ್ಪೋರೇಟ್ ಕಂಪನಿಗಳ ಪರವಾಗಿ ರೂಪಿಸಲಾಗಿರುವ ಸದರಿ ಮಸೂದೆಯನ್ನು ಕೇಂದ್ರ ಸರಕಾರ ತಕ್ಷಣವೇ ವಾಪಾಸು ಪಡೆಯ ಬೇಕೆಂದು ರೈತ ಸಂಘ ಒತ್ತಾಯಿಸಿದೆ.

ವಿದ್ಯುತ್ ರಂಗದ ನೌಕರರ ಹೋರಾಟಕ್ಕೆ ಕೆಪಿಆರ್‌ಎಸ್ ಬೆಂಬಲ:

ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ– 2020 ನ್ನು ಕೇಂದ್ರ ಸರಕಾರ ವಾಪಾಸು ಪಡೆಯಬೇಕೆಂದು ಮತ್ತು ವಿದ್ಯುತ್ ಉತ್ಪಾದನೆ, ಸರಬರಾಜು ಹಾಗೂ ವಿತರಣೆಯ ಕಂಪನಿಗಳನ್ನು ಸಾರ್ವ ಜನಿಕ ವಲಯದಲ್ಲಿಯೇ ಉಳಿಸಿ, ಬಲಪಡಿಸ ಬೇಕೆಂದು ಒತ್ತಾಯಿಸಿ, ನಾಳೆ ಅಂದರೇ, ಜೂನ್ 01, ರಂದು ದೇಶದಾದ್ಯಂತ, ವಿದ್ಯುತ್ ನೌಕರರು ಮತ್ತು ಇಂಜನೀಯರುಗಳ ರಾಷ್ಟ್ರೀಯ ವೇದಿಕೆ ಚಳುವಳಿಯನ್ನು ಹಮ್ಮಿಕೊಂಡಿದೆ. ರಾಜ್ಯದಲ್ಲಿ ನಡೆಯುವ ಸದರಿ ಚಳುವಳಿಯನ್ನು ಕರ್ನಾಟಕ ಪ್ರಾಂತ ರೈತ ಸಂಘ ಸಂಪೂರ್ಣವಾಗಿ ಬೆಂಬಲಿಸುತ್ತದೆ.ಈ ಹೋರಾಟದಲ್ಲಿ ರೈತ ಸಂಘದ ನಾಯಕತ್ವ ಭಾಗವಹಿಸಿ ಬೆಂಬಲಿಸಲಿದೆ. ಮುಂದೆ ಇತರ ರೈತ ಹಾಗೂ ಕೂಲಿಕಾರರ ಸಂಘಟನೆಗಳು, ಮತ್ತು ಸಣ್ಣ ಕೈಗಾರಿಕೆಗಳ ಮತ್ತು ಗ್ರಾಹಕರ ಸಂಘಟನೆಗಳ ಜೊತೆ ಚರ್ಚಿಸಿ ಜಂಟಿ ಚಳುವಳಿಯನ್ನು ನಡೆಸಲು ನಿರ್ಧರಿಸಿದೆ.

ಇಂತಹ ಅಭಿವೃದ್ಧಿ ಹಾಗೂ ಜನತೆಯ ಮೇಲಿನ ದೌರ್ಜನ್ಯ ವನ್ನು ತೀವ್ರವಾಗಿ ಪ್ರತಿರೋಧಿಸಲು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ರಾಜ್ಯದ ರೈತಾಪಿ ಜನತೆಗೆ ಹಾಗೂ ನಾಗರೀಕರಿಗೆ ಕರೆ ನೀಡಿದೆ.

ಜಿ.ಸಿ. ಬಯ್ಯಾರೆಡ್ಡಿ ಅಧ್ಯಕ್ಷರು, ಯು. ಬಸವರಾಜ ಪ್ರಧಾನ ಕಾರ್ಯದರ್ಶಿ, (31–05–2020)

ವಿಟ್ಲಕ್ಕೆ ಜನೌಷಧಿ ಕೇಂದ್ರ ಮಂಜೂರು ಮಾಡುವಂತೆ ಡಿ.ವೈ.ಎಫ್.ಐ. ಆಗ್ರಹ

ಬಂಟ್ವಾಳ ತಾಲೂಕಿನ ವಿಟ್ಲ ಪಟ್ಟಣವು ತಾಲೂಕಿಗೆ ಅರ್ಹತೆ ಇರುವ ಪಟ್ಟಣವಾಗಿದೆ, ಕೆಲವು ವರ್ಷಗಳ ಹಿಂದೆ ಗ್ರಾಮ ಪಂಚಾಯತ್ ನಿಂದ ಪಟ್ಟಣ ಪಂಚಾಯತ್ ಆಗಿ ಮೇಲ್ದರ್ಜೆಗೊಂಡಿರುತ್ತದೆ. ವಿಟ್ಲ ಪಟ್ಟಣವನ್ನು ಆಸುಪಾಸಿನ ಹಲವಾರು ಊರುಗಳ ಜನ ಆಶ್ರಯಿಸಿಕೊಂಡಿರುತ್ತಾರೆ, ಅಲ್ಲದೆ ಹೆಚ್ಚಿನ ಜನವಸತಿ ಇರುವ ಪಟ್ಟಣವಾಗಿದೆ. ಕೇಂದ್ರ ಸರಕಾರವು ಜನರಿಗೆ ಕಡಿಮೆ ಬೆಲೆಗೆ ಔಷಧಿಗಳನ್ನು ದೊರಕಿಸುವ ನಿಟ್ಟಿನಲ್ಲಿ ದೇಶದಾದ್ಯಂತ ಎಲ್ಲಾ ಪಟ್ಟಣಗಳಲ್ಲಿ ಜನೌಷಧಿ ಕೆಂದ್ರಗಳನ್ನು ಮಂಜೂರು ಮಾಡಿರುತ್ತದೆ ಆದರೆ ವಿಟ್ಲದ ಜನತೆಗೆ ಇದರ ಪ್ರಯೋಜನ ಪಡೆಯಲು ಕಷ್ಟಸಾಧ್ಯವಾಗಿದೆ. ವಿಟ್ಲದಲ್ಲಿ ಈಗಾಗಲೇ ಒಂದು ಜನೌಷಧಿ ಕೇಂದ್ರ ಇದ್ದರೂ ಅದು ಖಾಸಗಿ ಮೆಡಿಕಲ್ ಜೊತೆಯಲ್ಲೆ ಇದ್ದು ಇಲ್ಲಿ ಜನರಿಗೆ ಬೇಕಾದ ಔಷಧಿಗಳು ಕೆಲ ಸಂಧರ್ಭಗಳಲ್ಲಿ ಅಭ್ಯವಿರುವುದಿಲ್ಲ. ಇಂದು ಜನರಿಗೆ ದುಭಾರಿ ಬೆಲೆ ನೀಡಿ ಔಷಧಿಗಳನ್ನು ಖರೀಧಿಸಲು ಕಷ್ಟಸಾಧ್ಯವಾಗಿದೆ, ಸರಕಾರವು ಜನರಿಗೆ ಉಪಯೋಗವಾಗುವ ನಿಟ್ಟಿನಲ್ಲಿ ಜನೌಷಧಿ ಯೋಜನೆಯನ್ನು ಜಾರಿಗೊಳಿಸಿದ್ದು ಆದರೆ ವಿಟ್ಲದ ಜನತೆಗೆ ಇದರ ಪ್ರಯೋಜನ ಮರೀಚಿಕೆಯಾಗಿದೆ. ವಿಟ್ಲದ ಜನತೆಗೆ ಕೂಡಾ ಕಡಿಮೆ ಬೆಲೆಗೆ ಔಷಧಿ ದೊರಕುವಂತಾಗಲು ವಿಟ್ಲಪಟ್ಟಣಕ್ಕೆ ಒಂದು ಪ್ರತ್ಯೇಕ ಜನೌಷಧಿ ಕೇಂದ್ರವನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸಿ ಡಿ.ವೈ.ಎಫ್.ಐ. ವಿಟ್ಲ ವಲಯ ಸಮಿತಿ



ವತಿಯಿಂದ ವಿಟ್ಲ ನಾಡಕಛೇರಿ ಉಪ ತಹಶೀಲ್ದಾರರ ಮುಖಾಂತರ ಪ್ರಧಾನ ಮಂತ್ರಿಯವರಿಗೆ ಮನವಿ ಸಲ್ಲಿಸಲಾಯಿತು. ನಿಯೋಗದಲ್ಲಿ ತಾಲೂಕು ಕಾರ್ಯದರ್ಶಿ ತುಳಸೀದಾಸ್ ವಿಟ್ಲ, ವಿಟ್ಲ ವಲಯ ಸಮಿತಿ ಅಧ್ಯಕ್ಷರಾದ ನಿಜಾಂ ಅಳಿಕೆ, ಮುಖಂಡರಾದ ತಮೀಮ್ ಎಂ.ಕೆ., ಜಲೀಲ್ ಅಳಿಕೆ ಮುಂತಾದವರಿದ್ದರು.



ಆನ್ ಲೈನ್ ಶಿಕ್ಷಣದ ಅವಾಂತರ ಸರಿಪಡಿಸಲು ಎಸ್ಎಫ್ಐ ಒತ್ತಾಯಿಸಿ ಪ್ರತಿಭಟನೆ

ಆನ್ ಲೈನ್ ಶಿಕ್ಷಣದ ಅವಾಂತರ ಸರಿಪಡಿಸಲು ಹಾಗೂ ಶುಲ್ಕ ಹೆಚ್ಚಳವನ್ನು ಖಂಡಿಸಿ ಎಸ್.ಎಫ್.ಐ ಮುಖಂಡರು ಗಜೇಂದ್ರಗಡದ ತಹಶೀಲ್ದಾರರ ಕಛೇರಿ ಎದುರು ಪ್ರತಿಭಟನೆ ನಡೆಸಿ ಮಾನ್ಯ ತಹಶೀಲ್ದಾರರ ಮುಖಾಂತರ ಉನ್ನತ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿ ಈ ವೇಳೆ ಮುಖಂಡರಾದ ಗಣೇಶ ರಾಠೋಡ ಮಾತನಾಡಿ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವ ತೀರ್ಮಾನವನ್ನು ಸರಕಾರ ಕೈಗೊಂಡು ಕೊರೋನಾ ಬಂದ ನಂತರ ಲಾಕ್ ಡೌನ್ ಆಗಿ ಶೇ.60 ರಷ್ಟು ಪಠ್ಯವನ್ನ ಹೇಳಬೇಕಾಗಿದ್ದು ಬಾಕಿಯಿದೆ. ಆದ್ದರಿಂದ ಸರಕಾರ ಆನ್ ಲೈನ್ ಮೂಲಕ ಪಾಠ ಮಾಡುವ ಯೋಜನೆಯನ್ನು ಗೊತ್ತುಗುರಿ ಇಲ್ಲದೇ ಅವೈಜ್ಞಾನಿಕವಾಗಿ ಜಾರಿಗೆ ತಂದಿದೆ ಇಂತಹ ಅವೈಜ್ಞಾನಿಕ ನೀತಿಯನ್ನು ಎಸ್.ಎಫ್.ಐ. ಖಂಡಿಸುತ್ತದೆ. ರಾಜ್ಯದ ಈಗಿನ ಪರಿಸ್ಥಿಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಸ್ಮಾರ್ಟ ಪೋನ್‌ನ್ನು ಹೊಂದಿಲ್ಲ. ಅದರಲ್ಲಿ ಮುಖ್ಯವಾಗಿ ಗ್ರಾಮೀಣ ವಿದ್ಯಾರ್ಥಿಗಳು, ಬಡವರು, ವಿದ್ಯಾರ್ಥಿನಿಯರು ಸೇರಿದ್ದಾರೆ. ಇಂಥವರು ಏನು ಮಾಡಬೇಕೆಂದು ಸರಕಾರ ಹೇಳುತ್ತಿಲ್ಲ. ಹಾಗೂ ಸ್ಮಾರ್ಟ ಫೋನ್ ಹೊಂದಿದ್ದರೂ ಕೂಡಾ ನೆಟ್ ಕರೆನ್ಸಿ ಹಾಕಿಸಲು ಆಗದೆ ತೋರಿಕೆಗೆ ಸ್ಮಾಟ ಫೋನ್ ಇಟ್ಟುಕೊಂಡವರ ಸಂಖ್ಯೆ ಜಾಸ್ತಿ ಇದೆ. ಅದರಲ್ಲಿ ಲಾಕ್ ಡೌನ್ ಸಂದರ್ಭದಲ್ಲಿ ಆರ್ಥಿಕ ಸಂಕಷ್ಟಕ್ಕಿ ಒಳಗಾಗಿ ಆಹಾರದ ತೊಂದರೆಯನ್ನು ಎದುರಿಸುತ್ತಿರುವಾಗ ಹೇಗೆ ಬಡವರು ಅಗತ್ಯತೆ ಹೊರತುಪಡಿಸಿ ನೆಟ್ ಕರೆನ್ಸಿ ಹಾಕಿಸಲು ಹೇಗೆ ಸಾಧ್ಯ? ಹಾಗೂ ಸ್ಮಾಟ ಪೋನ್ ಇಲ್ಲದವರ ಗತಿಯೀನು? ನೆಟ್‌ವರ್ಕ ಇಲ್ಲದ ಪ್ರದೇಶದವರ ಗತಿಯೇನು. ಇಂತಹ ಮೂಲಭೂತ ಸಮಸ್ಯೆಗಳನ್ನು ಪರಿಹರಿಸದೆ ಏಕಾಏಕಿ ಆನ್ ಲೈನ್ ಶಿಕ್ಷಣದ ಪದ್ದತಿ ಜಾರಿಗೆ ತಂದಿರುವುದು ಖಂಡನೀಯ ಈ ಸಮಸ್ಯೆಯನ್ನು ಕೂಡಲೇ ಸರ್ಕಾರ ಕೂಡಲೇ ಬಗೆರಿಸಬೇಕು ಎಂದರು.

ನಂತರ ತಾಲ್ಲೂಕಾ ಉಪಾಧ್ಯಕ್ಷರಾದ ಚಂದ್ರು ರಾಠೋಡ ಮಾತನಾಡಿ ಲಾಕ್ ಡೌನ್ ಸಂದರ್ಭದಲ್ಲಿ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದ ನಿಯಮವನ್ನು ಗಾಳಿಗೆ ತೂರಿ ಪಾಲಕರಿಂದ ಹೆಚ್ಚಿನ ಶುಲ್ಕವನ್ನು ಪಡೆದುಕೊಳ್ಳುತ್ತಿವೆ ಅಂತಹ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ ಅವರು ಎಲ್ಲಾ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ರದ್ದು ಮಾಡಬೇಕು ಇಲ್ಲಿದಿದ್ದಲ್ಲಿ ತೀವ್ರತರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಎಸ್.ಎಫ್.ಐ. ಮುಖಂಡರಾದ ಗಣೇಶ ರಾಠೋಡ, ಚಂದ್ರು ರಾಠೋಡ, ಮಾರುತಿ ನಿಡಗುಂದಿ, ಅರ್ಜುನ್ ರಾಠೋಡ, ಶಿವಾನಂದ ಬೋಸ್ಲೆ ಇದ್ದರು.

ಚಂದ್ರು ರಾಠೋಡ

ಕೆಲಸದ ಅವಧಿಯನ್ನು 6 ಗಂಟೆಗೆ ಇಳಿಸಿ ಯುವಜನರಿಗೆ ಉದ್ಯೋಗ ನೀಡಿ



ಕೆಲಸದ ಅವಧಿಯನ್ನು 6 ಗಂಟೆಗೆ ಇಳಿಸಿ, ಯುವಜನರಿಗೆ ಉದ್ಯೋಗ ನೀಡಿ ನಿರುದ್ಯೋಗ ನಿವಾರಣೆಗೆ ಮತ್ತು ಆ ಮೂಲಕ ರಾಜ್ಯದ ಅಭಿವೃದ್ಧಿಗೆ ಕ್ರಮವಹಿಸಬೇಕೆಂದು ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಪೃಥ್ವಿ ಎಂ.ಜಿ. ಸರ್ಕಾರವನ್ನು ಆಗ್ರಹಿಸಿದರು.

ರಾಜ್ಯ ಸರ್ಕಾರವು ಮೇ 22ರಂದು ಜಾರಿ ಮಾಡಿರುವ ಅಧಿಸೂಚನೆಯಲ್ಲಿ 2020ರ ಮೇ 22 ರಿಂದ ಆಗಸ್ಟ್ 21 ರವರೆಗೆ 3 ತಿಂಗಳ ಕಾಲ ರಾಜ್ಯದಲ್ಲಿನ ನೋಂದಾಯಿತ ಕಾರ್ಖಾನೆಗಳಿಗೆ 1948ರ ಕಾರ್ಖಾನೆ ಕಾಯ್ದೆಯ ಕಲಂ 51 ಮತ್ತು 54 ಗಳಿಂದ ವಿನಾಯಿತಿ ನೀಡಿದೆ. ಕಲಂ 54 ರಲ್ಲಿನ ವಾರದ ಕೆಲಸದ ಅವಧಿಯನ್ನು ಹಾಲಿ 48 ಗಂಟೆಗಳಿಂದ 60 ಗಂಟೆಗೆ ಹೆಚ್ಚಳ ಮಾಡಿದೆ ಹಾಗು ಕಲಂ 51 ರಲ್ಲಿನ ದಿನದ ಕೆಲಸದ ಅವಧಿಯನ್ನು ಹಾಲಿ 8 ಗಂಟೆಗಳಿಂದ 10 ಗಂಟೆಗೆ ಹೆಚ್ಚಳ ಮಾಡಿದೆ. ಇದು, ಈ ದುಡಿಮೆಯ ಸಮಯದ ಹೆಚ್ಚಳವು, ಒಂದೆಡೆ ಕಾರ್ಮಿಕರನ್ನು ಮತ್ತಷ್ಟು ಸುಲಿಗೆಗೆ ಒಳಪಡಿಸಿ ಅವರ ವಿಶ್ರಾಂತಿಯ ಸಮಯವನ್ನು ಕಡಿತಗೊಳಿಸಿದರೆ ಇನ್ನೊಂದೆಡೆ, ಈಗಾಗಲೇ ಪೆಡಂಭೂತವಾಗಿ ಬೆಳೆದು ರಾಜ್ಯಕ್ಕೆ ಮಾರಕವಾಗಿರುವ ನಿರುದ್ಯೋಗಿಗಳ ದೊಡ್ಡ ಪಡೆಗೆ ಉದ್ಯೋಗದಲ್ಲಿರುವ ಲಕ್ಷಾಂತರ ಜನರನ್ನು ಮತ್ತೆ ಹೊಸದಾಗಿ ಸೇರ್ಪಡೆಗೊಳಿಸಲಿದೆ ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸಲಿದೆ.

ಜನಸಾಮಾನ್ಯರು ಹಾಗೂ ದುಡಿಯುವ ವರ್ಗ ದೇಶದಾದ್ಯಂತ ಕೋವಿಡ್ – 19ರ ವಿರುದ್ದದ ಹೋರಾಟದ ಸಂಕಷ್ಠದಲ್ಲಿರುವ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು, ಅದರ ಮರೆಯಲ್ಲಿ, ದುಡಿಯುವ ಜನತೆಯನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಿ, ಕಾರ್ಪೋರೇಟ್ ಬಂಡವಾಳದಾರರ ಹಿತ ರಕ್ಷಣೆಯಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ತೊಡಗಿರುವುದು ಇದು ಹೊಸದೇನಲ್ಲ. ಆದರೆ ಇದು ಸಂಕಷ್ಠದಲ್ಲಿರುವವರನ್ನು ಮತ್ತಷ್ಠು ಸಂಕಷ್ಠಕ್ಕೆ ದೂಡಿ, ಕ್ರೌರ್ಯವೆಸಗುತ್ತಿವೆ. ಇದು ಬಿಜೆಪಿ ಸರಕಾರಗಳ ಜನವಿರೋಧಿ ನಿಲುವನ್ನು ತೋರಿಸುತ್ತದೆ.

ನೂರಾರು ವರ್ಷಗಳ ಸುಧೀರ್ಘ ಹೋರಾಟದ ಫಲವಾಗಿ, ಜಾಗತಿಕ ಕಾರ್ಮಿಕ ವರ್ಗ ಗಳಿಸಿರುವ 8 ಗಂಟೆಯ ಕೆಲಸದ ಹಕ್ಕನ್ನು ಗೌರವಿಸುವ ಬದಲು, ರಾಜ್ಯದ ಕಾರ್ಮಿಕರಿಂದ ಅದನ್ನು ಕಸಿದುಕೊಳ್ಳಲಾಗುತ್ತಿದೆ. ಇದು ಹೀಗೆಯೇ ಮುಂದುವರೆದರೆ, ರಾಜ್ಯದ ಕಾರ್ಮಿಕರು ಮತ್ತು ಇನ್ನಿತರೆ ದುಡಿಯುವ ವಿಭಾಗದ ಜನರು ಇಂತಹ ಕಾರ್ಮಿಕ ಹಾಗೂ ಜನ ವಿರೋಧಿ ಬಿಜೆಪಿ ಸರಕಾರದ ವಿರುದ್ಧ ತೀವ್ರ ಸಂಘರ್ಷ ನಡೆಸುವ ದಿನಗಳು ಬರಲಿವೆ ಎಂದು ಸರ್ಕಾರಕ್ಕೆ ಡಿವೈಎಫ್ಐ ಎಚ್ಚರಿಕೆ ನೀಡುತ್ತದೆ.

ರಾಜ್ಯದ ಜನರು, ಕಾರ್ಮಿಕ ಸಂಘಟನೆಗಳು, ಜಪರ ಸಂಘಟನೆಗಳು ಮತ್ತು ವಿರೋಧ ಪಕ್ಷಗಳ ತೀವ್ರ ವಿರೋಧದ ನಡುವೆಯೂ, ಇಂತಹ ಕ್ರಮಕ್ಕೆ ತಮ್ಮ ಸರ್ಕಾರ ನಿರಂತರವಾಗಿ ಮುಂದಾಗುತ್ತಿರುವುದು ರಾಜ್ಯದ ಬಿಜೆಪಿ ಸರ್ಕಾರವು ಪ್ರಜಾಪ್ರಭುತ್ವ ವ್ಯವಸ್ಥೆಗೆ ಗೌರವ ಕೊಡುತ್ತಿಲ್ಲ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದೆ. ಕೋವಿಡ್–19 ಸೋಂಕಿನ ಹಿನ್ನೆಲೆಯಲ್ಲಿ ಕೆಲಸದ ಅವಧಿಯನ್ನು ಕಾರ್ಮಿಕರ ಆರೋಗ್ಯ ಮತ್ತು ಉದ್ಯೋಗಗಳ ರಕ್ಷಣೆಯ ಹಿತ ದೃಷ್ಟಿಯಿಂದ 6 ಗಂಟೆಗೆ ಇಳಿಸಿ, ಯುವಜನರಿಗೆ ಉದ್ಯೋಗ ಸೃಷ್ಟಿಸಿಬೇಕೆಮದು ಮತ್ತು ಹಾಲಿ ಆದೇಶವನ್ನು ವಾಪಾಸು ಪಡೆಯಬೇಕೆಂದು ಈ ಮೂಲಕ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಒತ್ತಾಯಿಸಿದೆ.

ಪ್ರತಿಭಟನೆಯಲ್ಲಿ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಪೃಥ್ವಿ ಎಂ.ಜಿ., ರೈತ ಮುಖಂಡರಾದ ವಸಂತ್ ಕುಮಾರ್., ಟಿಪ್ಪು ಸಂಘರ್ಷ ಸಮಿತಿಯ ಮುಬಷಿರ್ ಅಹಮದ್, ಸಯ್ಯದ್ ಅನ್ಸರ್., ಎಸ್ ಎಫ್ ಐ ಜಿಲ್ಲಾ ಕಾರ್ಯದರ್ಶಿ ರಮೇಶ್., ಎಸ್ ಎಫ್ ಐ ಜಿಲ್ಲಾ ಕಾರ್ಯದರ್ಶಿ ರಮೇಶ್., ಮುಖಂಡರಾದ ರಕ್ಷಿತ., ಬಿಜಿವಿಎಸ್ ನ ಬಿ.ಜಿ ಗೋಪಾಲಕೃಷ್ಣ, ಡಿವೈಎಫ್ಐ ಮುಂಖಂಡಾದ ಶಶಿ ತಟ್ಟೆಕೆರೆ, ನವೀನ್, ಕಾರ್ತಿಕ್ ಅನಂತ ಭರತವಳ್ಳಿ ಮತ್ತಿತರರು ಭಾಗವಹಿಸಿದ್ದರು.

ಕೊವಿಡ್–19 ಲಾಕ್‌ಡೌನ್ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಹಾಸನ ವಿಭಾಗದ ನೌಕರರ ಮತ್ತು ನಿಗಮದ ಸುರಕ್ಷತೆಯ ಸಲುವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಿಐಟಿಯು ಫೆಡರೇಷನ್‌ನ ಮನವಿ

ಮಾನ್ಯ ಹಿರಿಯ ವಿಭಾಗೀಯ
ನಿಯಂತ್ರಣಾಧಿಕಾರಿಗಳು
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಮಾನ್ಯರೆ,

ಕೋವಿಡ್–19 ಲಾಕ್ ಡೌನ್ ಪರಿಣಾಮವಾಗಿ ಹಾಸನ ವಿಭಾಗದ ನೌಕರರು ಮತ್ತು ಸಿಬ್ಬಂದಿ ವರ್ಗ ಅಪಾರವಾದ ತೊಂದರೆಗಳನ್ನು ಅನುಭವಿಸಿದ್ದಾರೆ. ಈಗ ಸರ್ಕಾರ ನಿಗಮದ ವಾಹನಗಳು ಸಂಚರಿಸಲು ಪರಿಮಿತವಾಗಿ ಲಾಕ್‌ಡೌನ್ ತೆರವುಗೊಳಿಸಲು ಅವಕಾಶ ನೀಡಿದೆ. ಕರೋನಾ ಪಾಸಿಟಿವ ಕೇಸ್‌ಗಳು ಹಾಸನ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಸಂದರ್ಭದಲ್ಲಿ ಇಂತಹ ತೀರ್ಮಾನ ತೆಗೆದುಕೊಂಡಿರುವುದರಿಂದ ಆತಂಕಗಳ ನಡುವೆ ವಿಭಾಗದ ಸಾರಿಗೆ ➚

ರಾಜ್ಯದಾದ್ಯಂತ ಸಿಐಟಿಯು ಸಂಘಟನೆಯ 50ನೇ ವಾರ್ಷಿಕೋತ್ಸವ ಆಚರಣೆ



ಹಾಸನ:

ಕೊರೊನಾ ಸಂಕಷ್ಟ ಕಾಲವನ್ನು ದುರುಪಯೋಗಪಡಿಸಿಕೊಂಡು ಕೇಂದ್ರ ಸರ್ಕಾರವು ನಾಚಿಕೆರಹಿತವಾಗಿ ಕಾರ್ಮಿಕ ಕಾನೂನುಗಳನ್ನು ಅಮಾನತು ಮಾಡುವ ಮೂಲಕ ಕಾರ್ಮಿಕರ ಮೇಲಿನ ದೌರ್ಜನ್ಯಕ್ಕೆ ಸರ್ಕಾರವೇ ಬೆಂಬಲ ನೀಡುತ್ತಿರುವುದು ಅಕ್ಷಮ್ಯ ಎಂದು ಸಿಐಟಿಯು ಜಿಲ್ಲಾ ಅಧ್ಯಕ್ಷ ಧರ್ಮೇಶ್ ಆಕ್ರೋಶ ವ್ಯಕ್ತಪಡಿಸಿದರು.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು)ನ 50ನೇ ಸ್ಥಾಪನಾ ದಿನಾಚರಣೆ ಅಂಗವಾಗಿ ಸಿಐಟಿಯು ಕಚೇರಿ ಶ್ರಮದಲ್ಲಿ ಆಯೋಜಿಸಿದ್ದ ಸ್ಥಾಪನಾ ದಿನಾಚರಣೆಯ ಅಧ್ಯಕ್ಷತೆ ವಹಿಸಿದ್ದ ಅವರು, ಕೊರೊನಾ ಇಡೀ ವಿಶ್ವಕ್ಕೆ ಸಂಕಷ್ಟವನ್ನು ತಂದಿದೆ. ಇದಕ್ಕೆ ಕಾರ್ಮಿಕರು ಹೊರತಾಗಿಲ್ಲ. ವಾಸ್ತವವಾಗಿ ಸಾಮಾನ್ಯ ಜನರ ಜೊತೆ ಕಾರ್ಮಿಕರು ಹೆಚ್ಚು ಸಂಕಷ್ಟಕ್ಕೀಡಾಗಿದ್ದಾರೆ. ಇಂತಹ ಸಂಕಷ್ಟಕ್ಕೆ ಸಿಲುಕಿರುವ ಕಾರ್ಮಿಕರ ಸಹಾಯಕ್ಕೆ ಬರಬೇಕಿದ್ದ ಸರ್ಕಾರ ಹಲವು ವರ್ಷಗಳಿಂದ ಹಲವು ಹೋರಾಟಗಳ ಮೂಲಕ ಪಡೆದುಕೊಂಡಿದ್ದ ಕನಿಷ್ಟ ಕೂಲಿ, 8 ಗಂಟೆಗಳ ದುಡಿಮೆ ಮತ್ತಿತರ ಸೌಲಭ್ಯಗಳನ್ನು ಮಾಲೀಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕೇಂದ್ರ ಸರ್ಕಾರ ನಾಚಿಕೆ ಇಲ್ಲದೆ ಅಮಾನತು ಮಾಡುತ್ತಿದೆ. ಇದಕ್ಕೆ ಅಂತರಾಷ್ಟ್ರೀಯ ಕಾನೂನು ಸಂಸ್ಥೆ (ಐಎಲ್ಒ)ವಿರೋಧ ವ್ಯಕ್ತಪಡಿಸಿದೆ ಎಂದರು.

ಐಕ್ಯತೆ ಮತ್ತು ಹೋರಾಟ ಘೋಷಣೆಯ ಮೂಲಕ ಸ್ಥಾಪನೆಯಾದ ಸಿಐಟಿಯುವಿಗೆ ಚಾರಿತ್ರಿಕ ಹೊಣೆಗಾರಿಗೆ ಇದೆ. ತ್ಯಾಗ ಬಲಿದಾನದ ರೋಚಕ ಇತಿಹಾಸವಿದೆ. ಕೊರೊನಾ ಕಾಲಘಟ್ಟದಲ್ಲಿ ಮುಚ್ಚಿಕೊಂಡಿದ್ದ ಶೋಷಣೆ ಹೊರಬಂದಿದೆ. ಕಾರ್ಮಿಕರ ಮತ್ತು ಜನ ಸಾಮಾನ್ಯರ ಶೋಷಣೆ ನಿಲ್ಲಬೇಕಾದರೆ ಉತ್ಪಾದನೆ ಮತ್ತು ವಿನಿಮಯ ಸಾಮಾಜಿಕೀಕರಣ ಆಗಬೇಕು. ಆದರೆ ಇದಕ್ಕೆ ವಿರುದ್ಧವಾಗಿ ಖಾಸಗೀಕರಣ ಮಾಡಲಾಗುತ್ತಿದೆ. ಕಾರ್ಮಿಕರ ಹಕ್ಕುಗಳನ್ನು ದಮನ ಮಾಡಲಾಗುತ್ತಿದೆ. ಇದನ್ನು ಕಾರ್ಮಿಕ ವರ್ಗ ಸಹಿಸುವುದಿಲ್ಲ. ಚಾರಿತ್ರಿಕ ಹೋರಾಟದ ಮೂಲಕ ಪಡೆದುಕೊಂಡ ಹಕ್ಕುಗಳನ್ನು ಉಳಿಸಿಕೊಳ್ಳಲು ಅಂತಹುದೇ ಚಾರಿತ್ರಿಕ ಹೋರಾಟಗಳನ್ನು ನಡೆಸಲು ಹಿಂಜರಿಯುವುದಿಲ್ಲ ಎಂದು ಎಚ್ಚರಿಸಿದರು.

ಸ್ವಾತಂತ್ರ್ಯ ಹೋರಾಟದ ಜೊತೆಜೊತೆಗೆ ದೇಶದಲ್ಲಿ ಕಾರ್ಮಿಕ ಚಳವಳಿಗಳು ಬೆಳೆದಿವೆ. 1908ರ ಜುಲೈನಲ್ಲಿ ಬಾಲಗಂಗಾಧರ ತಿಲಕರ ಬಂಧನ ವಿರೋಧಿಸಿ ಮುಂಬೈನ ಕಾರ್ಮಿಕರ ಹೋರಾಟದ ಮೂಲಕ ಆರಂಭವಾದ ಕಾರ್ಮಿಕರ ಚಳವಳಿ 1920 ಅಕ್ಟೋಬರ್ 30ರಲ್ಲಿ ಲಾಲಾ ಲಜಪತರಾಯ್ ಅಧ್ಯಕ್ಷತೆಯೊಂದಿಗೆ ಎಐಟಿಯುಸಿ ಸ್ಥಾಪನೆ ಮೂಲಕ ಸಂಘಟಿತ ಸ್ವರೂಪ ಪಡೆದುದಲ್ಲದೆ ಸ್ವಾತಂತ್ರ್ಯ ಹೋರಾಟದಲ್ಲಿ ಅಪಾರ ಪಾತ್ರ ವಹಿಸಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಾರ್ಮಿಕ ಕಾನೂನುಗಳ ರಚನೆಯಲ್ಲಿ ಡಾ. ಅಂಬೇಡ್ಕರ್ ಪಾತ್ರ ಗಮನಾರ್ಹವಾದುದು ಎಂದರು.

1970 ಮೇ 30ರಂದು ಸಿಐಟಿಯು ಸ್ಥಾಪನೆಯಾಯಿತು. ಅಂದಿನಿಂದಲೂ ದೇಶದ ಕಾರ್ಮಿಕರ ಐಕ್ಯ ಹೋರಾಟಕ್ಕೆ ನೇತೃತ್ವ ವಹಿಸಿದೆ. ಕಾರ್ಮಿಕರ ಹಕ್ಕುಗಳ ಉಳಿಸಿಕೊಳ್ಳಲು 20 ಕೋಟಿ ಕಾರ್ಮಿಕರನ್ನು ಮುಷ್ಕರಕ್ಕಿಳಿಸಿದ ಹಿರಿಮೆ ಸಿಐಟಿಯುವಿಗಿದೆ ಎಂದರು.

ಕರ್ನಾಟಕ ರಾಜ್ಯ ಕೆಎಸ್ಆರ್ ಟಿಸಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್. ಎಸ್. ಮಂಜುನಾಥ್ ಮಾತನಾಡಿ, ಹೋರಾಟಗಳ ಮೂಲಕ ಪಡೆದುಕೊಂಡ ಕಾರ್ಮಿಕ ಕಾನೂನುಗಳನ್ನು ಸರ್ಕಾರ ಕಸಿದುಕೊಂಡಿವೆ. ಕೋವಿಡ್ ಸಂದರ್ಭದ ದುರುಪಯೋಗ ಮಾಡಿಕೊಂಡು ಕಾರ್ಮಿಕ ಕಾನೂನುಗಳ ಅಮಾನತು ಮಾಡಲಾಗುತ್ತದೆ. ಇವುಗಳನ್ನು ರಕ್ಷಣೆ ಮಾಡಿಕೊಳ್ಳುವ ಅಗತ್ಯವಿದೆ ಎಂದರು.

ಹಿರಿಯ ಕಾರ್ಮಿಕ ಮುಖಂಡ ಜಿ.ಪಿ. ಸತ್ಯನಾರಾಯಣ ಧ್ವಜಾರೋಹಣ ನೆರವೇರಿಸಿದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ ಪ್ರಸ್ತಾವನೆ ಮಾಡಿದರು.

ತೋಟ ಕಾರ್ಮಿಕರ ಸಂಘಟನೆಯ ಸೌಮ್ಯ, ಕೆಪಿಆರ್ಎಸ್ ಜಿಲ್ಲಾಧ್ಯಕ್ಷ ಎಚ್.ಆರ್. ನವೀನ್ ಕುಮಾರ್, ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಎಂ.ಜಿ. ಪೃಥ್ವಿ, ಎಸ್ಎಫ್ಐ ಜಿಲ್ಲಾ ಅಧ್ಯಕ್ಷೆ ಆಶಾ, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ಇಂದಿರಮ್ಮ, ಕೆಎಸ್ಆರ್ಟಿಸಿ ನೌಕರರ ಸಂಘಟನೆ ಜಿಲ್ಲಾ ಕಾರ್ಯದರ್ಶಿ ರವಿ, ಕರ್ನಾಟಕ ರಾಜ್ಯ ಗ್ರಾಪಂ ನೌಕರರ ಸಂಘದ ಕರಿಯಪ್ಪ, ಅಕ್ಷರ ದಾಸೋಹ ನೌಕರರ ಸಂಘದ ಮುಖಂಡರು ಶುಭ ಕೋರಿ ಮಾತನಾಡಿದರು.

ರಾಮದುರ್ಗ:

ಭಾರತದ ಕಾರ್ಮಿಕ ಚಳುವಳಿಯ ಅಗ್ರಗಣ್ಯ ಸಂಘಟನೆ ಸಿಐಟಿಯು ಗೆ ಇದು 50 ನೇ ವರ್ಷ. 1970 ಮೇ 30 ರಂದು ವಿದ್ಯುತ್‌ವಾಗಿ ಆರಂಭಗೊಂಡ ಸಿಐಟಿಯು ಸಂಘಟನೆಗೆ ಮೇ 30 ಕ್ಕೆ 50 ವರ್ಷವಾಗಿದೆ. ಈ ಸಂಭ್ರಮದಲ್ಲಿ ರಾಮದುರ್ಗದ ಕಾರ್ಮಿಕ ಸಂಘಟನೆ ಕಚೇರಿಯಲ್ಲಿ ಸಭೆ ನಡೆದು ಸಿಐಟಿಯು ಸಂಘಟನೆಯ ನಡೆದು ಬಂದ ಹಾದಿಯ ವಿವರವನ್ನು ತಿಳಿಸಲಾಯಿತು.

ಸಿಐಟಿಯು ಆರಂಭದಿಂದಲೂ ವರ್ಗ ಶಾಮೀಲು ನೀತಿಗಳ ವಿರುದ್ದ ಮತ್ತು ವರ್ಗ ಐಕ್ಯತೆಗಾಗಿ ಸಂಘರ್ಷ ನಡೆಸುತ್ತಲೇ ಬಂದಿದೆ. ಐಕ್ಯತೆ ಮತ್ತು ಹೋರಾಟವನ್ನು ತನ್ನ ಘೋಷಣೆಯಾಗಿಸಿಕೊಂಡು ಇಡೀ ಕಾರ್ಮಿಕ ವರ್ಗವನ್ನು ಒಂದಾಗಿಸಲು ಶ್ರಮಿಸಿದೆ. ಸಿಐಟಿಯು ಸೈದ್ಧಾಂತಿಕ ಭಿನ್ನಾಭಿಪ್ರಾಯ ಹಾಗೂ ಆಳುವ ಸರಕಾರದ ಕೈಗೊಂಬೆತನವನ್ನು ಪ್ರತಿಭಟಿಸುತ್ತಲೇ ಪ್ರತೇಕವಾಗಿ ಆಸ್ತಿತ್ವಕ್ಕೆ ಬಂದರೂ ಆಳುವವರ ನೀತಿಗಳನ್ನು ಐಕ್ಯ ಚಳುವಳಿಯಿಂದ ಮಾತ್ರ ಹಿಮ್ಮೆಟ್ಟಿಸಲು ಸಾಧ್ಯ ಎನ್ನುವ ಮೂಲ ಮಂತ್ರಕ್ಕೆ ಬದ್ದವಾಗಿಯೇ ಕೆಲಸ ಮಾಡುತ್ತಾ ಬಂದಿದೆ ಎಂದು ಸಿಐಟಿಯುನ ಜಿಲ್ಲಾ ಕಾರ್ಯದರ್ಶಿ ಜಿ.ಎಂ. ಜೈನೆಖಾನ್ ಸಿಐಟಿಯುನ ಇತಿಹಾಸ ವಿವರಿಸಿದರು.

ರಾಮದುರ್ಗದಲ್ಲಿ ಕಳೆದ 35–40 ವರ್ಷಗಳಿಂದ ಕಾರ್ಮಿಕ ನೇತಾರರಾದ ಶ್ರೀ ವಿ.ಪಿ. ಕುಲಕರ್ಣಿಯವರು ನೇತೃತ್ವದಲ್ಲಿ ಕಾರ್ಮಿರನ್ನು ಸಂಘಟಿಸಿ ಅವರ ಬೇಡಿಕೆಗಳ ಪರವಾಗಿ ಹೋರಾಟ ಮಾಡುತ್ತಾ ಬಂದಿರುವ ಸಿಐಟಿಯು ಸಂಘಟನೆ ಇಡೀ ಜಿಲ್ಲೆಯಲ್ಲಿ ಬಡವರ ಧ್ವನಿಯಾಗಿ, ಬಲಿಷ್ಠ ಸಂಘಟನೆಯಾಗಿ ಬೆಳೆದು ಬಂದಿದೆ. ಪ್ರತಿಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸುವ ಬೆನ್ನಲುಬಾಗಿ ಸಿಐಟಿಯು ಕೆಲಸ ಮಾಡಿದೆ.

50 ನೇ ವಾರ್ಷಿಕೋತ್ಸವ ಸಭೆಯಲ್ಲಿ ಸಿಐಟಿಯು ತಾಲೂಕಾಧ್ಯಕ್ಷ ನಾಗಪ್ಪ ಸಂಗೊಳ್ಳಿ, ಕಾರ್ಯದರ್ಶಿ ವೀರಭದ್ರ ಕಂಪ್ಲಿ, ಅಂಗನವಾಡಿ ಸಂಘಟನೆಯ ಬೋರವ್ವ ತೆಕ್ಕಿ, ವಿಜಯಲಕ್ಷ್ಮೀ ಸಿದ್ದಿಬಾಂವಿ, ಶೋಭಾ ಬೆಳಗಲಿ, ಪಂಚಾಯತ ನೌಕರ ಸಂಘದ ನಿಂಗಮ್ಮ ಕಲ್ಲೂರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ದೇಶದ ಅತಿದೊಡ್ಡ ಕಾರ್ಮಿಕ ಸಂಘಟನೆ ಸಿ.ಐ.ಟಿ.ಯು ಗೆ ಸುವರ್ಣ ಮಹೋತ್ಸವದ ಸಂಭ್ರಮಾಚರಣೆ

ಗಜೇಂದ್ರಗಡ:

ದೇಶದ ಅತಿ ದೊಡ್ಡ ಕಾರ್ಮಿಕ ಸಂಘಟನೆಗೆ ಇಂದು 50 ರ ಸಂಬ್ರಮದ ಹಿನ್ನಲೆಯಲ್ಲಿ ನಗರದ ಸಿ.ಐ.ಟಿ.ಯು ಕಚೇರಿಯಲ್ಲಿ ಧ್ವಜಾರೋಹಣ ಮತ್ತು ಸಂಭ್ರಮಾಚರಣೆಯನ್ನು ಆಚರಿಸಲಾಯಿತು.

ಧ್ವಜಾರೋಹಣ ಮಾಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೃಷಿ ಕೂಲಿ ಕಾರ್ಮಿಕ ಸಂಘಟನೆ ತಾಲೂಕಾ ಅಧ್ಯಕ್ಷರಾದ ಬಾಲು ರಾಠೊಡ ಅವರು ಭಾರತ ದೇಶದಲ್ಲಿ ಕಾರ್ಮಿಕರ ಮೇಲೆ ಬಂಡವಾಳಶಾಹಿಗಳು ನಡೆಸುತ್ತಿದ್ದ ಕ್ರೂರ ಶೋಷಣೆಯ ವಿರುದ್ದ ಕಾರ್ಮಿಕರನ್ನು ಸಂಘಟಿಸಿ ಹೋರಾಟ ನಡೆಸಿ ಕಾರ್ಮಿಕರಿಗೆ ನ್ಯಾಯಕೊಡಿಸಿ ಬದುಕು ಕಟ್ಟಿಕೊಟ್ಟ ಸಂಘಟನೆ ಸಿ.ಐ.ಟಿ.ಯು ಎಂದು ಹೇಳಲು ನನಗೆ ಹೆಮ್ಮೆ ಆಗುತ್ತದೆ ಎಂದರು. ಕಳೆದ 50 ವರ್ಷಗಳಲ್ಲಿ ದುಡಿಯುವ ವರ್ಗದ ಹಿತಾಸಕ್ತಿಗಾಗಿ

ಪುಟ 16 ಕ್ಕೆ



ಕಾರ್ಮಿಕರು ಕೆಲಸ ಮಾಡಬೇಕಾದ ಒತ್ತಡಗಳು ನಿರ್ಮಾಣವಾಗಿವೆ. ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆ ಪ್ರಶ್ನೆಗಳು ಗಂಭೀರವಾಗಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಕೆಳಕಂಡ ಬೇಡಿಕೆಗಳ ಮನವಿಯನ್ನು ಕೆಎಸ್ಆರ್‌ಟಿಸಿ ನೌಕರರ ಸಂಘ (ಸಿಐಟಿಯು) ನೀಡುತ್ತಿದೆ.

1. ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆಯಡಿ ಕೊವಿಡ್–19 ರ ವಿರುದ್ಧ ಸೆಣಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ರೂ.50 ಲಕ್ಷಗಳ ವಿಮೆಯನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿರುವ ಹಿನ್ನಲೆಯಲ್ಲಿ, ವಿಭಾಗದ ಎಲ್ಲಾ ನೌಕರರಿಗೆ ಕಡ್ಡಾಯವಾಗಿ ರೂ.50 ಲಕ್ಷ ವಿಮೆ ಖಾತ್ರಿಯನ್ನು ಒದಗಿಸಬೇಕು.
2. ಎಲ್ಲಾ ಸಾರಿಗೆ ಸಿಬ್ಬಂದಿಗೂ, ವಿಶೇಷವಾಗಿ ಚಾಲಕರು, ನಿರ್ವಾಹಕರು ಮತ್ತು ತಾಂತ್ರಿಕ ಸಿಬ್ಬಂದಿಗೆ ಅತ್ಯುತ್ತಮವಾದ ಗುಣಮಟ್ಟದ ಆರೋಗ್ಯ ಸುರಕ್ಷತಾ ಉಪಕರಣಗಳು, ಸ್ಯಾನಿಟೈಸರ್, ಮುಖಗವಸು (ಫೇಸ್‌ಶೀಲ್ಡ್) ಕೈಗವಸು ಇತ್ಯಾದಿಗಳನ್ನು ಕಡ್ಡಾಯವಾಗಿ ಒದಗಿಸಬೇಕು. ಪ್ರತಿನಿತ್ಯ ಸಾರಿಗೆ ಬಸ್‌ಗಳಿಗೆ ಔಷಧಿ ಸಿಂಪಡಣೆ ಮಾಡುವುದು ಮತ್ತು ಸಿಬ್ಬಂದಿಗಳ ಆರೋಗ್ಯ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಬೇಕು. ಕರ್ತವ್ಯಕ್ಕೆ ಹಾಜರಾಗುತ್ತಿರುವ ಕಾರ್ಮಿಕರಿಗೆ ಸರಿಯಾದ ವೈಯಕ್ತಿಕ ರಕ್ಷಣಾ ಸಲಕರಣೆಗಳು (ಪಿಪಿಇ) ನೀಡಬೇಕು.
3. ಹಾಸನ ಜಿಲ್ಲೆಯಲ್ಲಿ ಕೋವಿಡ್ – 19 ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಕಾರ್ಮಿಕರ ಜೀವ ಮತ್ತು ಜೀವನಗಳ ಸಂಪೂರ್ಣ ರಕ್ಷಣೆ ಹೊಣೆಯನ್ನು ವಿಭಾಗವೇ ಹೊರಬೇಕು. ಕರ್ತವ್ಯಕ್ಕೆ ಹಾಜರಾಗುವ ಕಾರ್ಮಿಕರಿಗೆ ವೈದ್ಯಕೀಯ ಪರೀಕ್ಷೆ ಮತ್ತು ದೃಢೀಕರಣ ಮಾಡುವ ವ್ಯವಸ್ಥೆಯನ್ನು ಆಯಾ ಘಟಕದ ವ್ಯಾಪ್ತಿಯಲ್ಲೇ ಕೈಗೊಳ್ಳಬೇಕು.
4. ವಿಭಾಗದ ಪ್ರತೀ ಬಸ್ ನಿಲ್ದಾಣದಲ್ಲಿಯೂ ಪ್ರತಿಯೊಬ್ಬ ಪ್ರಯಾಣಿಕರನ್ನೂ ಸಾನಿಟೈಸ್ ಮಾಡುವ ಸಲುವಾಗಿ ನಿಲ್ದಾಣದ ದ್ವಾರದಲ್ಲಿ ಸ್ಯಾನಿಟೈಸರ್ ಟನೆಲ್ ಅನ್ನು ಅಗತ್ತವಾಗಿ ತುರ್ತಾಗಿ ಮಾಡಲೇಬೇಕು. ಪ್ರತೀ ಬಸ್ ನಿಲ್ದಾಣದಲ್ಲಿಯೂ ಥರ್ಮಲ್ ಸ್ಕ್ಯಾನಿಂಗ್‌ಗೆ ತರಬೇತಿ ಹೊಂದಿದ ವೈದ್ಯಕೀಯ ಸಿಬ್ಬಂದಿಯನ್ನೇ ನಿಯೋಜಿಸಬೇಕು.
5. ದಿನಾಂಕ: 04–05–2020ರಿಂದ ಬಸ್‌ಗಳು ಮಾರ್ಗದ ಮೇಲೆ ಕಾರ್ಯಾಚರಣೆ ಮಾಡಲು ಸಾಧ್ಯವಾಗದೆ ಕರ್ತವ್ಯವನ್ನು ನೀಡದ ಎಲ್ಲಾ ಚಾಲಕ, ನಿರ್ವಾಹಕ, ಚಾಲಕ ಕಂ ನಿರ್ವಾಹಕ, ತಾಂತ್ರಿಕ ಮತ್ತು ಆಡಳಿತ ಸಿಬ್ಬಂಧಿಯವರಿಗೆ ಪೂರ್ಣಪ್ರಮಾಣದಲ್ಲಿ ಕಾರ್ಯಾಚರಣೆ ಆಗುವವರೆಗೆ ಹಾಜರಾತಿ ನೀಡಬೇಕು. ಈ ಅವಧಿಯಲ್ಲಿ ಯಾವುದೇ ಗೈರು ಹಾಜರಿ ನಮೂದಿಸಬಾರದು ಮತ್ತು ವಯಕ್ತಿಕ ಖಾತೆಯಲ್ಲಿನ ರಜೆಯನ್ನು ಕಡಿತಗೊಳಿಸಬಾರದು.
6. ಶಿಸ್ತು ಪ್ರಕರಣದ ಮೇಲೆ ಅಮಾನತ್ತುಗೊಂಡು 90 ದಿನ ಪೂರ್ಣಗೊಂಡಿರುವ ಎಲ್ಲಾ ನೌಕರರ ಅಮಾನತು ಕೂಡಲೇ ತೆರವುಗೊಳಿಸಬೇಕು.
7. ನಿವೃತ್ತಿಗೊಂಡಿರುವ ನೌಕರರ ಉಪಧನ, ಭವಿಷ್ಯನಿಧಿ ಇತ್ಯಾದಿ ಹಣಕಾಸು ಸೌಲಭ್ಯಗಳನ್ನು ಕೂಡಲೇ ಪಾವತಿಸಲು ಕ್ರಮ ಕೈಗೊಳ್ಳುವುದು.

ಎಚ್.ಎಸ್. ಮಂಜುನಾಥ್ ರಾಜ್ಯ ಪ್ರಧಾನ ಕಾರ್ಯದರ್ಶಿ, ಧರ್ಮೇಶ್ ಗೌರವಾಧ್ಯಕ್ಷರು

(29–05–2020)



ದಿಕ್ಕೆಟ್ಟ ಆರ್ಥಿಕತೆ: ಕಂಗೆಟ್ಟ ಕಾರ್ಮಿಕರು



ಪ್ರೊ. ಟಿ. ಆರ್. ಚಂದ್ರಶೇಖರ

ಇಂದು ಕೊವಿಡ್ 19 ಉಂಟುಮಾಡಿರುವ ಸಾವು–ನೋವುಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಅಷ್ಟೇ ಪ್ರಮಾಣದ–ತೀವ್ರತೆಯ ಸಂಕಟವನ್ನುಟ್ಟು ಮಾಡಿರುವ ಆರ್ಥಿಕ ಕುಸಿತದಿಂದ ಉಂಟಾಗಿರುವ ದುರಂತದ ಬಗ್ಗೆಯೂ ಚರ್ಚೆ ಮಾಡುವ ಅಗತ್ಯವಿದೆ. ರಸ್ತೆ ಬದಿಗಳಲ್ಲಿ, ಹಾದಿ–ಬೀದಿಗಳಲ್ಲಿ, ಬಸ್ಸು–ರೈಲು ನಿಲ್ದಾಣಗಳಲ್ಲಿ ವಲಸೆ ಕಾರ್ಮಿಕರು ಹಾಹಾಕಾರ ಪಡುತ್ತಿದ್ದಾರೆ. ಕೊವಿಡ್‌ನ ಸಂಕಟವು ಉಲ್ಬಣಗೊಳ್ಳಲು 2018–19 ಮತ್ತು 2019–2020ರ ಸಾಲುಗಳಲ್ಲಿನ ಆರ್ಥಿಕ ನಿರ್ವಹಣೆಯ ಮಹಾವೈಫಲ್ಯವೂ ಒಂದು ಕಾರಣವಾಗಿದೆ. ಈ ವೈಫಲ್ಯದಲ್ಲಿ ಅಮಾನ್ಯೀಕರಣದ ಪಾಲೂ ಇದೆ. ಕೊವಿಡ್ ದುರಂತವು ಒಂದು ವಿಕೋಪ. ಆದರೆ ಆರ್ಥಿಕ ಕುಸಿತವೇನಿದೆ ಇದು ಸರ್ಕಾರದ ಸ್ವಯಂಕೃತಅಪರಾಧವಾಗಿದೆ. ಬಂಡವಾಳವೇ ಅಭಿವೃದ್ಧಿ, ಉದ್ದಿಮೆದಾರರೇ ವೆಲ್ತ್ ಕ್ರಿಯೇಟರ್ಸ್, ಧಾರ್ಮಿಕ ವಿಭಜನೆಯೇ ಸೌಹಾರ್ದತೆಯ ದಾರಿ – ಎನ್ನುವ ಆಳುವ ವರ್ಗವು ಕರ್ನಾಟಕದ ಸರಿಸುಮಾರು 130 ಲಕ್ಷ ರೈತಾಪಿವರ್ಗ–ಭೂರಹಿತ ಕೂಲಿಕಾರರನ್ನು ಮತ್ತು 100 ಲಕ್ಷಕ್ಕೂ ಮೀರಿದ ಕಾರ್ಮಿಕ ವರ್ಗವನ್ನು ಆರ್ಥಿಕ, ಸಾಮಾಜಿಕ, ರಾಜಕೀಯ ದುರವಸ್ಥೆಗೆ ದೂಡಿದೆ. ನಮ್ಮ ಆರ್ಥಿಕತೆಯು ಕೊವಿಡ್ ಗದಾಪ್ರಹಾರಬೀಳುವ ಮೊದಲೇ ದಿಕ್ಕೆಟ್ಟಿತ್ತು. ಈಗ ಕಾರ್ಮಿಕ ವರ್ಗವು ಕಂಗೆಟ್ಟ ಪರಿಣಾಮವಾಗಿ ನಮ್ಮ ಆರ್ಥಿಕತೆ ಧೂಳೀಪಟವಾಗಿದೆ.

ದಿಕ್ಕೆಟ್ಟ ಆರ್ಥಿಕತೆಯ ಪುನಶ್ಚೇತನಕ್ಕೆ ಕೇಂದ್ರವು ರೂ. 20 ಲಕ್ಷ ಕೋಟಿ ಪ್ಯಾಕೇಜ್ ಘೋಷಿಸಿದೆ. ಇದರ ಅನಾಟಮಿಯನ್ನು ಸೂಕ್ಷ್ಮವಾಗಿ ಬಿಡಿಸಿ ಪರಿಶೀಲಿಸುವ ಅಗತ್ಯವಿದೆ. ಇದರ ಹಿಂದೆ ರಾಜಕೀಯ ಮೆದುಳು ಕೆಲಸ ಮಾಡಿದೆಯೇ ವಿನಾ ಆರ್ಥಿಕ–ಸಾಮಾಜಿಕ ಬುದ್ಧಿಮತ್ತೆಯ ಪಾತ್ರವಿರುವುದು ಅನುಮಾನ.

ಜಗತ್ತು 1930ರಲ್ಲಿ ಎದುರಿಸಿದ ಮಹಾ ಆರ್ಥಿಕ ಕುಸಿತದ ಸಮಯದಲ್ಲಿ ಸಮಗ್ರ ಬೇಡಿಕೆಯನ್ನು ಬಲಪಡಿಸುವುದರ ಮೂಲಕ ಅಮೆರಿಕ, ಇಂಗ್ಲೇಂಡು ಮುಂತಾದ ದೇಶಗಳು ಆರ್ಥಿಕ ಪುನಶ್ಚೇತನ ಸಾಧಿಸಿಕೊಂಡವು. ಈಗಲೂ ರಾಷ್ಟ್ರೀಯ–ಅಂತಾರಾಷ್ಟ್ರೀಯ ತಜ್ಞರು ಮತ್ತು ಅರ್ಥಶಾಸ್ತ್ರಜ್ಞರು, ಆಡಳಿತಗಾರರು ಹೇಳುತ್ತಿರುವಂತೆ ಇಂದು ನಮ್ಮೆದುರಿಗೆ ಇರುವುದು ಮೂಲತಃ ಸಮಗ್ರ ಬೇಡಿಕೆ ಕುಸಿತ. ಇದನ್ನು ಬಲಪಡಿಸದೆ ಆರ್ಥಿಕ ಪುನಶ್ಚೇತನ ಸಾಧ್ಯವಿಲ್ಲ. ಬಂಡವಾಳ–ಬಂಡವಳಿಗರ ಜಪ ಮಾಡುವುದರಿಂದ ಕಾರ್ಮಿಕರ ಬದುಕು ಹಾಗೂ ಜನರ ಬದುಕು ಸರಿದಾರಿಗೆ ಬರುವುದು ಸಾಧ್ಯವಿಲ್ಲ.

ಈಗ ಪ್ರಧಾನ ಮಂತ್ರಿ ಅವರು ಘೋಷಿಸಿರುವ ರೂ 20 ಲಕ್ಷ ಕೋಟಿ 'ಆತ್ಮನಿರ್ಭರ ಭಾರತ ಅಭಿಯಾನ' ಕಾರ್ಯಕ್ರಮ ಎಷ್ಟರ ಮಟ್ಟಿಗೆ ನಮ್ಮ ದಿಕ್ಕೆಟ್ಟ ಆರ್ಥಿಕತೆಯನ್ನು ಸರಿದಾರಿಗೆ ತರುತ್ತದೆ ಎಂಬುದನ್ನು ನೋಡೋಣ.

1. ಅಭಿವೃದ್ಧಿ ತಜ್ಞರ ಪ್ರಕಾರ ರೂ. 20 ಲಕ್ಷ ಕೋಟಿ ಅಭಿಯಾನ ಅಂಕಿಸಂಖ್ಯೆಯಗಳ ಲೆಕ್ಕಾಚಾರವೇ ವಿನಾ ನಿಜಾರ್ಥದಲ್ಲಿ ಇದರಲ್ಲಿ ನಿಜಸತ್ವ ಕಾಣುತ್ತಿಲ್ಲ.
2. ಕೇಂದ್ರ ಘೋಷಿಸಿರುವ ರೂ. 20 ಲಕ್ಷ ಕೋಟಿಯಲ್ಲಿಈಗಾಗಲೆ ಆರ್.ಬಿ.ಐ ಘೋಷಿಸಿರುವ ರೂ. 8.01 ಲಕ್ಷ ಕೋಟಿ ಸೇರಿದೆ. ಅನೇಕ ಅರ್ಥಶಾಸ್ತ್ರಜ್ಞರ ಪ್ರಕಾರ ಇದು ಆರ್ಥಿಕ ಪುನಶ್ಚೇತನದ ಕ್ರಮವಾಗಲು ಸಾಧ್ಯವಿಲ್ಲ. ಇದು ಕೇವಲ ಉದ್ದಿಮೆಗಳಿಗೆ ಸಾಲ ಸವಲತ್ತು ಸರಳವಾಗಿ ದೊರೆಯುವಂತೆ ಮಾಡಲು ಬ್ಯಾಂಕುಗಳಿಗೆ ಕೇಂದ್ರ ಬ್ಯಾಂಕು ನೀಡಿರುವ ಆಪದ್ಧನ. ಇದನ್ನು ಆತ್ಮನಿರ್ಭರ ಅಭಿಯಾನದಲ್ಲಿ ಸೇರಿಸುವುದು ಪ್ರಶ್ನಾರ್ಹ. ಈ ರೂ. 8.01 ಲಕ್ಷ ಕೋಟಿಯು ಜನರ ಕೈಗೆ ದೊರೆಯುವ ಮೊತ್ತವಲ್ಲ. ಇದು ಕೇಂದ್ರ ಬ್ಯಾಂಕಿನಲ್ಲಿನ ತಿಜೋರಿಯಲ್ಲಿ ಸಾಲ ನೀಡುವ ಬ್ಯಾಂಕುಗಳಿಗೆ ನೀಡಲು ಇಟ್ಟಿರುವ ಹಣ.
3. ಜನರು ಕಟ್ಟಬೇಕಾದ ಮುಂಗಡ ವರಮಾನ ತೆರಿಗೆ ಭಾಗವನ್ನು ಮುಂದೂಡುವ ಕ್ರಮವು ಹೇಗೆ ಆತ್ಮನಿರ್ಭರ ಅಭಿಯಾನವಾಗುತ್ತದೆ? ತೆರಿಗೆದಾರರ ಹಣ ಸ್ವಲ್ಪ ಕಾಲ ಅವರ ಕೈಯಲ್ಲಿರುತ್ತದೆ. ಇವರು ಸಾಮಾನ್ಯ ಅರ್ಥದಲ್ಲಿ 'ಜನರಲ್ಲ'. ಇವರೆಲ್ಲ ವರಮಾನ ತೆರಿಗೆಗಾರರು.
4. ಭವಿಷ್ಯ ನಿಧಿಗೆ ಕಟ್ಟಬೇಕಾದ ನಿಯಮಿತ ಕಂತನ್ನು ಕಡಿಮೆಮಾಡುವುದು ಆತ್ಮನಿರ್ಭರ ಕಾರ್ಯಕ್ರಮ ಹೇಗಾಗುತ್ತದೆ? ಇದು ನಮ್ಮದೇ ಹಣ.
5. ಈ ಅಭಿಯಾನದಲ್ಲಿನ ರೂ. 20 ಲಕ್ಷ ಕೋಟಿಯು ಕೇಂದ್ರವು ಬರಿಸುವ ಹೊಸ ವೆಚ್ಚವಲ್ಲ. ಇದು 2020–2021ರ ಬಜೆಟ್ಟಿನಲ್ಲಿನ ಅನುದಾನದ ಮರುಹೊಂದಾಣಿಕೆಯಾಗಿದೆ ವಿನಾ ಆರ್ಥಿಕ ಪುನಶ್ಚೇತನ ಕಾರ್ಯತಂತ್ರವಲ್ಲ.
6. ಈ ಆತ್ಮನಿರ್ಭರ ಭಾರತ ಅಭಿಯಾನದಲ್ಲಿ ರಾಜ್ಯಗಳ ಪಾತ್ರ–ಪಾಲು ಏನು, ಎಷ್ಟು? ಕೊವಿಡಾಗಲಿ ಅಥವಾ ಆರ್ಥಿಕ ಪುನಶ್ಚೇತನವಾಗಲಿ -- ಇವೆಲ್ಲವೂ ತಳಮಟ್ಟದಲ್ಲಿ ಜನರ ನೆಲೆಯಲ್ಲಿ ರಾಜ್ಯಗಳು ನಿರ್ವಹಿಸಬೇಕಾದ ಕಾರ್ಯ. ಈ ರೂ. 20 ಲಕ್ಷ ಕೋಟಿಯಲ್ಲಿ ನಿಜಾರ್ಥದಲ್ಲಿ ಜನರ ಕೈಗೆ ದೊರೆಯುವ ನೊತ್ತ ಇಲವೇ ಇಲ್ಲ. ಇದ್ದರೂ ಇದು ಕನಿಷ್ಟ..
7. ಸಾಲ ನೀಡುವುದು, ದ್ರವ್ಯದ ಕೊರತೆ ನೀಗುವುದು, ಸಾಲಕ್ಕೆ ಖಾತ್ರಿ ಮುಂತಾದವು ಆತ್ಮನಿರ್ಭರ ಅಭಿಯಾನದಲ್ಲಿರುವ ಕಾರ್ಯಕ್ರಮಗಳು. ಇವುಗಳು ನೆಲಕಚ್ಚಿರುವ ಆರ್ಥಿಕತೆಯನ್ನು ಮೇಲೆತ್ತಬಲ್ಲವೇ? ಆರ್ಥಿಕ ಪುನಶ್ಚೇತನಕ್ಕೆ ಅತ್ಯಗತ್ಯವಾದ ನಗದು ವರ್ಗಾವಣೆ, ವರಮಾನ ನೆರವು ಮತ್ತು ವಿತ್ತೀಯ ಉತ್ತೇಜನದ ಸಂಗತಿಗಳು ಆತ್ಮನಿರ್ಭರ ಅಭಿಯಾನದಲ್ಲಿಲ್ಲ.
8. ನಮ್ಮ ಆರ್ಥಿಕತೆಯನ್ನು ದಿಕ್ಕೆಡಿಸಿದ ಮತ್ತು ನೆಲಕಚ್ಚುವಂತೆ ಮಾಡಿದ ಹಾಗೂ ದುಡಿಮೆಗಾರರ ಬದುಕನ್ನು ಮೂರಾಬಟ್ಟೆ ಮಾಡಿದ 2017–18, 2018–19 ಮತ್ತು 2019–2020ನೆಯ ಸಾಲುಗಳಲ್ಲಿ ಪಾಲಿಸಿಕೊಂಡು ಬಂದ ಉದ್ದಿಮೆದಾರರ ವೈಭವೀಕರಣದ ಮತ್ತು ಕಾರ್ಮಿಕ ವರ್ಗದ ನಿಕೃಷ್ಟೀಕರಣದ ಕಾರ್ಯತಂತ್ರಗಳುಆತ್ಮನಿರ್ಭರ ಕಾರ್ಯಕಮ್ರಗಳಲ್ಲಿ ತುಂಬಿಕೊಂಡಿವೆ. ಇದರಲ್ಲಿ ಸಮಗ್ರ ಬೇಡಿಕೆಯನ್ನು ಬಲಪಡಿಸುವ ತಂತ್ರಗಳಿಲ್ಲ.
9. ಕೇಂದ್ರ ಸರ್ಕಾರವು ನಿಜಾರ್ಥದಲ್ಲಿ ಆರ್ಥಿಕ ಪುನಶ್ಚೇತನಕ್ಕೆ ಬೃಹತ್ ಕಾರ್ಯತಂತ್ರವನ್ನು ಹಮ್ಮಿಕೊಳ್ಳುವುದಕ್ಕೆ ಪ್ರತಿಯಾಗಿ 2020ರಲ್ಲಿ ರೂ. 20 ಲಕ್ಷ ಕೋಟಿ ಅಭಿಯಾನವನ್ನು ವಿಜೃಂಭಿಸಿವುದರಲ್ಲಿ ಕಾಲಕಳೆಯುತ್ತಿರುವಂತೆ ಕಾಣುತ್ತದೆ.
10. ಕಾರ್ಮಿಕರ ಭವಿಷ್ಯ ನಿಧಿಯಿಂದ ಕಾರ್ಮಿಕರು ತಮ್ಮ ಹಣವನ್ನು ಹಿಂದಕ್ಕೆ ಪಡೆಯುವುದು ಸರ್ಕಾರದ ಆತ್ಮ ನಿರ್ಭರ ಅಭಿಯಾನದ ಭಾಗವೇಗಾಗುತ್ತದೆ?

ಜಗತ್ತಿಗೆ ಬೇಕಾದ ಭಾರತೀಯ ತಜ್ಞತೆ ಭಾರತಕ್ಕೆ ಬೇಕಾಗಿಲ್ಲ!

ಏಷ್ಯಾದಲ್ಲಿ ಅರ್ಥಶಾಸ್ತ್ರದಲ್ಲಿ ಮೊದಲ ನೊಬೆಲ್ ಪ್ರಶಸ್ತಿ ಪಡೆದ ಅಮರ್ತ್ಯ ಸೆನ್, ಐಎಮ್‌ಎಫ್‌ನಲ್ಲಿ ಮುಖ್ಯ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್, 2019ರಲ್ಲಿ ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಅಭಿಜಿತ್ ಬ್ಯಾನರ್ಜಿ ಮತ್ತು ಎಸ್ತರ್ ಡುಫ್ಲೋ ದಂಪತಿ. ಜಗತ್ತಿಗೆ 2008ರಲ್ಲಿನ ಆರ್ಥಿಕ ಹಿಂಜರಿತದ ಬಗ್ಗೆ ಮುನ್ನೆಚ್ಚರಿಕೆ ನೀಡಿ ಪ್ರಸಿದ್ಧರಾಗಿರುವ ರಘುರಾಮ್ ರಾಜನ್ ಮುಂತಾದವರೆಲ್ಲ ಭಾರತೀಯರು. ನಮ್ಮ ಆರ್ಥಿಕತೆಯು ತೀವ್ರಸಂಕಷ್ಟದಲ್ಲಿರುವಾಗ ನಮ್ಮವರೇ ಆದ ಜಗತ್ ಪ್ರಸಿದ್ಧ ಅರ್ಥಶಾಸ್ತ್ರಜ್ಞರ ಸಲಹೆ--ಸೂಚನೆ ಪಡೆದು ಆರ್ಥಿಕ ಪುನಶ್ಚೇತನ ಕಾರ್ಯತಂತ್ರ ರೂಪಿಸಬಹುದಿತ್ತು. ರಾಜಕೀಯ ಕಾರಣಕ್ಕೆ ಕೇಂದ್ರವು ಇವರ ಜೊತೆ ಸಮಾಲೋಚನೆ ನಡೆಸುವ ಸೌಜನ್ಯವನ್ನು ತೋರುತ್ತಿಲ್ಲ. ತಮ್ಮ ತುತ್ತೂರಿ ಊದುವ ಆಸ್ಥಾನ ವಂದಿಮಾಗಧರನ್ನಿಟ್ಟುಕೊಂಡು ಕೇಂದ್ರವು ಆರ್ಥಿಕತೆಯನ್ನು ನೆಲಕಚ್ಚುವಂತೆ ಮಾಡಿದೆ.

ದೀಪ ಹಚ್ಚುವುದರಿಂದ, ತಪ್ಪಾಳೆ ತಟ್ಟುವುದರಿಂದ, ಗಂಟೆ–ಜಾಗಟೆ ಬಾರಿಸುವುದರಿಂದ, ಪ್ರಜೆಗಳಿಗೆ ಪತ್ರ ಬರೆಯುವುದರಿಂದ ಆರ್ಥಿಕ ಪುನಶ್ಚೇತನ ಸಾಧ್ಯವಿಲ್ಲ ಮತ್ತು ಕೊವಿಡ್ ಕೂಡ ದೂರಾಗುವುದಿಲ್ಲ.

ಈ ಸರ್ಕಾರವು ಬಡವರಿಗೆ ನೆರವು ನೀಡುವುದಕ್ಕಾಗಿ ಅನೇಕ ಆಕರ್ಷಣೀಯ ಹೆಸರುಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳಿಂದ ಜನರಿಗೆ ಎಷ್ಟೆಷ್ಟು ನೆರವು ದೊರೆಯುತ್ತಿದೆ ಎಂಬುದನ್ನು ಇಲ್ಲಿ ಐದು ನಿದರ್ಶನಗಳ ಮೂಲಕ ತೋರಿಸಲಾಗಿದೆ.

1. ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿಯಲ್ಲಿ 2020ರಲ್ಲಿ 39 ಕೋಟಿ ಜನರಿಗೆ ರೂ. 34800 ಕೋಟಿ ನೀಡಲಾಗಿದೆ ಎಂದು ವರದಿಯಾಗಿದೆ. ಇಲ್ಲಿ ತಲಾ ನೆರವು ರೂ. 893.
2. ಪ್ರಧಾನಮಂತ್ರಿ ಕಿಸಾನ್ ಯೋಜನೆಯಲ್ಲಿ 8.19 ಕೋಟಿ ರೈತರಿಗೆ ರೂ. 16394 ಕೋಟಿ ನೀಡಲಾಗಿದೆ ಎಂಬುದು ವರದಿ. ಇಲ್ಲಿ ತಲಾ ರೈತರಿಗೆ ದೊರೆತ ಹಣ ರೂ. 2000.
3. ಜನ್‌ಧನ್ ಯೋಜನೆಯ ಮೂಲಕ ಮೊದಲನೆಯ ಕಂತಾಗಿ 20.05 ಕೋಟಿ ಮಹಿಳೆಯರಿಗೆ ರೂ, 10025 ಕೋಟಿ ವರ್ಗಾಯಿಸಲಾಗಿದೆ ಎಂಬುದು ವರದಿ. ಇಲ್ಲಿ ತಲಾ ನೆರವು ರೂ. 500
4. ನ್ಯಾಷಿನಲ್ ಸೋಶಿಯಲ್ ಅಸಿಸ್ಟೆನ್ಸ್ ಪ್ರೋಗ್ರಾಮ್‌ನಲ್ಲಿ 2.82 ಕೋಟಿ ಜನರಿಗೆ ರೂ. 1400 ಕೋಟಿ ಹಣ ವೆಚ್ಚ ಮಾಡಲಾಗಿದೆ. ಇಲ್ಲಿನ ತಲಾ ಅನುದಾನ ರೂ. 497.
5. ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯಿಂದ 9.6 ಲಕ್ಷ ಸದಸ್ಯರು ರೂ. 2985 ಕೋಟಿ ತಮ್ಮ ಹಣವನ್ನು ವಾಪಸ್ಸು ಪಡೆದಿದ್ದಾರೆ. ತಲಾವಾರು ಪಡೆದ ಹಣ ರೂ. 310. ಇಲ್ಲಿ ಸರ್ಕಾರದ ಪಾಲೇನಿದೆ ಎಂಬುದು ಅರ್ಥವಾಗುವುದಿಲ್ಲ.

ಜನರಿಗೆ ಬಿಡಿಗಾಸು ಕೊಟ್ಟು ಬೃಹತ್ ಪ್ರಮಾಣದಲ್ಲಿ ನೆರವು ನೀಡಿರುವುದಾಗಿ ವಿತ್ತಮಂತ್ರಿ ಅವರು ಮೆರೆದಾಡುತ್ತಿದ್ದಾರೆ. ಜನರು ತಮ್ಮ ಖಾತೆಯಿಂದ ಹಣ ವಾಪಸ್ಸು ಪಡೆಯುವುದನ್ನು ಸರ್ಕಾರವು ತನ್ನ ಸಾಧನೆಯ ಖಾತೆಯಲ್ಲಿ ಸೇರಿಸಿಕೊಳ್ಳುತ್ತಿದೆ.

ಆತ್ಮನಿರ್ಭರ ಭಾರತ ಅಭಿಯಾನವುಜನರ ಹಸಿವನ್ನು ನೀಗಲಾರದು ಮತ್ತು ಇದುಜನರ ಕೈಗೆ ಕೆಲಸವನ್ನು, ಬೊಕ್ಕಸಕ್ಕೆ ಹಣವನ್ನು ನೀಡುವುದಿಲ್ಲ. ಉದಾ: ವಿತ್ತಮಂತ್ರಿ ಅವರು ರೂ. 20 ಲಕ್ಷ ಕೋಟಿ ಅಭಿಯಾನದ ಮೊದಲ ಕಂತಿನಲ್ಲಿ ರೂ. 5.94 ಲಕ್ಷ ಕೋಟಿ ಕಾರ್ಯಕ್ರಮದ ವಿವರ ನೀಡಿದರು. ಇದು ಮೂರುಮುಕ್ಕಾಲು ವೀಸೆ ಪಾಲು ಎಮ್‌ಎಸ್‌ಎಮ್‌ಈಗಳಿಗೆ, ಎನ್‌ಬಿಎಫ್‌ಸಿಗಳಿಗೆ ಮತ್ತು ಮ್ಯೂಚುಯಲ್ ಫಂಡ್‌ಗಳಿಗೆ ನೀಡುವ ದ್ರವ್ಯದ ನೆರವಾಗಿದೆ. ಇದರಿಂದ ಸಮಗ್ರ ಬೇಡಿಕೆಯು ಹೇಗೆ ಸಶಕ್ತವಾಗುತ್ತದೆ ಎಂಬುದು ಅರ್ಥವಾಗುವುದಿಲ್ಲ. ಇಲ್ಲಿ ಉದ್ಯೋಗ ಸೃಷ್ಟಿಯ ಕಾರ್ಯತಂತ್ರವೂ ಇಲ್ಲ. ಆತ್ಮನಿರ್ಭರ ಕಾರ್ಯಕ್ರಮದಲ್ಲಿ ನೇರವಾಗಿ ಉದ್ಯೋಗ ನೀಡುವ ಮನರೇಗ ಬಿಟ್ಟರೆ ಮತ್ತಾವುದು ಇಲ್ಲ.

ಈ ರೂ. 20 ಲಕ್ಷ ಕೋಟಿ ಆತ್ಮನಿರ್ಭರ ಅಭಿಯಾನದಲ್ಲಿ ನಿಜವಾಗಿ ಬಡವರಿಗೆ, ಹಸಿದವರಿಗೆ, ವಲಸೆ ಕಾರ್ಮಿಕರಿಗೆ, ದುಡಿಯುವ ವರ್ಗಕ್ಕೆ ನೆರವಾಗುವ ಮೊತ್ತ ಸುಮಾರು ರೂ. 40,000 ಕೋಟಿಯಿಂದ ರೂ. 50,000 ಕೋಟಿ ಮೀರುವುದಿಲ್ಲ.


ಬಂಡವಾಳದ ಆರಾಧನೆಯನ್ನು ಕೇಂದ್ರ ನಿಲ್ಲಿಸಬೇಕು

ಎಲ್ಲಿಯವರೆಗೆ ಆಳುವ ಪಕ್ಷವು ಬಂಡವಾಳ–ಬಂಡವಳಿಗರ 'ವ್ಯಸನ'ದಿಂದ ಹೊರಬರುವುದಿಲ್ಲವೋ ಅಲ್ಲಿಯವರೆಗೆ ದಿಕ್ಕೆಟ್ಟ ಆರ್ಥಿಕತೆಯು ಸರಿ ದಾರಿಗೆ ಬರುವುದಾಗಲಿ ಅಥವಾ ಕಂಗೆಟ್ಟ ಕಾರ್ಮಿಕ ವರ್ಗದ ಬವಣೆ ಕೊನೆಗೊಳ್ಳುವುದಾಗಲಿ ಸಾಧ್ಯವಿಲ್ಲ. ಉದಾ: 2019–2020ರ ಕೇಂದ್ರದ ಆರ್ಥಿಕ ಸಮೀಕ್ಷೆಯಲ್ಲಿ ಸಂಪತ್ತಿನ ಉತ್ಪಾದನೆಗೆ 'ಪ್ರೋ ಬ್ಯುಸಿನೆಸ್ ನೀತಿ' ಬೇಕು ಎಂದು ಅದನ್ನು ಬರೆದ ಮುಖ್ಯ ಆರ್ಥಿಕ ಸಲಹೆಗಾರ ಅಬ್ಬರಿಸಿದ್ದಾರೆ. ಇವರು 2018–2019ರ ಆರ್ಥಿಕ ಸಮೀಕ್ಷೆಯಲ್ಲಿ 'ಅಭಿವೃದ್ಧಿ, ಉದ್ಯೋಗಗಳು, ರಫ್ತು ಮತ್ತು ಬೇಡಿಕೆಗಳ ಹಿಂದಿನ ಪ್ರಧಾನ ಚಾಲಕ ಶಕ್ತಿ ಖಾಸಗಿ ಬಂಡವಾಳ' ಎಂದು ಹೇಳಿದ್ದರು. ಈ ಸಲಹೆಗೆ ಪೂರಕವಾಗಿ ಇಂದು ಕೇಂದ್ರವು ಆರ್ಥಿಕತೆಯ ಎಲ್ಲ ರಂಗಗಳನ್ನು ಖಾಸಗಿ ವಲಯಕ್ಕೆ ಅರ್ಪಿಸುವುದಕ್ಕೆ -- ಕೃಷಿ ಸುಧಾರಣೆ, ಕಾರ್ಮಿಕ ಸಂಹಿತೆ, ಬ್ಯಾಂಕಿಂಗ್ ವಿಲೀನ, ಶಿಕ್ಷಣ ಸುಧಾರಣೆ, ಒಂದು ತೆರಿಗೆ, ಒಂದು ಮಾರುಕಟ್ಟೆ ಮುಂತಾದ ಹೆಸರಿನಲ್ಲಿ – ಮುಂದಾಗಿದೆ.

ಈ ಆತ್ಮನಿರ್ಭರ ಅಭಿಯಾನ ಮತ್ತು ಕೇಂದ್ರ ನಿರ್ವಹಿಸುತ್ತಿರುವ ಕೊವಿಡ್ ಕಾರ್ಯತಂತ್ರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದು ರಾಜ್ಯಗಳ ಅಧಿಕಾರನ್ನು ವ್ಯವಸ್ಥಿತವಾಗಿ ಶಿಥಿಲಗೊಳಿಸಿ ಎಲ್ಲ ಅಧಿಕಾರವನ್ನು ಕೇಂದ್ರೀಕರಿಸಿಕೊಳ್ಳುವ ವಿಕೃತ ಕಾರ್ಯದಲ್ಲಿ ನಿರತವಾಗಿದೆ(ನೋಡಿ ಬಾಕ್ಸ್ 2) ಎಂಬುದು ಸ್ಪಷ್ಟವಾಗುತ್ತದೆ. ಇಂದು ದೇಶದಲ್ಲಿ ವೈಫಲ್ಯಗಳ ನಡುವೆ ಕೊವಿಡ್ ಮಹಾ ದುರಂತವು ತಕ್ಕಮಟ್ಟಿಗೆ ನಿಯಂತ್ರದಲ್ಲಿದ್ದರೆ ಮತ್ತು ಆಂಶಿಕವಾಗಿ ಯಶಸ್ವಿಯಾಗಿದ್ದರೆ ಅದರ ಸಂಪೂರ್ಣ ಕೀರ್ತಿಯು 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ಸಲ್ಲಬೇಕು. ಆತ್ಮನಿರ್ಭರ ಭಾರತ ಅಭಿಯಾನದಲ್ಲಿ ರಾಜ್ಯಗಳಿಗೆ ಕೇಂದ್ರವು ನಯಾಪೈಸೆ ನೀಡುತ್ತಿಲ್ಲ. ಭಾರತ ಎನ್ನುವುದು ಕೇಂದ್ರ ಸರ್ಕಾರ ಮಾತ್ರವಲ್ಲ. ನಿಜ ಭಾರತ ಎನ್ನುವುದು ಮತ್ತು 135 ಕೋಟಿ ಜನರ ಭಾರತ ಎನ್ನುವುದು 28 ರಾಜ್ಯ ಮತ್ತು 8 ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಲ್ಲಿ, ಲಕ್ಷಾಂತರ ಗ್ರಾಮೀಣ–ನಗರ ಸ್ಥಳೀಯ ಸರ್ಕಾರಗಳಲ್ಲಿ ನೆಲೆಸಿದೆ. ಆತ್ಮನಿರ್ಭರ ಭಾರತ ಅಭಿಯಾನವು ನಮ್ಮ ಸಂವಿಧಾನದ ಮೂಲ ಗುಣವಾದ ಒಕ್ಕೂಟ ತತ್ವಕ್ಕೆ ವಿಲೋಮವಾಗಿದೆ ಎನ್ನದೆ ಅನ್ಯ ಮಾರ್ಗವಿಲ್ಲ.

ರಾಜ್ಯಗಳ ಯಾಚಕತ್ವದ ಸ್ಥಿತಿ: ಕರ್ನಾಟಕದ ನಿದರ್ಶನ

ಕೇಂದ್ರದ ತೆರಿಗೆಯಲ್ಲಿ ಕರ್ನಾಟಕವು 2019–20ರಲ್ಲಿ ನಿಗದಿಪಡಿಸಿದ್ದ ತನ್ನ ಪಾಲಿನಬಜೆಟ್ ಅಂದಾಜು ರೂ. 39806.26 ಕೋಟಿ. ಆದರೆ ಪರಿಷ್ಕೃತ ಅಂದಾಜಿನ ಪ್ರಕಾರ ರಾಜ್ಯಕ್ಕೆ ದೊರೆತದ್ದು ರೂ. 30919 ಕೋಟಿ. ಇಲ್ಲಿನ ಕಡಿತ ರೂ.11274 ಕೋಟಿ. ರಾಜ್ಯವು 2020–2021ರಲ್ಲಿ ಬಜೆಟ್ಟಿನಲ್ಲಿ ಕೇಂದ್ರ ತೆರಿಗೆಯಲ್ಲಿನ ರಾಜ್ಯದ ಪಾಲು ರೂ. 28591.23 ಕೋಟಿ. ಅಂದರೆ 2019–2020 ರಲ್ಲಿ ಪರಿಷ್ಕೃತ ಬಜೆಟ್ಟಿ ಪ್ರಕಾರ ಕೇಂದ್ರ ತೆರಿಗೆಯಲ್ಲಿ ರಾಜ್ಯದ ಪಾಲು ಎಷ್ಟಿತ್ತೋ ಅದಕ್ಕಿಂತ 2020–2021ರಲ್ಲಿ ಇದು ರೂ.2327.77 ಕೋಟಿ ಕಡಿತ. ಇದೇ ರೀತಿಯಲ್ಲಿ 2019–20ರಲ್ಲಿ ರಾಜ್ಯಕ್ಕೆ ಕೇಂದ್ರದಿಂದ ದೊರೆತ ಅನುದಾನ ರೂ. 19839 ಕೋಟಿ. ಆದರೆ ನಮ್ಮ ಸರ್ಕಾರ ಸ್ವಯಂಮಾಗಿ 2020–2021ರಲ್ಲಿ ನಿಗದಿ ಪಡಿಸಿರುವ ಕೇಂದ್ರದ ಅನುದಾನದ ಮೊತ್ತ ರೂ. 15454 ಕೊಟಿ. ಇಲ್ಲಿನ ಕಡಿತ ರೂ. 4385 ಕೋಟಿ (ಮೂಲ: ಕರ್ನಾಟಕ ಬಜೆಟ್: 2020–2021)





ಸ್ವಾವಲಂಬನೆ ಎಂದರೆ ಆಯಕಟ್ಟಿನ ಕ್ಷೇತ್ರಗಳಲ್ಲಿ ಯಾರ ಮೇಲೂ ಅವಲಂಬಿಸಿರುವುದಿಲ್ಲ ಎಂದೂ ಅರ್ಥ ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಆದರೆ ಅವರ 'ಆತ್ಮನಿರ್ಭರ್' ಪ್ಯಾಕೇಜ್ ಆಯಕಟ್ಟಿನ ಕ್ಷೇತ್ರಗಳಾದ ಖನಿಜಗಳು, ಪೆಟ್ರೋಲಿಯಂ, ಮತ್ತು ರಕ್ಷಣಾ ಉತ್ಪಾದನೆಯನ್ನು ಕೂಡ ವಿದೇಶೀ ಅವಲಂಬನೆಗೆ ಈಡು ಮಾಡಿದೆ. ಆಯಕಟ್ಟಿನ ಕ್ಷೇತ್ರಗಳೂ ಸೇರಿದಂತೆ ಸಾರ್ವಜನಿಕ ವಲಯದ ಪ್ರಮುಖ ಉದ್ದಿಮೆಗಳನ್ನು ಖಾಸಗೀಕರಿಸುವ ಒಂದು ನೀಲನಕಾಶೆಯೇ ಅದರಲ್ಲಿದೆ. ಮೂಲ ಮತ್ತು ಆಯಕಟ್ಟಿನ ಕ್ಷೇತ್ರಗಳಲ್ಲಿ ಒಂದು ಬಲಿಷ್ಟ ಸಾರ್ವಜನಿಕ ವಲಯವಿಲ್ಲದೆ, ಒಂದು ಸುಪುಷ್ಟ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಒಂದು ಬಲಿಷ್ಟ ಸಾರ್ವಜನಿಕ ಶಿಕ್ಷಣ ಜಾಲ ಇಲ್ಲದೆ ಸ್ವಾವಲಂಬನೆ ಸಾಧ್ಯವಿಲ್ಲ. ಸ್ವಾವಲಂಬನೆಯ ಅನ್ವೇಷಣೆಗೆ ದೇಶೀ ಆರ್ ಅಂಡ್ ಡಿ ಮತ್ತು ವೈಜ್ಞಾನಿಕ ಹಾಗೂ ತಂತ್ರಜ್ಞಾನದ ಮುನ್ನಡೆಯ ಬೆಂಬಲ ಬೇಕೇ ಬೇಕು. ಆದರೆ ಇವು ಯಾವುವೂ ಬಿಜೆಪಿ-ಆರೆಸ್ಸೆಸ್‌ನ ಯೋಚನೆಯ ಪರಿಧಿಯಲ್ಲಿ ಇಲ್ಲವೇ ಇಲ್ಲ.



ಸ್ವಾವಲಂಬನೆ ಎಂಬ ಪ್ರಹಸನ

ಪ್ರಕಾಶ ಕಾರಟ್

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಸ್ವಾವಲಂಬನೆಯ ಪರಿಕಲ್ಪನೆಯನ್ನು (ಆತ್ಮನಿರ್ಭರ್ ಭಾರತ್) ಹೈಜಾಕ್ ಮಾಡಿದ್ದಾರೆ. ಇದು ಬೆಳವಣಿಗೆಯ ಪುನರುಜ್ಜೀವನದ ಮತ್ತು 21ನೇ ಶತಮಾನವನ್ನು ಭಾರತದ ಶತಮಾನವಾಗಿಸುವ ದಾರಿ ಎಂದು ಅವರು ಹೇಳಿಕೊಳ್ಳುತ್ತಿದ್ದಾರೆ. ಇಂತಹ ಅಬ್ಬರದ ಮಾತಿನ ಹಿಂದೆ ಒರಟು ವೈರುಧ್ಯ ಮತ್ತು ವಂಚನೆ ಅಡಗಿದೆ. 'ಆತ್ಮನಿರ್ಭರ್ ಭಾರತ್ ಅಭಿಯಾನ್' ಎಂಬ ಅವರ ವಿಶೇಷ ಪ್ಯಾಕೇಜ್ ವಾಸ್ತವತೆಯನ್ನು ಬಯಲಿಗೆ ತಂದಿದೆ- ಅದರ ಉದ್ದೇಶ ಭಾರತದ ಅರ್ಥವ್ಯವಸ್ಥೆ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಅವಲಂಬಿಸುವಂತೆ ಮಾಡುವುದು ಮತ್ತು ಭಾರತದ ನೈಸರ್ಗಿಕ ಸಂಪನ್ಮೂಲಗಳನ್ನು ವಿದೇಶಿ ಮತ್ತು ದೇಶೀ ದೊಡ್ಡ ಬಂಡವಳಿಗರ ಪ್ರಯೋಜನಕ್ಕಾಗಿ ಖಾಸಗೀಕರಿಸುವುದು.

ಪ್ರಧಾನ ಮಂತ್ರಿಗಳು ಈ ಸ್ವಾವಲಂಬನೆಯ ಗುರಿಯನ್ನು ಜೂನ್ 2 ರಂದು ಸಿ.ಐ.ಐ.(ಕಾನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ-ಭಾರತೀಯ ಉದ್ದಿಮೆಯ ಮಹಾಒಕ್ಕೂಟ) ವಾರ್ಷಿಕ ಸಮ್ಮೇಳನದಲ್ಲಿ ಮಾಡಿದ ತನ್ನ ಭಾಷಣದಲ್ಲಿ ಪುನರುಚ್ಚರಿಸಿದ್ದಾರೆ. ಒಂದು ಸ್ವಾವಲಂಬೀ ಭಾರತ ವಿಶ್ವ ಅರ್ಥವ್ಯವಸ್ಥೆಯೊಂದಿಗೆ ಸಂಪೂರ್ಣವಾಗಿ ಸಮಗ್ರೀಕರಣಗೊಂಡಿರುತ್ತದೆ, "ಆದರೆ ಅದು ಆಯಕಟ್ಟಿನ ಕ್ಷೇತ್ರಗಳಲ್ಲಿ ಯಾರ ಮೇಲೂ ಅವಲಂಬಿಸಿರುವುದಿಲ್ಲ ಎಂದೂ ಅರ್ಥ" ಎಂದು ಅವರು ಹೇಳಿದರು.

ಸ್ವಾವಲಂಬನೆಗೆ ಮಾರಕ ಹೊಡೆತಗಳ ಪ್ಯಾಕೇಜ್

ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಅನಾವರಣಗೊಳಿಸಿದ ಪ್ಯಾಕೇಜ್ ತದ್ವಿರುದ್ಧವಾದುದನ್ನೇ ಮಾಡಿದೆ. ಖನಿಜಗಳು ಮತ್ತು ಗಣಿಗಾರಿಕೆ ಕ್ಷೇತ್ರವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆದಿಡಲಾಗಿದೆ. 500 ಖನಿಜ ಬ್ಲಾಕುಗಳನ್ನು ಖಾಸಗಿಯವರಿಗೆ ಹರಾಜು ಮಾಡಲಾಗುವುದು. ಈಗಾಗಲೆ ಸರಕಾರ ಲೋಹ ಮತ್ತು ಲೋಹೇತರ ಕ್ಷೇತ್ರಗಳಲ್ಲಿ ಗಣಿಗಾರಿಕೆಯಲ್ಲಿ ಯಾವ ನಿರ್ಬಂಧವೂ ಇಲ್ಲದೆ 100ಶೇ. ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಗೆ ಅವಕಾಶವನ್ನು ಪ್ರಕಟಿಸಿದೆ. ವಾಣಿಜ್ಯ ಗಣಿಗಾರಿಕೆಯಲ್ಲೂ 100ಶೇ. ಎಫ್‌ಡಿಐಗೆ ಅವಕಾಶವನ್ನು ಪ್ರಕಟಿಸಿದೆ. ಖನಿಜಗಳು ಒಂದು ಆಯಕಟ್ಟಿನ ಕ್ಷೇತ್ರ, ಖಾಲಿಯಾಗುವ ಒಂದು ಸಂಪನ್ಮೂಲ. ಬನ್ನಿ, ಈ ಬೆಲೆಬಾಳುವ ಸಂಪನ್ಮೂಲವನ್ನು ಯಾವುದೇ ನಿರ್ಬಂಧಗಳಿಲ್ಲದೆ ಸೂರೆ ಮಾಡಿ ಎಂದು ಬಹುರಾಷ್ಟ್ರೀಯ ಕಂಪನಿಗಳನ್ನು ಆಹ್ವಾನಿಸುವ ಧೋರಣೆ ಮೋದಿ ಸರಕಾರದ್ದು. ಇದು ಭಾರತದ ಸ್ವಾವಲಂಬನೆಗೆ ಒಂದು ಮಾರಕ ಹೊಡೆತವಾಗಿದೆ.

ಇನ್ನೊಂದು ಆಯಕಟ್ಟಿನ ಕ್ಷೇತ್ರವೆಂದರೆ ರಕ್ಷಣಾ ಉತ್ಪಾದನೆ. ಇಲ್ಲಿ ಈ 'ಆತ್ಮನಿರ್ಭರ್' ಪ್ಯಾಕೇಜ್ ಎಫ್‌ಡಿಐ ಯನ್ನು 49ಶೇ.ದಿಂದ 74ಶೇ.ಕ್ಕೆ ಏರಿಸುತ್ತದೆ, ಜತೆಗೆ ಸಾರ್ವಜನಿಕ ವಲಯದ ರಕ್ಷಣಾ ಉತ್ಪಾದನಾ ಘಟಕಗಳನ್ನು ಕಳಚಿ ಹಾಕುವ ಕ್ರಮಗಳನ್ನು ಕೊಟ್ಟಿದೆ. ಇದಾಗಲೇ ಸರಕಾರ ರಕ್ಷಣಾ ಉತ್ಪಾದನೆಯನ್ನು ಭಾರತೀಯ ಕಾರ್ಪೊರೇಟ್‌ಗಳಿಗೆ ತೆರೆದು ಕೊಟ್ಟಿದೆ. ಇವು ಒಂದು ಆಯಕಟ್ಟಿನ ಭಾಗೀದಾರಿಕೆ ಕಾರ್ಯಕ್ರಮದ ಅಡಿಯಲ್ಲಿ ಒಂದು ವಿದೇಶೀ ಶಸ್ತ್ರಾಸ್ತ್ರ ತಯಾರಕ ಕಂಪನಿಯೊಂದಿಗೆ ಸಹಯೋಗವನ್ನು ಹೊಂದಿರಬೇಕು. ಜತೆಗೆ, ಭಾರತ ಅಮೆರಿಕನ್ ಮಿಲಿಟರಿ ಸಾಧನಗಳ ಅತಿ ದೊಡ್ಡ ಖರೀದಿದಾರರಲ್ಲಿ ಒಂದಾಗಿದೆ. ಈ ಜೀವನ್ಮರಣ ಆಯಕಟ್ಟಿನ ಕ್ಷೇತ್ರದಲ್ಲಿ ಸ್ವಾವಲಂಬನೆಯನ್ನು ಪೋಷಿಸುವ ಬದಲು, ಮೋದಿ ಸರಕಾರದ ಧೋರಣೆಯೆಂದರೆ ದೇಶೀ ತಯಾರಿಕೆಯಲ್ಲೂ, ಆಮದುಗಳಲ್ಲೂ ಅಮೆರಿಕನ್ ಶಸ್ತ್ರಾಸ್ತ್ರ ಕಂಪನಿಗಳ ಮೇಲೆಯೇ ಸಂಪೂರ್ಣವಾಗಿ ಅವಲಂಬಿಸುವುದು.

ಈ 'ಆತ್ಮನಿರ್ಭರ್' ಪ್ಯಾಕೇಜ್ ಆಯಕಟ್ಟಿನ ಕ್ಷೇತ್ರಗಳೂ ಸೇರಿದಂತೆ ಸಾರ್ವಜನಿಕ ವಲಯದ ಪ್ರಮುಖ ಉದ್ದಿಮೆಗಳನ್ನು ಖಾಸಗೀಕರಿಸುವ ಒಂದು ನೀಲನಕಾಶೆಯನ್ನು ರೂಪಿಸಿದೆ. ಅದು ಖಾಸಗೀ ವಲಯ ಆಯಕಟ್ಟಿನ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ಬಿಡಲಾಗುವುದು ಎಂದಿದೆ; ಪ್ರತಿಯೊಂದು ಆಯಕಟ್ಟಿನ ಕ್ಷೇತ್ರದಲ್ಲಿ ಸಾರ್ವಜನಿಕ ವಲಯದ ಘಟಕಗಳಲ್ಲಿ ಕೆಲವನ್ನು ಖಾಸಗೀಕರಿಸಿ ಅವುಗಳ ಸಂಖ್ಯೆಯನ್ನು ಇಳಿಸಲಾಗುವುದು. ಇದರ ಅರ್ಥ ಸ್ವಾವಲಂಬನೆಗೆ ಇರುವ ಅವಕಾಶಗಳನ್ನೂ ಕಳಚಿಹಾಕುವುದು ಎಂದಲ್ಲದೆ ಬೇರೇನೂ ಅಲ್ಲ.

ಸರಕಾರ ಈಗಾಗಲೇ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್(ಬಿಪಿಸಿಎಲ್)ನ ಆಯಕಟ್ಟಿನ ಮಾರಾಟವನ್ನು ಪ್ರಕಟಿಸಿದೆ. ಇದು ದೇಶದ ಎರಡನೇ ಅತಿ ದೊಡ್ಡ ತೈಲ ಶುದ್ಧೀಕರಣ ಕಂಪನಿ. ಸರಕಾರ ಇದರಲ್ಲಿರುವ ತನ್ನ ಪಾಲಿನ 52.98 ಶೇ. ಶೇರುಗಳನ್ನು ಮಾರುತ್ತದೆ. ಹರಾಜಿನ ಶರತ್ತುಗಳನ್ನು ನೋಡಿದರೆ, ಈ ಬಹುಮೂಲ್ಯ ಸಾರ್ವಜನಿಕ ವಲಯದ ಉದ್ದಿಮೆಯ ಹತೋಟಿ ಹೊಂದಲು ಒಂದು ಬಹುದೊಡ್ಡ ವಿದೇಶೀ ತೈಲ ಕಂಪನಿ ಮಾತ್ರವೇ ಹರಾಜಿನಲ್ಲಿ ಭಾಗವಹಿಸಲು ಸಾಧ್ಯ. ಭಾರತಕ್ಕೆ ಪೆಟ್ರೋಲಿಯಂ ಒಂದು ಆಯಕಟ್ಟಿನ ಕ್ಷೇತ್ರ. ಒಂದು ಆಮದು ಅವಲಂಬಿತ ಕ್ಷೇತ್ರದಲ್ಲಿನ ಒಂದು ದೊಡ್ಡ ತೈಲ ಕಂಪನಿಯ ಹತೋಟಿಯನ್ನು ವಿದೇಶಿ ಕಂಪನಿಗೆ ವಹಿಸಿ ಕೊಡುವುದು ನಮ್ಮ ಸಾರ್ವಭೌಮತೆ ಮತ್ತು ಸ್ವಾವಲಂಬನೆಯ ವಿರುದ್ಧ ಒಂದು ದೊಡ್ಡ ಪ್ರಹಾರವೇ ಆಗಿದೆ.

ಒಂದು ಬಲಿಷ್ಟ ಸಂಶೋಧನಾ ಹಾಗು ಅಭಿವೃದ್ಧಿ(ಆರ್ ಅಂಡ್ ಡಿ) ಆಧಾರವನ್ನು ಹೊಂದುವುದು ಒಂದು ಸ್ವಾವಲಂಬೀ ಅರ್ಥವ್ಯವಸ್ಥೆಯನ್ನು ಕಟ್ಟುವಲ್ಲಿನ ನಿರ್ಣಾಯಕ ಆಯಾಮವಾಗಿದೆ. ಭಾರತ ಸ್ವಾವಲಂಬೀ ಬೆಳವಣಿಗೆಯ ಬಗ್ಗೆ ಯೋಚಿಸಲಾದರೂ ಸಾಧ್ಯವಾಗಬೇಕಾದರೆ ಅದು ಆರ್‌ಅಂಡ್ ಡಿ ಯಲ್ಲಿ ಮತ್ತು ಉನ್ನತ ತಂತ್ರಜ್ಞಾನದಲ್ಲಿ ನಮ್ಮ ಸಾಮರ್ಥ್ಯಗಳನ್ನು ಬೆಳೆಸುವ ಮೂಲಕ ಮಾತ್ರವೇ ಸಾಧ್ಯ. ಆದರೆ ಮೋದಿ ಸರಕಾರ ಆರ್‌ಅಂಡ್ ಡಿ ಮತ್ತು ವೈಜ್ಞಾನಿಕ ಸಂಶೋಧನೆಗೆ ಗಮನವನ್ನೇ ಕೊಟ್ಟಿಲ್ಲ. ಈ ರಂಗದಲ್ಲಿ ಅದು ಮಾಡುತ್ತಿರುವ ವೆಚ್ಚ ಜಿಡಿಪಿಯ ಒಂದು ಶೇಕಡಾ ಮಾತ್ರ.

ಸ್ವತಂತ್ರ ವಿದೇಶಾಂಗ ಧೋರಣೆ ಮತ್ತು ಸ್ವಾವಲಂಬನೆ

ಸ್ವಾವಲಂಬನೆಗೆ ಒಂದು ಸ್ವತಂತ್ರ ವಿದೇಶಾಂಗ ಧೋರಣೆ ಮತ್ತು ಅಂತರ್ರಾಷ್ಟ್ರೀಯ ವ್ಯವಹಾರಗಳಲ್ಲಿ ಸಾಮರಿಕ ಸ್ವಾಯತ್ತತೆ ಅಗತ್ಯವಾಗಿದೆ. ಕಳೆದ ಆರು ವರ್ಷಗಳಲ್ಲಿ ಮೋದಿ ಸರಕಾರ ಭಾರತವನ್ನು ಅಮೆರಿಕ ಸಂಯುಕ್ತ ಸಂಸ್ಥಾನದೊಂದಿಗೆ ಒಂದು ಬಿಗಿಯಾದ ಸಾಮರಿಕ ಅಪ್ಪುಗೆಯಲ್ಲಿ ಸಿಲುಕಿಸಿದೆ. ಇಂಡೋ-ಪ್ಯಾಸಿಫಿಕ್ ರಣವ್ಯೂಹವನ್ನು, ಚತುರ್ಪಕ್ಷೀಯ ಮೈತ್ರಿಕೂಟವನ್ನು ಸೇರಿರುವುದು, ಮತ್ತು ಅಮೆರಿಕಾದೊಂದಿಗೆ ಒಂದು ಮಿಲಿಟರಿ ಮೈತ್ರಿಯನ್ನು ಬೆಸೆದಿರುವುದು- ಇವೆಲ್ಲವೂ ವಿದೇಶಾಂಗ ಧೋರಣೆಯಲ್ಲೂ ಮತ್ತು ಆಂತರಿಕ ಧೋರಣೆಯಲ್ಲೂ ಸ್ವತಂತ್ರ ನಿರ್ಧಾರಕ್ಕೆ ಬರುವ ಭಾರತದ ಸಾಮರ್ಥ್ಯಕ್ಕೆ ಕುಂದುಂಟು ಮಾಡಿದೆ. ಬಹುಪಕ್ಷೀಯತೆಯನ್ನು ಛಿದ್ರಗೊಳಿಸುವ ವಿಧ್ವಂಸಕಾರಿ ಪ್ರಯತ್ನಗಳಲ್ಲಿ ಮತ್ತು ಚೀನಾ-ವಿರೋಧಿ ಮೈತ್ರಿಕೂಟವನ್ನು ಕಟ್ಟುವಲ್ಲಿ ಟ್ರಂಪ್‌ರೊಂದಿಗೆ ಕೈಜೋಡಿಸಲು ಭಾರತ ಸಿದ್ಧವಿರುವಂತೆ ಕಾಣುತ್ತಿದೆ. ಟ್ರಂಪ್ ಮತ್ತು ಮೋದಿ ನಡುವಿನ ಇತ್ತೀಚಿನ ಟೆಲಿಫೋನ್ ಸಂವಾದ ಇದರ ಒಂದು ಇಣುಕು ನೋಟವನ್ನು ಕೊಟ್ಟಿದೆ.

ಈ ನಡುವೆ, ಆರೆಸ್ಸೆಸ್ ಅಂಗವಾದ ಸ್ವದೇಶಿ ಜಾಗರಣ್ ಮಂಚ್, ಭಾರತದ ಅರ್ಥವ್ಯವಸ್ಥೆಗೆ ಹಾನಿಯುಂಟು ಮಾಡಿರುವ ಮಹಾಮಾರಿ ಬಂದಿರುವುದು ಒಂದು ಚೀನೀ ವೈರಾಣುವಿನಿಂದ ಎಂಬ ಟ್ರಂಪ್ ಆಪಾದನೆಯನ್ನು ಪ್ರತಿಧ್ವನಿಸುತ್ತ ಚೀನೀ ಸರಕುಗಳನ್ನು ಬಹಿಷ್ಕರಿಸುವ ಒಂದು ಪ್ರಚಾರಾಂದೋಲನವನ್ನು ನಡೆಸುತ್ತಿದೆ. ಆದರೆ ಈಗ ಈ ಮಹಾಮಾರಿಯ ಕೇಂದ್ರ ಬಿಂದು ಅಮೆರಿಕಾವೇ ಆಗಿದ್ದರೂ, ಈ ಬಹಿಷ್ಕಾರ ಅಮೆರಿಕನ್ ಸರಕುಗಳಿಗೆ ಅನ್ವಯಿಸುವುದಿಲ್ಲ!

'ಸ್ವದೇಶಿ'ಯ ಈ ಹಿಂದುತ್ವ ಆವೃತ್ತಿಯಲ್ಲಿ ಸ್ವಾವಲಂಬನೆ ಎಂದರೆ ಅಮೆರಿಕಾದ ಮೇಲೆ ಸಂಪೂರ್ಣ ಅವಲಂಬನೆ!

ಜನತೆಯ ಆಗತ್ಯಗಳಿಗೆ ಆದ್ಯತೆ ಕೊಡಲಾರದ 'ಸ್ವಾವಲಂಬನೆ'!

20 ಲಕ್ಷ ಕೋಟಿ ರೂ.ಗಳ ಪ್ಯಾಕೇಜ್‌ನಲ್ಲಿ ಹೆಚ್ಚುವರಿ ವೆಚ್ಚ ಜಿಡಿಪಿಯ ಒಂದು ಶೇಕಡಾ ಮಾತ್ರವೇ ಆಗಿರುವುದರಿಂದ, ಅದೊಂದು ಟೊಳ್ಳು ಪ್ಯಾಕೇಜ್ ಎಂದು ತೋರಿಸಿಕೊಂಡಿದೆ. ಮೋದಿ ಸರಕಾರ ತನ್ನ ಹಣಕಾಸು ವೆಚ್ಚಗಳನ್ನು ಗಮನಾರ್ಹವಾಗಿ ಹೆಚ್ಚಿಸಲು ನಿರಾಕರಿಸುತ್ತಿರುವುದಕ್ಕೆ, ವಿದೇಶಿ ಹಣಕಾಸು ಬಂಡವಾಳ ಅದನ್ನು ಒಪ್ಪಲಿಕ್ಕಿಲ್ಲ, ಅದರಿಂದಾಗಿ ವಿದೇಶಿ ಬಂಡವಾಳ ಹೊರಗೆ ಹಾರಿ ಹೋಗಬಹುದು ಎಂಬ ಭೀತಿಯೇ ಕಾರಣ. ಭಾರತದ ಜನತೆಯ ಹಸಿವು ಮತ್ತು ದಾರಿದ್ರ್ಯವನ್ನು ನೀಗಿಸಲು ಅತ್ಯಗತ್ಯವಾದ ಆವಶ್ಯಕತೆಗಳನ್ನು ಪೂರೈಸುವ ಬದಲು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಆದೇಶಗಳನ್ನು ಸ್ವೀಕರಿಸುವುದಕ್ಕೇ ಮೋದಿ ಸರಕಾರ ಆದ್ಯತೆ ನೀಡುತ್ತಿದೆ ಎಂಬುದು ಮೋದಿ ಹಾಗೂ ಆರೆಸ್ಸೆಸ್ ಜಪಿಸುತ್ತಿರುವ ಸ್ವಾವಲಂಬನೆ ಮತ್ತು ಸ್ವದೇಶಿ ಘೋಷಣೆಗಳು ಎಷ್ಟು ಮೋಸದಿಂದ ಕೂಡಿವೆ ಎಂಬ ಕಟು ಸತ್ಯದ ಬಗ್ಗೆ ಕಣ್ಣು ತೆರೆಸಬೇಕು.

ಮೂಲ ಮತ್ತು ಆಯಕಟ್ಟಿನ ಕ್ಷೇತ್ರಗಳಲ್ಲಿ ಒಂದು ಬಲಿಷ್ಟ ಸಾರ್ವಜನಿಕ ವಲಯವಿಲ್ಲದೆ, ಒಂದು ಸುಪುಷ್ಟ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಒಂದು ಬಲಿಷ್ಟ ಸಾರ್ವಜನಿಕ ಶಿಕ್ಷಣ ಜಾಲ ಇಲ್ಲದೆ ಸ್ವಾವಲಂಬನೆ ಸಾಧ್ಯವಿಲ್ಲ. ಸ್ವಾವಲಂಬನೆಯ ಅನ್ವೇಷಣೆಗೆ ದೇಶೀ ಆರ್ ಅಂಡ್ ಡಿ ಮತ್ತು ವೈಜ್ಞಾನಿಕ ಹಾಗೂ ತಂತ್ರಜ್ಞಾನದ ಮುನ್ನಡೆಯ ಬೆಂಬಲ ಬೇಕೇ ಬೇಕು. ಆದರೆ ಇವು ಯಾವುವೂ ಬಿಜೆಪಿ-ಆರೆಸ್ಸೆಸ್‌ನ ಯೋಚನೆಯ ಪರಿಧಿಯಲ್ಲಿ ಇಲ್ಲವೇ ಇಲ್ಲ.

ಭಾರತದ ಜನತೆಯ ಹಸಿವು ಮತ್ತು ದಾರಿದ್ರ್ಯವನ್ನು ನೀಗಿಸಲು ಅತ್ಯಗತ್ಯವಾದ ಆವಶ್ಯಕತೆಗಳನ್ನು ಪೂರೈಸುವ ಬದಲು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಆದೇಶಗಳನ್ನು ಸ್ವೀಕರಿಸುವುದಕ್ಕೇ ಮೋದಿ ಸರಕಾರ ಆದ್ಯತೆ ನೀಡುತ್ತಿದೆ ಎಂಬುದು ಮೋದಿ ಹಾಗೂ ಆರೆಸ್ಸೆಸ್ ಜಪಿಸುತ್ತಿರುವ ಸ್ವಾವಲಂಬನೆ ಮತ್ತು ಸ್ವದೇಶಿ ಘೋಷಣೆಗಳು ಎಷ್ಟು ಮೋಸದಿಂದ ಕೂಡಿವೆ ಎಂಬ ಕಟು ಸತ್ಯದ ಬಗ್ಗೆ ಕಣ್ಣು ತೆರೆಸಬೇಕು.



ವ್ಯಂಗ್ಯಚಿತ್ರ: ಪಿ. ಮಹಮ್ಮದ್, ವಾರ್ತಾಭಾರತಿ

ಕರಾಳ ಮೋಡಗಳು ಆವರಿಸಿವೆ



ಭಾರತ ಗಣತಂತ್ರವನ್ನು ಕಳೆದ ಒಂದು ವರ್ಷದಲ್ಲಿ ಆವರಿಸಿರುವ ಕರಾಳ ಮೋಡಗಳು ಇಂತಿವೆ. ನಮ್ಮೆಲ್ಲರ ಪ್ರಯತ್ನದಿಂದ ಈ ಕರಾಳ ಮೋಡಗಳನ್ನು ಹತ್ತಿಕ್ಕಿ, ಬೆಳ್ಳಿರೇಖೆಗಳನ್ನು ವಿಸ್ತರಿಸಿ ಬೆಳಕು ಮೂಡಿಸಬೇಕು.

ಸೀತಾರಾಂ ಯೆಚೂರಿ ಅನು: ಎಂ.ಜಿ. ವೆಂಕಟೇಶ

ಮೋದಿ ಸರ್ಕಾರ ಎರಡನೇಯ ಅವಧಿಯ (ಮೋದಿ 2.0) ಮೊದಲನೇಯ ವಾರ್ಷಿಕವನ್ನು ಆಚರಿಸುತ್ತಿರುವುದನ್ನು 'ಅತಿವಾಸ್ತವವಾದಿ ನಾಟಕ' (ಸರ್‍ರಿಯಲ್) ಎಂದು ಮಾತ್ರ ಕರೆಯಲು ಸಾಧ್ಯ. ಕೊರೊನಾ ಆವರಿಸುವ ಮೊದಲಿನ ಸರ್ಕಾರದ ಅಂಕಿಅಂಶಗಳು, ಆರ್ಥಿಕ ವ್ಯವಸ್ಥೆಯ ಸರ್ವನಾಶದ ಪರಿಣಾಮವಾಗಿ ಕೋಟ್ಯಾಂತರ ಜನರ ಜೀವನದ ನಾಶವನ್ನು ಹೊರಗೆಡುವುತ್ತಿರುವಾಗ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಈ ವರ್ಷವನ್ನು "ಭಾರತ ಪ್ರಜಾಪ್ರಭುತ್ವದಲ್ಲಿ ಸುವರ್ಣ ಅಧ್ಯಾಯ"ವೆಂದು ಬಣ್ಣಿಸಿದ್ದಾರೆ. ಕೊರೋನಾ ಮಹಾಪಿಡುಗು ಮತ್ತು ಏಕಪಕ್ಷೀಯವಾಗಿ ಅಯೋಜಿತವಾಗಿ ಹಠಾತ್ತನೆ ಲಾಕ್‌ಡೌನ್ ಘೋಷಿಸಿದ ಪ್ರಧಾನಮಂತ್ರಿಯವರ ನಡೆ, ಈ ಆರ್ಥಿಕ ನಾಶವನ್ನು ಸರ್ವನಾಶದತ್ತ ಒಯ್ದಿದೆ. ಈ ಲಾಕ್‌ಡೌನ್, ಮಹಾಪಿಡುಗನ್ನು ನಿವಾರಿಸುವ ಪ್ರಯತ್ನಗಳನ್ನು ಬಲಪಡಿಸಿಲ್ಲ ಅಥವಾ ಜನರ ಸಂಕಟವನ್ನು ದೂರಮಾಡುವ ಯಾವ ಪರಿಹಾರವನ್ನೂ ನೀಡಿಲ್ಲ. ಸನ್ನಿವೇಶ ದಿನಕಳೆದಂತೆ ಬಿಗಡಾಯಿಸುತಿದೆ.

ಭಾರತ ಈಗ ಸತ್ಯೋತ್ತರ ಸಮಾಜದ ಕಡೆ ನಡೆದಿರುವಂತೆ ಗೋಚರಿಸುತ್ತಿದೆ. ಆಕ್ಸ್‌ಫರ್ಡ್ ಶಬ್ದಕೋಶ 'ಸತ್ಯೋತ್ತರ'ವನ್ನು ಅರ್ಥೈಸುವುದು ಹೀಗೆ : "ವಾಸ್ತವಿಕ ಸತ್ಯಗಳಿಗಿಂತ ಭಾವನಾತ್ಮಕ ಮತ್ತು ವೈಯುಕ್ತಿಕ ನಂಬಿಕೆಗಳು ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವುದರಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುತ್ತವೆ." ಸರ್ಕಾರದ ಯೋಜನೆಗಳ ಪ್ರಚಾರವು, ಅವುಗಳು ಸತ್ಯದಿಂದ ದೂರವಾದ ಅತಿವಾಸ್ತವವಾದಿ ಲೋಕದಲ್ಲಿರುವಂತೆ ಬಿಂಬಿಸುತ್ತಿದೆ.

ಈ ಸರ್ಕಾರದ ಮೊದಲ ವರ್ಷ ಆಘಾತಕಾರಿಯಾಗಿದೆ. ಆರ್ಥಿಕ ಕುಸಿತ, ಜನರ ಕಾರ್ಪಣ್ಯಗಳ ಹೆಚ್ಚಳಗಳು, ಪ್ರಜಾಪ್ರಭುತ್ವ ಹಕ್ಕು ಮತ್ತು ನಾಗರೀಕ ಹಕ್ಕುಗಳ ಮೇಲೆ ಪ್ರಹಾರಗಳು ಮಾತ್ರವಲ್ಲದೇ, ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಕಿತ್ತು ಹಾಕುವತ್ತ ಸರಕಾರದ ಏಕಚಿತ್ತದ ಒತ್ತು ಆಘಾತಕಾರಿಯಾಗಿದೆ.

ಆಘಾತಗಳಲ್ಲಿ – ಆಯೋಧ್ಯೆಯ ರಾಮಮಂದಿರ ವಿವಾದದ ತೀರ್ಪು, ಪತ್ನಿಯನ್ನು ತ್ಯಜಿಸಿದ ಮುಸ್ಲಿಂ ಪುರುಷರನ್ನು ಮಾತ್ರ ಅಪರಾಧಿಗಳೆಂದು ಪರಿಗಣಿಸುವ ತ್ರಿವಳಿ ತಲಾಖ್ ತೀರ್ಪು–ಎರಡು ತಕ್ಷಣ ಮನಸ್ಸಿಗೆ ಬರುತ್ತವೆ.

ಸಂವಿಧಾನ ವಿಧಿ 370 ರ ರದ್ಧತಿಯ ಮೂಲಕ ಸಂವಿಧಾನದ ಮೇಲಿನ ಪ್ರಹಾರದೊಂದಿಗೆ ಮೋದಿ 2.0 ಆರಂಭವಾಯಿತು. ಒಂದೇ ಏಟಿನಲ್ಲಿ, ಜಮ್ಮು ಮತ್ತು ಕಾಶ್ಮೀರ ರಾಜ್ಯ ಕೇಂದ್ರಾಡಳಿತ ಪ್ರದೇಶಗಳಾಗಿ ಇಬ್ಭಾಗವಾಗಿ ಚರಿತ್ರೆಯ ಪುಟಗಳಿಗೆ ಸೇರಿ ಹೋಯಿತು. ಸ್ವಾತಂತ್ರ್ಯ ಚಳುವಳಿ ಕಾಲದಲ್ಲಿ ಮತ್ತು ಸಂವಿಧಾನದಲ್ಲಿ ಮಾಡಿದ ಆಶ್ವಾಸನೆಗಳಿಗೆ ದ್ರೋಹ ಮಾಡಲಾಯಿತು. ಇದನ್ನು ಜಾರಿ ಮಾಡಿದ ರೀತಿ ಸಂವಿಧಾನಾತ್ಮಕ ರೀತಿ ನೀತಿಗಳ ಅವಹೇಳನವಾಗಿತ್ತು. ರಾಜ್ಯ ವಿಧಾನಸಭೆಯನ್ನು ವಿಸರ್ಜಿಸಿ, 2019 ರ ಚುನಾವಣೆ ಸಂದರ್ಭದಲ್ಲಿ ಚುನಾವಣೆ ನಡೆಸದೆ, ಗಡಿ ಪ್ರದೇಶದ ರಾಜ್ಯಗಳ ಗಡಿಯನ್ನು ಆಯಾ ರಾಜ್ಯಗಳ ಶಾಸನ ಸಭೆಯ ಅಂಗೀಕಾರ ಪಡೆಯದೇ ಮಾರ್ಪಾಡು ಮಾಡಬಾರದೆಂಬ ಸಂವಿಧಾನಾತ್ಮಕ ನಿಬಂಧನೆಯನ್ನು ಗಾಳಿಗೆ ತೂರಲಾಯಿತು. ಶಾಸನ ಸಭೆಯಿಲ್ಲದಿರುವಾಗ ಕೇಂದ್ರದಿಂದ ನೇಮಕಗೊಂಡ ರಾಜ್ಯಪಾಲ ಶಾಸನ ಸಭೆಗೆ ಪರ್ಯಾಯವೆನ್ನುವಂತೆ ಅವರ ಸಮ್ಮತಿ ಪಡೆಯಲಾಯಿತು. ಎಲ್ಲವೂ ರಹಸ್ಯವಾಗಿ ನಡೆಯಿತು.

ನಂತರ ಧರ್ಮಾಧಾರಿತ ನಾಗರೀಕ ಹಕ್ಕು ಕೊಡುವ ಮೂಲಕ ಸಂವಿಧಾನವನ್ನು ಉಲ್ಲಂಘಿಸುವ ಪೌರತ್ವ (ತಿದ್ದುಪಡಿ) ಕಾಯಿದೆ – ಸಿ.ಎ.ಎ – ಬಂದಿತು. ಸಂವಿಧಾನವು ಜಾತಿ, ಧರ್ಮ, ಭಾಷೆ, ಲಿಂಗ ಅಥವಾ ಯಾವುದೇ ತಾರತಮ್ಯವಿಲ್ಲದೆ ಸಮಾನತೆಯನ್ನು ಸಾರುತ್ತದೆ. ಸಿ.ಎ.ಎ ಗೆ ಪೂರಕವಾಗಿ ಎನ್.ಪಿ.ಆರ್. (ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್) ಮತ್ತು ಅದರ ಆಧಾರದಲ್ಲಿ ಎನ್‌ಆರ್‌ಸಿ (ರಾಷ್ಟ್ರೀಯ ಪೌರತ್ವ ರಿಜಿಸ್ಟರ್) ತರಲು ಸರಕಾರ ಹೊರಟಿತ್ತು. ಇದು ಹೆಚ್ಚಾಗಿ ಮುಸ್ಲಿಂ ಅಲ್ಪಸಂಖ್ಯಾತರನ್ನೇ ಗುರಿಯಾಗಿಸುವ ವ್ಯಾಪಕ ಉಪಕ್ರಮದ ಭಾಗವಾಗಿ ಕೋಮುವಾದಿ ಧ್ರುವೀಕರಣವನ್ನು ತೀವ್ರಗೊಳಿಸುವ ಪ್ರಯತ್ನ ಎಂದು ಹಲವರು ಸರಿಯಾಗಿಯೇ ಪರಿಭಾವಿಸಿದರು. ಪ್ರಧಾನವಾಗಿ ಈ ಎರಡು ಮತ್ತು ಇತರ ಆಘಾತಗಳು, ಜಾತ್ಯಾತೀತ, ಪ್ರಜಾಪ್ರಭುತ್ವ ಗಣತಂತ್ರ ಭಾರತವನ್ನು ಅಸಹಿಷ್ಣು ಧರ್ಮಾಧಾರಿತ ಹಲವರನ್ನು ಹೊರಗಿಡುವ ಫಾಸಿಸ್ಟ್ ಭಾರತವಾಗಿ ಬದಲಾಯಿಸುವ ಬಿಜೆಪಿಯ ಸೈದ್ಧಾಂತಿಕ ಸ್ಫೂರ್ತಿಯಾದ ಆರ್.ಎಸ್.ಎಸ್‌ನ ಕಾರ್ಯಸೂಚಿಯ ಭಾಗವಾಗಿವೆ. ಪೌರತ್ವದ ಹಕ್ಕು ಸಂವಿಧಾನ ಕೊಟ್ಟಿರುವ ಮೂಲಭೂತ ಹಕ್ಕು. ಒಂದು ಬಾರಿ ಒಂದು ಜನವಿಭಾಗದ ಜನ ಇದನ್ನು ಕಳೆದುಕೊಂಡರೆ, ಎಲ್ಲ ಹಕ್ಕುಗಳನ್ನೂ ಸ್ವಾತಂತ್ರಗಳನ್ನು ಕಳೆದುಕೊಳ್ಳುತ್ತಾರೆ.


ಆಘಾತಗಳ ಜತೆಯಲ್ಲೇ ಸಂವಿಧಾನಾತ್ಮಕ ಸಂಸ್ಥೆಗಳ ಶಕ್ತಿ ಹರಣ ನಡೆದಿದೆ. ಮೇಲಿನ ವಿಷಯಗಳಿಗೆ ಸುಪ್ರೀಂಕೋರ್ಟ್ ಕದ ತಟ್ಟಿರುವಾಗಲೂ ಅವುಗಳನ್ನು ಅದು ಕೈಗೆತ್ತಿಕೊಂಡಿಲ್ಲ, ಪರಿಶೀಲಿಸಲಿಲ್ಲ ಅಥವಾ ಆ ಕುರಿತು ನಿರ್ಧರಿಸಿಲ್ಲ. ಸುಪ್ರಿಂಕೋರ್ಟ್‌ಗೆ, ದ್ವೇಷ ರಾಜಕಾರಣ ಬಿತ್ತುತ್ತಿರುವ ಪತ್ರಕರ್ತನ ಮುಂಜಾಗರೂಕತಾ ಜಾಮೀನು, ಸಂವಿಧಾನ ರಕ್ಷಣೆಗಿಂತ ಆದ್ಯತೆಯದ್ದಾಯಿತು. ನನ್ನ ನೆನಪಿನ ಆಳದಿಂದ ಹೆಕ್ಕಿ ತೆಗೆದು ಹೇಳುವುದಾದರೆ, ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯನ್ನು ಅನುಸರಿಸುತ್ತಿದ್ದಾಗ ಅಪರಾಧಿಗಳು ಬಿಡುಗಡೆಯಾಗುತ್ತಿದ್ದ ಮತ್ತು ದೌರ್ಜನ್ಯಕ್ಕೆ ಒಳಗಾದವರು ಶಿಕ್ಷೆಗೆ ಗುರಿಯಾಗುತ್ತಿದ್ದ ಚಿತ್ರಗಳು ಕಣ್ಣ ಮುಂದೆ ಬರುತ್ತವೆ. ಸುಪ್ರಿಂಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ಗೋಪಾಲಗೌಡರು ಹೇಳುವಂತೆ, ಕುಖ್ಯಾತ ಎಡಿಎಂ ಜಬಲ್‌ಪುರ ಪ್ರಕರಣದಲ್ಲಿ ಹೇಳಿದಂತೆ, ತುರ್ತುಪರಿಸ್ಥಿತಿಯ ಅವಧಿಯಲ್ಲಿ ರಾಜಕೀಯವಾಗಿ ಯಾರಿಂದಲಾದರೂ ತೊಂದರೆಯೆನಿಸಿದರೆ ಅವರನ್ನು ವಿಚಾರಣೆಗೆ ಗುರಿಪಡಿಸದೆ ಕಸ್ಟಡಿಗೆ ತೆಗೆದುಕೊಳ್ಳಬಹುದಾಗಿದ್ದ ಪರಿಸ್ಥಿತಿಯೇ, ಈಗ ಇದೆ.

ಸಂವಿಧಾನದ ನಾಲ್ಕು ಆಧಾರ ಸ್ಥಂಭಗಳಾದ ಜಾತ್ಯಾತೀತ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಒಕ್ಕೂಟ ವ್ಯವಸ್ಥೆ ಮತ್ತು ಆರ್ಥಿಕ ಸ್ವಾವಲಂಬನೆ ಎಲ್ಲವೂ ಅಘಾತಕ್ಕೆ ಒಳಗಾಗಿವೆ. ತೀಕ್ಷ್ಣಗೊಳ್ಳುತ್ತಿರುವ ಕೋಮುವಾದಿ ಧ್ರುವೀಕರಣ ಮತ್ತು ಜಾತ್ಯಾತೀತತೆಯನ್ನು ಹಾಳುಗೆಡವುದಕ್ಕೆ ಪೂರಕವಾಗಿ, ಯಾವುದೇ ಭಿನ್ನಮತವನ್ನು ಹತ್ತಿಕ್ಕಲು ಕರಾಳ ಶಾಸನಗಳಾದ ರಾಜದ್ರೋಹದ ಕಾಯಿದೆ, ಯು.ಎ.ಪಿ.ಎ, ಎನ್.ಎಸ್.ಎ ಬಳಕೆಯಾಗುತ್ತಿವೆ.


ಚುನಾಯಿತ ರಾಜ್ಯ ಸರಕಾರಗಳನ್ನು ಬದಿಗೊತ್ತಿ, ಕೇಂದ್ರ ಸರಕಾರದಲ್ಲಿ ಎಲ್ಲಾ ಅಧಿಕಾರಗಳನ್ನು ಕೇಂದ್ರೀಕರಿಸುವ ಪ್ರವೃತ್ತಿ ಹೆಚ್ಚುತ್ತಿದ್ದು, ಒಕ್ಕೂಟ ವ್ಯವಸ್ಥೆಯನ್ನು ನಿರಾಕರಿಸಲಾಗುತ್ತಿದೆ. ಬಲಿಷ್ಠ ಏಕಾಧಿಕಾರದ ಸರ್ಕಾರವು, ಆರ್.ಎಸ್.ಎಸ್ ಯೋಜನೆಯನ್ನು ಸಾಕಾರಗೊಳಿಸುವುದನ್ನು ಸುಗಮಗೊಳಿಸಲು ಬೇಕಾದ ಅಧಿಕಾರಗಳ ಕೇಂದ್ರೀಕರಣವನ್ನು ಸಾಧಿಸಲು ಮಾತ್ರವಲ್ಲ, ಕಣ್ಗಾವಲು–ಆಧಾರಿತ 'ಭದ್ರತಾ ಪ್ರಭುತ್ವ'ವನ್ನು ಸೃಷ್ಟಿಸಲೂ ಅಗತ್ಯ.

ಬಹುದೊಡ್ಡ ಪ್ರಚಾರದ 'ಭವ್ಯವಾದ' 20 ಲಕ್ಷ ಕೋಟಿ ರೂ. ಆರ್ಥಿಕ ಪ್ಯಾಕೇಜು, ಸ್ವಾವಲಂಬನೆಯ ಹೆಸರಲ್ಲಿ ಭಾರತದ ಸ್ವ–ಶರಣಾಗತಿಯ ನೀಲನಕ್ಷೆ ಬಿಟ್ಟರೆ ಬೇರೇನಲ್ಲ. ವಾಸ್ತವದಲ್ಲಿ ವಿದೇಶಿ ಮತ್ತು ರಾಷ್ಟ್ರೀಯ ಕಾರ್ಪೋರೇಟ್‌ಗಳಿಗೆ ಗರಿಷ್ಟ ಲಾಭಗಳಿಸಲು ಅದು ಸಹಾಯ ಮಾಡುತ್ತದೆ. ಒಟ್ಟು ಪರಿಣಾಮವೆಂದರೆ, ಈಗಾಗಲೇ ಅಪಾಯಕಾರಿ ಮಟ್ಟ ತಲುಪಿರುವ, ಆರ್ಥಿಕ ಅಸಮಾನತೆ ಇನ್ನಷ್ಟು ವ್ಯಾಪಕವಾಗುವುದು.

ಭಾರತ ಗಣತಂತ್ರವನ್ನು ಕಳೆದ ಒಂದು ವರ್ಷದಲ್ಲಿ ಆವರಿಸಿರುವ ಕರಾಳ ಮೋಡಗಳು ಇಂತಿವೆ. ನಮ್ಮೆಲ್ಲರ ಪ್ರಯತ್ನದಿಂದ ಈ ಕರಾಳ ಮೋಡಗಳನ್ನು ಹತ್ತಿಕ್ಕಿ, ಬೆಳ್ಳಿರೇಖೆಗಳನ್ನು ವಿಸ್ತರಿಸಿ ಬೆಳಕು ಮೂಡಿಸಬೇಕು.



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್

ಅಯೋಜಿತ ಲಾಕ್‌ಡೌನ್–ಅಯೋಜಿತ ಸಡಿಲಿಕೆ ಹೊಣೆ ಜಾರಿಸಿಕೊಂಡ ಮೋದಿ ಸರಕಾರ

ಜೂನ್ 16 ಅಖಿಲ ಭಾರತ ಪ್ರತಿಭಟನಾ ದಿನಾಚರಣೆ



ಅಯೋಜಿತವಾಗಿ, ಏಕಪಕ್ಷೀಯವಾಗಿ ಲಾಕ್‌ಡೌನನ್ನು ಹಾಕಿದ ಮೋದಿ ಸರಕಾರ ಈ ಅವಧಿಯನ್ನು ಮಹಾಮಾರಿಯನ್ನು ಎದುರಿಸಲು ಬೇಕಾಗುವ ಆರೋಗ್ಯ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳಲೂ ಬಳಸಲಿಲ್ಲ, ಅತ್ತ ಲಾಕ್‌ಡೌನಿನ ದುಷ್ಪರಿಣಾಮಗಳಿಂದಾಗಿ ಕಂಗಾಲಾದ ಜನಗಳಿಗೆ ಪರಿಹಾರವನ್ನೂ ಒದಗಿಸಲಿಲ್ಲ. ಈಗ ಅಷ್ಟೇ ಅಯೋಜಿತವಾಗಿ ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸುತ್ತ ಜನಗಳನ್ನು ಮಹಾಮಾರಿಯ ಎದುರು ಅವರ ಪಾಡಿಗೆ ಬಿಟ್ಟು ತೆಪ್ಪಗಾಗುವಂತೆ ಕಾಣುತ್ತಿದೆ, ಎಲ್ಲ ಹೊಣೆಗಳನ್ನೂ ರಾಜ್ಯ ಸರಕಾರಗಳ ಹೆಗಲಿಗೆ ದಾಟಿಸಿದೆ. ಸಾಲದ್ದಕ್ಕೆ, ತಾನು ಮಾತ್ರ ಕೋಮು ಧ್ರುವೀಕರಣದ ಮತ್ತು ನವ–ಉದಾರವಾದಿ ಆರ್ಥಿಕ ಧೋರಣೆಗಳನ್ನು ಅನುಸರಿಸುವ ತನ್ನ ಆಕ್ರಮಣಕಾರೀ ಅಜೆಂಡಾವನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸುವುದರಲ್ಲೇ ತೊಡಗಿದೆ. ಇದನ್ನು ಪ್ರತಿಭಟಿಸಲೇ ಬೇಕಾಗಿದೆ ಎಂದು ಜೂನ್ 2ರಂದು ಸಭೆ ಸೇರಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ನಿರ್ಧರಿಸಿದೆ.

ರಾಷ್ಟ್ರೀಯ ಲಾಕ್ಡೌನಿನ ಪರಿಸ್ಥಿತಿಗಳಲ್ಲಿ ಮೊದಲ ಬಾರಿಗೆ ವೀಡಿಯೋ ಸಮ್ಮೇಳನದ ಮೂಲಕ ಸಭೆ ಸೇರಿದ ಪೊಲಿಟ್‌ಬ್ಯುರೊ ಜೂನ್ 16ರಂದು ನಾಲ್ಕು ಪ್ರಮುಖ ಬೇಡಿಕೆಗಳನ್ನು ಎತ್ತಿಕೊಂಡು ಅಖಿಲ ಭಾರತ ಪ್ರತಿಭಟನಾ ದಿನಾಚರಣೆ ನಡೆಸಬೇಕು ಎಂದು ಕರೆ ನೀಡಿದೆ. ಜತೆಗೇ ಈಗಾಗಲೇ ಪಕ್ಷದ ಸದಸ್ಯರು, ಘಟಕಗಳು ನಡೆಸುತ್ತಿರುವ ಪರಿಹಾರ ಕಾರ್ಯಗಳನ್ನು ಮುಂದುವರೆಸಬೇಕು ಎಂದೂ ಅದರ ಕರೆ ನೀಡಿದೆ.

ಪ್ರಸಕ್ತ ಸನ್ನಿವೇಶವನ್ನು ಆಮೂಲಾಗ್ರವಾಗಿ ಚರ್ಚಿಸಿದ ಸಭೆಯ ನಂತರ ಪ್ರಕಟಿಸಿರುವ ಹೇಳಿಕೆಯ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

1. ಆದಾಯ ತೆರಿಗೆ ತೆರುವ ಮಿತಿಗಳ ಹೊರಗಿರುವ ಎಲ್ಲ ಕುಟುಂಬಗಳಿಗೆ ತಿಂಗಳಿಗೆ ರೂ. 7500 ರಂತೆ ಆರು ತಿಂಗಳ ವರೆಗೆ ನಗದು ವರ್ಗಾವಣೆ.
2. ಪ್ರತಿವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ. ಯಂತೆ ಆರು ತಿಂಗಳ ವರೆಗೆ ಉಚಿತ ಆಹಾರಧಾನ್ಯಗಳ ವಿತರಣೆ.
3. ಮನರೇಗದ ಅಡಿಯಲ್ಲಿ ಹೆಚ್ಚಿಸಿದ ಕೂಲಿಗಳೊಂದಿಗೆ ಕನಿಷ್ಟ 200 ದಿನಗಳ ಉದ್ಯೋಗ. ನಗರದ ಬಡವರಿಗೂ ಉದ್ಯೋಗ ಖಾತ್ರಿ ಯೋಜನೆಯ ವಿಸ್ತರಣೆ. ನಿರುದ್ಯೋಗಿ ವ್ಯಕ್ತಿಗಳಿಗೆ ತಕ್ಷಣವೇ ಒಂದು ನಿರುದ್ಯೋಗ ಭತ್ಯೆಯ ಪ್ರಕಟಣೆ.
4. ರಾಷ್ಟ್ರೀಯ ಆಸ್ತಿಗಳ ಲೂಟಿಯನ್ನು, ಸಾರ್ವಜನಿಕ ವಲಯದ ಖಾಸಗೀಕರಣವನ್ನು ಮತ್ತು ಕಾರ್ಮಿಕ ಕಾನೂನುಗಳನ್ನು ರದ್ದು ಮಾಡುವುದನ್ನು ನಿಲ್ಲಿಸಬೇಕು.

ಕೇರಳ ಮಾದರಿ

ಕೇರಳ ರಾಜ್ಯ ಕೊವಿಡ್–19 ಮಹಾಮಾರಿಯನ್ನು ಮೇಲ್ಪಂಕ್ತಿಯಾಗುವ ರೀತಿಯಲ್ಲಿ ಎದುರಿಸಿದೆ. ಇದಕ್ಕಾಗಿ ಆ ರಾಜ್ಯದ ಜನತೆಯನ್ನು ಮತ್ತು ಎಲ್‌ಡಿಎಫ್ ಸರಕಾರವನ್ನು ಪೊಲಿಟ್‌ಬ್ಯುರೊ ಪ್ರಶಂಸಿಸಿದೆ. ಸೋಂಕಿತರ ಸಂಖ್ಯೆಯಲ್ಲಿ ಏರಿಕೆಯನ್ನು ತಡೆಗಟ್ಟಿ ಅದರ ಗ್ರಾಫನ್ನು ಸಮತಟ್ಟುಗೊಳಿಸಿದ ನಂತರ ಈಗ ಅವರು ರಾಜ್ಯದೊಳಕ್ಕೆ ವಿದೇಶಗಳಲ್ಲಿ ಮತ್ತು ದೇಶದ ವಿವಿಧೆಡೆಗಳಲ್ಲಿ ಇದ್ದ ಕೇರಳೀಯರು ಮರಳುತ್ತಿರುವುದರಿಂದ ಎದ್ದಿರುವ ಎರಡನೇ ಅಲೆಯ ಸವಾಲನ್ನು ಎದುರಿಸಲು ಪ್ರಯತ್ನಗಳನ್ನು ತೀವ್ರಗೊಳಿಸುತ್ತಿದ್ದಾರೆ. 'ಕೇರಳ ಮಾದರಿ' ಈಗ ಅಂತರ್‍ರಾಷ್ಟ್ರೀಯವಾಗಿ ಪ್ರಶಂಸೆಗೆ ಪಾತ್ರವಾಗಿದೆ. ಆದರೆ ಭಾರತದಲ್ಲಿ ಕೇಂದ್ರ ಸರಕಾರ ಈ ಅನುಭವದಿಂದ ಪಾಟ ಕಲಿಯಲು ನಿರಾಕರಿಸುತ್ತಿದೆ.

ಮೋದಿ ಸರಕಾರದ ವಿಫಲತೆ

ತದ್ವಿರುದ್ಧವಾಗಿ, ಕೇಂದ್ರ ಸರಕಾರ ಈಗ ಮಹಾಮಾರಿಯನ್ನು ಎದುರಿಸುವಲ್ಲಿ ಭಾರತೀಯ ಜನತೆಯನ್ನು ಅವರ ಪಾಡಿಗೆ ಬಿಟ್ಟು ತೆಪ್ಪಗೆ ಕೂತಿರುವಂತೆಯೇ ಆಗಿದೆ. ಒಂದು ಅಯೋಜಿತ, ಏಕಪಕ್ಷೀಯ ಲಾಕ್‌ಡೌನನ್ನು ಇದ್ದಕ್ಕಿದ್ದಂತೆ ಘೋಷಿಸಿದ ಪ್ರಧಾನ ಮಂತ್ರಿ ಮೋದಿ, ಅದನ್ನು ಸಡಿಲಗೊಳಿಸುವ ವರೆಗಿನ ಅರವತ್ತು ದಿನಗಳ ಅವಧಿಯನ್ನು ಮಹಾಮಾರಿಯನ್ನು ಎದುರಿಸಲು ಬೇಕಾಗುವ ಆರೋಗ್ಯ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳಲೂ ಬಳಸಲಿಲ್ಲ, ಅತ್ತ ಲಾಕ್‌ಡೌನಿನ ಪರಿಣಾಮಗಳನ್ನು ಎದುರಿಸಲು ಯಾವುದೇ ಸಮಯ ಸಿಗದಾದ ಕ್ರೌರ್ಯದಿಂದ ಕಂಗಾಲಾದ ಜನಗಳಿಗೆ ಪರಿಹಾರವನ್ನೂ ಒದಗಿಸಲಿಲ್ಲ. ರಾಜ್ಯಸರಕಾರಗಳೊಡನೆ ಸಮಾಲೋಚನೆ ನಡೆಸದೆ ಏಕಪಕ್ಷೀಯವಾಗಿ ಲಾಕ್‌ಡೌನನ್ನು ಘೋಷಿಸಿದ ನಂತರ, ಅದರ ದುಷ್ಪರಿಣಾಮಗಳ ಹೊರೆಯನ್ನು, ನಿರ್ದಿಷ್ಟವಾಗಿ ದೇಶಾದ್ಯಂತ ಕೋಟ್ಯಂತರ ವಲಸೆ ಕಾರ್ಮಿಕರು ತಮ್ಮ ಕುಟುಂಬಗಳೊಂದಿಗೆ ಹೊರಟಿರುವ ಮಾನವೀಯ ಪ್ರಶ್ನೆಯ ಬೃಹತ್ ಹೊರೆಯನ್ನು, ರಾಜ್ಯ ಸರಕಾರಗಳ ಹೆಗಲ ಮೇಲೆ ದಾಟಿಸಲಾಗಿದೆ. ಮೋದಿ ಪ್ರಧಾನ ಮಂತ್ರಿಯ ಹೆಸರಿನಲ್ಲಿ ಒಂದು ಖಾಸಗಿ ಟ್ರಸ್ಟ್ ನಿಧಿಯಲ್ಲಿ ಸಂಗ್ರಹಿಸುತ್ತಿರುವ ಸಾವಿರ ಕೋಟಿ ರೂ.ಗಳನ್ನು ರಾಜ್ಯಗಳಿಗೆ ಕೊಡಲು ನಿರಾಕರಿಸುತ್ತಿದ್ದಾರೆ.

ನಿರ್ಬಂಧಗಳ ಸಡಿಲಿಕೆಯೂ, ಮತ್ತೆ ಒಂದು ಅಯೋಜಿತ ಶೈಲಿಯಲ್ಲೇ ನಡೆಯುತ್ತಿದೆ, ಕೇಂದ್ರ ಸರಕಾರ ತನ್ನ ಹೊಣೆ ಜಾರಿಸಿಕೊಂಡು ನಿರ್ಧಾರಗಳನ್ನು ರಾಜ್ಯ ಸರಕಾರಗಳಿಗೆ ಬಿಟ್ಟಿದೆ. ಮಹಾಮಾರಿಯ ಹರಡಿಕೆಯನ್ನು ಅಥವ ಸಾವುಗಳ ಸಂಖ್ಯೆಯನ್ನು ತಡೆಗಟ್ಟುವ ಅಥವ ಹತೋಟಿಯಲ್ಲಿಡುವ ಬದಲು ಲಾಕ್‌ಡೌನ್ ಅವಧಿಯಲ್ಲಿ ಸಂಖ್ಯೆಗಳು ತೀವ್ರವಾಗಿ ಏರಿವೆ. ಮಾರ್ಚ್ 24, 2020ರಂದು ಭಾರತದಲ್ಲಿ 564 ಸೋಂಕಿತ ಕೇಸುಗಳಿದ್ದವು, 10 ಸಾವುಗಳು ಸಂಭವಿಸಿದ್ದವು. ಎರಡು ತಿಂಗಳ ನಂತರ ಮೇ 24, 2020ರಂದು 74560 ಮಂದಿ ಇನ್ನೂ ಸೋಂಕುಗ್ರಸ್ತರಾಗಿದ್ದರು, 3867 ಸಾವುಗಳು ಆಗಿದ್ದವು. ಜೂನ್ 2ರಂದು ಈ ಸಂಖ್ಯೆಗಳು 2,07,615 ಮತ್ತು 5,815 ಆಗಿವೆ.

ರಾಷ್ಟ್ರೀಯ ಲಾಕ್‌ಡೌನಿನ ಅವಧಿಯಲ್ಲಿ ಮಹಾಮಾರಿಯನ್ನು ಎದುರಿಸಲು ಮತ್ತು ಜನಗಳಿಗೆ ಪರಿಹಾರ ಒದಗಿಸಲು ಏಕಚಿತ್ತದಿಂದ ಗಮನ ಕೇಂದ್ರೀಕರಿಸುವುದರ ಬದಲು ಕೇಂದ್ರ ಸರಕಾರ ಕೋಮು ಧ್ರುವೀಕರಣದ ಮತ್ತು ನವ–ಉದಾರವಾದಿ ಆರ್ಥಿಕ ಧೋರಣೆಗಳನ್ನು ಅನುಸರಿಸುವ ತನ್ನ ಆಕ್ರಮಣಕಾರೀ ಅಜೆಂಡಾವನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸುವುದರಲ್ಲೇ ತೊಡಗಿತು. ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದ ಮೇಲೆ ಗುರಿಯಿಟ್ಟಿರುವುದು, ಸಿಎಎ, ಎನ್‌ಆರ್‌ಸಿ ಮತ್ತು ಎನ್‌ಪಿಆರ್ ವಿರುದ್ಧ ಶಾಂತಿಯುತ ಪ್ರತಿಭಟನೆಗಳನ್ನು ನಡೆಸಿದವರ ಬಂಧನ ಮತ್ತು ಜೈಲುವಾಸ 'ಮತ್ತು ರಾಜದ್ರೋಹದ ಕಾಯ್ದೆ, ಯುಎಪಿಎ ಹಾಗೂ ಎನ್‌ಎಸ್‌ಎ ಯಂತಹ ಕರಾಳ ಕಾಯ್ದೆಯಗಳ ಅಡಿಯಲ್ಲಿ ಎಲ್ಲ ಭಿನ್ನಾಭಿಪ್ರಾಯಗಳ ದಮನವನ್ನು ಪೊಲಿಟ್‌ಬುರೊ ಖಂಡಿಸಿದೆ. ಈ ಲಾಕ್‌ಡೌನ್ ಅವಧಿಯನ್ನು ಕೇಂದ್ರ ಸರಕಾರ ಎಲ್ಲ ಅಧಿಕಾರಗಳನ್ನು ತನ್ನ ಕೈಗಳಲ್ಲಿ ಕೇಂದ್ರೀಕರಿಸಲು ಬಳಸಿಕೊಳ್ಳುತ್ತಿದೆ, ಈ ಮೂಲಕ ನಮ್ಮ ಸಂವಿಧಾನದ ಒಂದು ಮೂಲ ಲಕ್ಷಣವಾದ ಒಕ್ಕೂಟತತ್ವವನ್ನು ಸಂಪೂರ್ಣವಾಗಿ ನಿರಾಕರಿಸುತ್ತಿದೆ.

ಹಣಕಾಸು ಪ್ಯಾಕೇಜ್

ಜೂನ್ 1, 2020ರಂದು ಕೇಂದ್ರ ಸರಕಾರ ಈ ಹಿಂದೆ ಪ್ರಕಟಿಸಿದ 20 ಲಕ್ಷ ಕೋಟಿ ರೂ.ಗಳ ಪ್ಯಾಕೇಜ್ ಅಲ್ಲದೆ ಇನ್ನಷ್ಟು ಹಣಕಾಸು ಪ್ಯಾಕೇಜುಗಳನ್ನು ಪ್ರಕಟಿಸಿದೆ. ಆ 20 ಲಕ್ಷ ಕೋಟಿ ರೂ.ಗಳ ಪ್ಯಾಕೇಜ್ ಈ ಮೊದಲೇ ಪ್ರಕಟಿಸಿದ್ದ ಸ್ಕೀಮುಗಳ ಮರು ಪೊಟ್ಟಣವಾಗಿದೆಯಷ್ಟೇ. ಇದರಲ್ಲಿ ಸರಕಾರ ಮಾಡುವ ಹೆಚ್ಚುವರಿ ವೆಚ್ಚಗಳ ಮೊತ್ತ ಸುಮಾರಾಗಿ ನಮ್ಮ ಜಿಡಿಪಿಯ 1 ಶೇ.ದಷ್ಟು ಮಾತ್ರ. ಇದು ಸಾಲಗಳನ್ನು ಲಭ್ಯಗೊಳಿಸುವ ಪ್ಯಾಕೇಜಷ್ಟೇ ಆಗಿದೆ, ಪರಿಹಾರ ಒದಗಿಸಬಹುದಾದ ಅನುದಾನಗಳ ಸರಕಾರದ ವೆಚ್ಚಗಳೇನೂ ಇದರಲ್ಲಿಲ್ಲ.

ಈ ಹಣಕಾಸು ಪೊಟ್ಟಣ ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ಜಾರಿಯ ಒಂದು ನೀಲ ನಕಾಶೆ, ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳ ಲಾಭಗಳನ್ನು ಗರಿಷ್ಟಗೊಳಿಸಲು ಹೊಸ ಮಾರ್ಗೋಪಾಯಗಳನ್ನು ಕಲ್ಪಿಸುವ, ಎಲ್ಲ ರಾಷ್ಟ್ರೀಯ ಆಸ್ತಿಗಳನ್ನು ರಭಸದಿಂದ ಖಾಸಗೀಕರಿಸುವ ಮತ್ತು ಅರ್ಥವ್ಯವಸ್ಥೆಯ ಎಲ್ಲ ವಲಯಗಳನ್ನೂ ಎಫ್‌ಡಿಐಗೆ ತೆರೆದು ಕೊಡುವ ನೀಲ ನಕಾಶೆಯಾಗಿದೆ.

ಇದರೊಂದಿಗೇ ಕಾರ್ಮಿಕ ಕಾನೂನುಗಳ ಮೇಲೆ ಒಂದು ದುಷ್ಟ ದಾಳಿ ಬಂದಿದೆ. ಕನಿಷ್ಟ ಹತ್ತು ರಾಜ್ಯಗಳಲ್ಲಿ, ರಾಷ್ಟ್ರೀಯ ಲಾಕ್‌ಡೌನಿನ ನೆಪವೊಡ್ಡಿ ಈ ಕಾನೂನುಗಳನ್ನು ಸುಮಾರಾಗಿ ನಿರರ್ಥಕಗೊಳಿಸಲಾಗಿದೆ. ಇದನ್ನು ಜನಗಳು ದೃಢವಾಗಿ ಪ್ರತಿರೋಧಿಸುತ್ತಾರೆ.

ಇತ್ತೀಚಿನ ಪ್ರಕಟಣೆಗಳು: ಜೂನ್ 1 ರಂದು ಇನ್ನಷ್ಟು ಕಹಳೆ–ತುತ್ತೂರಿಗಳೊಂದಿಗೆ ಸರಕಾರ ಕೆಲವು ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಗಳನ್ನು ಪ್ರಕಟಿಸಿದೆ. ಭತ್ತಕ್ಕೆ ಪ್ರಕಟಿಸಿರುವ ಏರಿಕೆ ಕಳೆದ ವರ್ಷದ ಎಂಎಸ್‌ಪಿಗೆ ಹೋಲಿಸಿದರೆ ಕೇವಲ 2ಶೇ. ಇದೇ ರೀತಿ ಉಳಿದ ಎಲ್ಲ ಸರಕುಗಳಿಗೂ. ಇದು ಕಳೆದ ಒಂದು ವರ್ಷದಲ್ಲಿ ಉತ್ಪಾದನಾ ವೆಚ್ಚದಲ್ಲಿ ಆಗಿರುವ ಏರಿಕೆಗಿಂತಲೂ ಬಹಳ ಕಡಿಮೆಯೇ ಇದೆ. ಇದು ರೈತಾಪಿಗಳಿಗೆ ಯಾವುದೇ ಪರಿಹಾರವನ್ನು ಒದಗಿಸುವುದಿರಲಿ, ವಾಸ್ತವವಾಗಿ ಅವರನ್ನು ಇನ್ನಷ್ಟು ಸಾಲಭಾರದತ್ತ ತಳ್ಳುತ್ತದೆ. ಸರಕಾರವು ಮತ್ತೆ ಎಂಎಸ್‌ಎಂಇ ವಲಯಕ್ಕೆ ಸಾಲವನ್ನು ಲಭ್ಯಗೊಳಿಸುವ ಹಲವು ಕ್ರಮಗಳನ್ನು ಪ್ರಕಟಿಸಿತು. ಸಾಲಗಳು ಪರಿಹಾರಗಳಲ್ಲ. ಎಂಎಸ್‌ಎಂಇಗಳಿಗೆ ಈಗ ಬೇಕಾಗಿರುವುದು ಪರಿಹಾರ. ಹಿಂದಿನ 20 ಲಕ್ಷದ ಪ್ಯಾಕೇಜಿನಲ್ಲಿ ಈ ಮೊದಲು ರಿಜರ್ವ್ ಬ್ಯಾಂಕ್ ಎಂಎಸ್‌ಎಂಇಗಳಿಗೆ ಪ್ರಕಟಿಸಿದ 5.2 ಲಕ್ಷ ಕೋಟಿ ರೂ.ಗಳ ಸಾಲಗಳೂ ಸೇರಿದ್ದವು. ಇದನ್ನು 2010ರಲ್ಲಿ ಇದ್ದುದಕ್ಕಿಂತ ಕಡಿಮೆ ಬಡ್ಡಿದರದಲ್ಲಿ ಕೊಡುವುದಾಗಿ ಹೇಳಲಾಗಿತ್ತು. ಆದರೆ ಈ ಸಾಲಗಳನ್ನೇ ಪಡೆಯುವವರಿಲ್ಲ. ವಾಣಿಜ್ಯ ಬ್ಯಾಂಕುಗಳು ಈ ಹಣವನ್ನು ರಿಜರ್ವ್ ಬ್ಯಾಂಕಿನಲ್ಲಿ ಮರು ಠೇವಣಿ ಇಡಲೇ ಬೇಕಾಗಿ ಬಂದಿದೆ. ಇದು ಸರಳ ಸಂಗತಿ. ಎಂಎಸ್‌ಎಂಇಗಳು ಉತ್ಪಾದಿಸುವ ಸರಕುಗಳನ್ನು ಖರೀದಿಸುವ ಸಾಮರ್ಥ್ಯ ಜನಗಳಿಗೆ ಸಿಗದಿದ್ದರೆ, ಅರ್ಥವ್ಯವಸ್ಥೆಯ ಪುನಶ್ಚೇತನ ಸಾಧ್ಯವಿಲ್ಲ. ಜನಗಳ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸದೆ ಎಷ್ಟೇ ಸಾಲಗಳನ್ನು ಕೊಟ್ಟರೂ ಅರ್ಥವ್ಯವಸ್ಥೆಯ ಪುನಶ್ಚೇತನ ಆಗಲಾರದು. ಇದು ನೇರ ಅನುದಾನಗಳ ಮೂಲಕವಷ್ಟೇ ಸಾಧ್ಯ. ಇದನ್ನು ಮೋದಿ ಸರಕಾರ ಮಾಡಲಾರದು, ತಿರಸ್ಕಾರಭರಿತ ಅಸಡ್ಡೆಯೊಂದಿಗೆ ಹೀಗೆ ಮಾಡಲು ಅದು ನಿರಾಕರಿಸುತ್ತಿದೆ.

ಅರ್ಥವ್ಯವಸ್ಥೆ ನಜ್ಜುಗುಜ್ಜಾಗಿದೆ


ಕೊವಿಡ್–19 ಮಹಾಮಾರಿ ನಮ್ಮ ಮೇಲೆ ಎರಗುವ ಮೊದಲೇ ಭಾರತೀಯ ಅರ್ಥವ್ಯವಸ್ಥೆ ಆಗಲೇ ಪತನದತ್ತ ಸಾಗಿತ್ತು, ಹಿಂಜರಿತದತ್ತ ವೇಗವಾಗಿ ಇಳಿಯುತ್ತಿತ್ತು. 2019–20ರ ಜಿಡಿಪಿ ಬೆಳವಣಿಗೆ ದರದ ಅಂಕಿ–ಅಂಶಗಳನ್ನು ಮೇ 29ರಂದು ಅಧಿಕೃತವಾಗಿ ಬಿಡುಗಡೆ ಮಾಡಲಾಗಿದೆ. ಇದು ಕಳೆದ 11 ವರ್ಷಗಳಲ್ಲೇ ಅತಿ ಕಡಿಮೆ 4.2ಶೇ.ಕ್ಕೆ ಇಳಿದಿದೆ. 2018–19ರಲ್ಲಿ ಇದು 6.1ಶೇ. ಇತ್ತು. ನಾಲ್ಕನೇ ತ್ರೈಮಾಸಿಕದಲ್ಲಿ ಅಂದರೆ ಜನವರಿ–ಮಾರ್ಚ್ 2020ರಲ್ಲಿ ಜಿಡಿಪಿ ಬೆಳವಣಿಗೆ ದರ 3.1ಶೇ.ಕ್ಕೆ ಕುಸಿಯಿತು. ಹಲವು ಅಂತರ್‍ರಾಷ್ಟ್ರೀಯ ದರ ಲೆಕ್ಕಾಚಾರಗಳ ಸಂಸ್ಥೆಗಳು ಮತ್ತು ದೇಶದೊಳಗಿನ ಸ್ವತಂತ್ರ ಸಂಸ್ಥೆಗಳು ಜಿಡಿಪಿ ಬೆಳವಣಿಗೆ ದರ ಇದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕುಸಿದಿದೆ ಎಂದು ಅಂದಾಜು ಮಾಡಿವೆ. ಇದು ಮಾರ್ಚ್ ತಿಂಗಳ ಕೊನೆಯ ವಾರವೊಂದನ್ನು ಬಿಟ್ಟು ಮುಖ್ಯವಾಗಿ ಲಾಕ್‌ಡೌನಿನ ಮುಂಚಿನ ಅವಧಿಯದ್ದು.

ಮಹಾಮಾರಿ ಮತ್ತು ನಂತರದ ಲಾಕ್‌ಡೌನ್

ಪುಟ 10 ನೋಡಿ



ಜೂನ್ 16 : ಅಖಿಲ ಭಾರತ ಪ್ರತಿಭಟನಾ ದಿನಾಚರಣೆ



ಪುಟ 9 ರಿಂದ

ಬಹಳಷ್ಟು ಭಾಗ ಆರ್ಥಿಕ ಚಟುವಟಿಕೆಗಳನ್ನು ನಾಶಮಾಡಿವೆ. ಇವು ನಮ್ಮ ಬಹುಪಾಲು ಜನಗಳ ಜೀವನದ ಪರಿಸ್ಥಿತಿಗಳ ಮೇಲೆ ದುಷ್ಪರಿಣಾಮಗಳನ್ನು ಬೀರಿವೆ.

ಹಣಕಾಸು ಪ್ಯಾಕೇಜುಗಳು: ಈ ಹೆಚ್ಚಿನ ಪ್ಯಾಕೇಜುಗಳು ಜನಗಳಿಗೆ ಪರಿಹಾರಗಳನ್ನು ಒದಗಿಸುವಲ್ಲಿ ಸಂಪೂರ್ಣವಾಗಿ ನಿರುಪಯೋಗೊಯಾಗಿವೆಯಷ್ಟೇ ಅಲ್ಲ, ಅವಾಸ್ತವವೇ ಆಗಿವೆ. ಏಕೆಂದರೆ ಸರಕಾರದ ರೆವಿನ್ಯೂ ಸಂಗ್ರಹಗಳು ತೀವ್ರವಾಗಿ ಕುಸಿದಿವೆ. ಒಟ್ಟು ತೆರಿಗೆ ಆದಾಯ(ಜಿಟಿಆರ್)ನಲ್ಲಿ 70,000 ಕೋಟಿ ರೂ.ಗಳಿಗಿಂತಲೂ ಹೆಚ್ಚಿನ ಇಳಿಕೆಯಾಗಿದೆ. ಮತ್ತು ಕಾರ್ಪೊರೇಟ್ ತೆರಿಗೆ ಆದಾಯ(ಸಿಟಿಆರ್) ಕೂಡ 1,06,000 ಕೋಟಿ ರೂ.ಗಳಿಗಿಂತಲೂ ಹೆಚ್ಚಿನ ಇಳಿಕೆ ಕಂಡಿದೆ. ನಿಜವಾದ ಜಿಟಿಆರ್ ಮತ್ತು ಸಿಟಿಆರ್ ಸಂಗ್ರಹಗಳು ಫೆಬ್ರುವರಿ 2019ರಲ್ಲಿ ಸಲ್ಲಿಸಿದ ಬಜೆಟಿನ ಪರಿಷ್ಕೃತ ಅಂದಾಜುಗಳಿಗಿಂತ ಅನುಕ್ರಮವಾಗಿ 7.1ಶೇ. ಮತ್ತು 8.8ಶೇ.ದಷ್ಟು ಕಡಿಮೆ ಆಗಿವೆ. ಸರಕಾರೀ ರೆವಿನ್ಯೂ ಸಂಗ್ರಹಗಳಲ್ಲಿ ಇಂತಹ ಬೃಹತ್ ಕೊರತೆಗಳಿರುವಾಗ, ಈ ಎಲ್ಲ ಭವ್ಯ ಪ್ರಕಟಣೆಗಳು ಕಾಗದದ ಮೇಲಷ್ಟೇ ಉಳಿಯುತ್ತವೆ. ಸಾಲಗಳನ್ನು ಅಗ್ಗಗೊಳಿಸುವ ಎಲ್ಲ ಹೇಳಿಕೆಗಳ ಹೊರತಾಗಿಯೂ ಅರ್ಥವ್ಯವಸ್ಥೆಯಲ್ಲಿ ಒಟ್ಟು ಹೂಡಿಕೆ 6ಶೇ.ಕ್ಕಿಂತಲೂ ಹೆಚ್ಚು ಇಳಿದಿದೆ.

ರಾಜ್ಯಗಳ ಹಣಕಾಸುಗಳ ಮೇಲೆ ದಾಳಿಗಳು: ಸರಕಾರದ ರೆವಿನ್ಯೂ ಸಂಗ್ರಹಗಳಲ್ಲಿ ಈ ಕೊರತೆ ಈಗಾಗಲೇ ಹಣವಿಲ್ಲದೆ ಸೊರಗಿರುವ ರಾಜ್ಯಗಳ ಪಾಲುಗಳನ್ನು ಮತ್ತಷ್ಟು ಕಡಿಮೆ ಮಾಡುತ್ತದೆ. ಜಿಎಸ್‌ಟಿ ಪರಿಹಾರಗಳ ಬಾಕಿಯನ್ನು ಇನ್ನೂ ಕೇಂದ್ರ ಸರಕಾರ ರಾಜ್ಯಗಳಿಗೆ ತೆತ್ತಿಲ್ಲ. ಎಲ್ಲ ರಾಜ್ಯಗಳೂ ಮಹಾಮಾರಿಯನ್ನು ಮತ್ತು ಲಾಕ್‌ಡೌನಿನ ಆರ್ಥಿಕ ಪರಿಣಾಮಗಳನ್ನು ಎದುರಿಸಲು ಹಣಕಾಸು ನೆರವನ್ನು ಕೇಳುತ್ತಿವೆ. ಮಹಾಮಾರಿಯ ವಿರುದ್ಧ ಹೋರಾಡುವಲ್ಲಿ ಮುಂಚೂಣಿಯಲ್ಲಿರುವುದು ರಾಜ್ಯಗಳೇ. ಆದರೆ ಕೇಂದ್ರ ಸರಕಾರ ಅವುಗಳಿಗೆ ನಿಧಿಗಳ ವರ್ಗಾವಣೆಯನ್ನು ಮಾಡಲು ನಿರಾಕರಿಸುತ್ತಿದೆ.

ಸಾರ್ವಜನಿಕ ಆರೋಗ್ಯ

ಈ ಎರಡು ತಿಂಗಳುಗಳಿಗೂ ಹೆಚ್ಚಿನ ಅವಧಿ ನಮ್ಮ ದೇಶದಲ್ಲಿ ಸಾರ್ವಜನಿಕ ಆರೋಗ್ಯ ಸೇವೆಗಳ ಮೂಲರಚನೆಗಳು ಸಂಪೂರ್ಣವಾಗಿಯೂ ಅಸಮರ್ಪಕವಾಗಿವೆ ಎಂಬುದನ್ನು ಸ್ಪಷ್ಟವಾಗಿ ಬಯಲಿಗೆ ತಂದಿವೆ. ಪ್ರತಿಯೊಂದನ್ನೂ ಖಾಸಗೀಕರಿಸುವ ಭರದಲ್ಲಿ ಮೋದಿ ಸರಕಾರ ಸಾರ್ವಜನಿಕ ಆರೋಗ್ಯಪಾಲನೆಯನ್ನು ಹೆಚ್ಚು-ಕಡಿಮೆ ಕಳಚಿಯೇ ಹಾಕಿದೆ. ಇದು ಈ ಮಹಾಮಾರಿಯಲ್ಲಿ ತನ್ನ ಬಲಿಯನ್ನು ಪಡೆಯುತ್ತಿದೆ. ಈಗಲಾದರೂ, ಕೇಂದ್ರ ಸರಕಾರ ದೇಶದ ಜಿಡಿಪಿಯ ಕನಿಷ್ಟ 3ಶೇ. ವನ್ನಾದರೂ ಸಾರ್ವಜನಿಕ ಆರೋಗ್ಯ ಪಾಲನೆಯ ಮೇಲೆ ಖರ್ಚು ಮಾಡಬೇಕು ಎಂಬ ತನ್ನ ಆಗ್ರಹವನ್ನು ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ.

ಡಿಜಿಟಲ್ ಶಿಕ್ಷಣ

ಲಾಕ್‌ಡೌನ್ ಶೈಕ್ಷಣಿಕ ವರ್ಷ ಮುಗಿಯುವ ವೇಳೆಗೆ ಮತ್ತು ಇನ್ನೇನು ಪರೀಕ್ಷೆಗಳು ನಡೆಯಲಿವೆ ಎನ್ನುವಾಗ ಬಂದಿದೆ. ಇದು ಒಂದು ತಲೆಮಾರಿನ ವಿದ್ಯಾರ್ಥಿಗಳ ಭವಿಷ್ಯವನ್ನು ಅಸ್ತವ್ಯಸ್ತಗೊಳಿಸಿದೆ. ಲಾಕ್‌ಡೌನನ್ನು ಬಳಸಿ ಕೇಂದ್ರ ಸರಕಾರ ಸಂಸತ್ತು ಇನ್ನೂ ಮಂಜೂರಾತಿ ನೀಡದಿರುವ ತನ್ನ ಪ್ರತಿಗಾಮಿ ಶಿಕ್ಷಣ ಧೋರಣೆಯನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದೆ ಮತ್ತು ಡಿಜಿಟಲ್ ಬೋಧನೆ/ಕಲಿಕೆಯ ವಿಧಾನಗಳನ್ನು ಹೇರುತ್ತಿದೆ. ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯ ಮೇಲೆ ಡಿಜಿಟಲ್ ವಿಭಜನೆಯನ್ನು ಹೇರಬಾರದು, ಇದು ಭಾರತದ ಭವಿಷ್ಯಕ್ಕೆ ಬಾಧಕವಾಗುತ್ತದೆ. ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಪಾರಂಪರಿಕ ಬೋಧನಾ ವಿಧಾನಗಳ ಜಾಗದಲ್ಲಿ ಡಿಜಿಟಲ್ ವಿಧಾನಗಳನ್ನು ತರುವುದನ್ನು ಪಕ್ಷ ಸದಾ ವಿರೋಧಿಸುತ್ತ ಬಂದಿದೆ, ಈಗಲೂ ವಿರೋಧಿಸುತ್ತಿದೆ. ಮಹಾಮಾರಿಯ ಮತ್ತು ಅದರಿಂದಾಗಿ ಛಿದ್ರವಾಗಿರುವ ಪ್ರಸಕ್ತ ಅವಧಿಯಲ್ಲಿ ಶೈಕ್ಷಣಿಕ ವರ್ಷವು ಛಿದ್ರಗೊಳ್ಳದಂತೆ ತಡೆಯಲು ಡಿಜಿಟಲ್ ವಿಧಾನಗಳನ್ನು ಬಳಸಬಹುದು. ಆದರೆ ಅದು ಎಂದಿಗೂ ಈಗಿರುವ ಬೋಧನಾ ವಿಧಾನಗಳ ಬದಲಾಗಿ ಬರಲು ಸಾಧ್ಯವಿಲ್ಲ. ಇದನ್ನು ಕೂಡ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಡಿಜಿಟಲ್ ಸಾಧನಗಳು ಸಾರ್ವತ್ರಿಕವಾಗಿ ಲಭ್ಯವಿರುವವಲ್ಲಿ ಮಾತ್ರವೇ ಬಳಸಬೇಕು. ಶಿಕ್ಷಣದಲ್ಲಿ ಯಾವುದೇ ಡಜಿಟಲ್ ವಿಭಜನೆಯನ್ನು ಪಕ್ಷವು ವಿರೋಧಿಸುತ್ತದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳು, ಪರೀಕ್ಷೆಗಳನ್ನು ಎಂದಿನ ರೀತಿಯಲ್ಲಿ ನಡೆಸಲು ಮತ್ತು ವಿದ್ಯಾರ್ಥಿಗಳಿಗೆ ಒಂದು ವರ್ಷ ನಷ್ಟಗೊಳ್ಳದ ರೀತಿಯಲ್ಲಿ ಶೈಕ್ಷಣಿಕ ಅವಧಿಯನ್ನು ಪುನರ್‍ರೂಪಿಸಬೇಕು.

ಭಾರತ–ಚೀನಾ ನಡುವೆ ಸಮಸ್ಯೆ

ಲಡಾಖ್ ಮತ್ತು ಸಿಕ್ಕಿಂ ನಲ್ಲಿ ವಾಸ್ತವ ಹತೋಟಿ ರೇಖೆ(ಎಲ್‌ಎಸಿ)ಯ ಮೇಲಿನ ವಿವಿಧೆಡೆಗಳಲ್ಲಿ ಎದ್ದಿರುವ ಪ್ರಶ್ನೆಯನ್ನು ಪೊಲಿಟ್ ಬ್ಯುರೊ ಆತಂಕದಿಂದ ಗಮನಿಸಿತು. ರಕ್ಷಣಾ ಮತ್ತು ರಾಜತಾಂತ್ರಿಕ ಮಟ್ಟಗಳಲ್ಲಿ ಸ್ಥಾಪಿತವಾಗಿರುವ ವ್ಯವಸ್ಥೆಗಳ ಮೂಲಕ ನಡೆಯುತ್ತಿರುವ ಮಾತುಕತೆಗಳು ಈ ಪ್ರಶ್ನೆಯನ್ನು ಪರಿಹರಿಸಲು ಮತ್ತು ಎರಡು ದೇಶಗಳ ನಡುವೆ ಸಾಮಾನ್ಯ ಸಂಬಂಧಗಳನ್ನು ಉಳಿಸಿಕೊಳ್ಳಲು ನೆರವಾಗುತ್ತದೆ ಎಂಬ ಆಶಯವನ್ನು ಅದು ವ್ಯಕ್ತಪಡಿಸಿದೆ.

ಸಿಪಿಐ(ಎಂ) ಪರಿಹಾರ ಕಾರ್ಯ

ರಾಷ್ಟ್ರೀಯ ಲಾಕ್‌ಡೌನಿನ ಅವಧಿಯಲ್ಲಿ ಸಿಪಿಐ(ಎಂ), ಅದರ ಸದಸ್ಯರು ಮತ್ತು ಎಲ್ಲ ಘಟಕಗಳು ಎಲ್ಲ ರಾಜ್ಯಗಳಲ್ಲೂ ಉದ್ಯೋಗಗಳನ್ನು ಮತ್ತು ಜೀವನೋಪಾಯಗಳನ್ನು ಕಳಕೊಂಡವರಿಗೆ ಪರಿಹಾರಗಳನ್ನು ಹಾಗೂ ಹಸಿದವರಿಗೆ ಆಹಾರವನ್ನು ಒದಗಿಸಲು ಸತತ ಪ್ರಯತ್ನಗಳನ್ನು ನಡೆಸಿದ್ದಾರೆ. ಈ ಪರಿಹಾರ ಚಟುವಟಿಕೆಗಳನ್ನು, ವಿಶೇಷವಾಗಿ ವಲಸೆ ಕಾರ್ಮಿಕರಿಗೆ ಬಹಳಷ್ಟು ಅಗತ್ಯವಿರುವ ಪರಿಹಾರ ಒದಗಿಸುವುದನ್ನು ಮುಂದುವರೆಸಬೇಕು ಎಂದು ಪೊಲಿಟ್‌ಬ್ಯುರೊ ಪಕ್ಷದ ಎಲ್ಲ ಸದಸ್ಯರಿಗೆ ಮತ್ತು ಘಟಕಗಳಿಗೆ ಕರೆ ನೀಡಿದೆ.

ಕೇಂದ್ರ ಸಮಿತಿ ಸಭೆ

ಜುಲೈ ತಿಂಗಳಲ್ಲಿ ಕೇಂದ್ರ ಸಮಿತಿ ಸಭೆಯನ್ನು, ಈ ಪೊಲಿಟ್‌ಬ್ಯುರೊ ಸಭೆಯನ್ನು ನಡೆಸಿದ ರೀತಿಯಲ್ಲಿ ಡಿಜಿಟಲ್ ತಂತ್ರಜ್ಞಾನವನ್ನು ಬಳಸಿ ನಡೆಸಲು ಪೊಲಿಟ್‌ಬ್ಯುರೊ ನಿರ್ಧರಿಸಿದೆ.

ಅಖಿಲ ಭಾರತ ಪ್ರತಿಭಟನೆ

ಪ್ರಸಕ್ತ ಸನ್ನಿವೇಶದಲ್ಲಿ, ಈಗಾಗಲೇ ಇರುವ ನಿರುದ್ಯೋಗಿಗಳ ಅಗಾಧ ಸಂಖ್ಯೆಗೆ, ಈ ಲಾಕ್‌ಡೌನ್ ಅವಧಿಯಲ್ಲಿ ಇನ್ನೂ ಕನಿಷ್ಟ 15 ಕೋಟಿ ಜನಗಳು ನಿರುದ್ಯೋಗಿಗಳಾಗಿ ಸೇರಿದ್ದಾರೆ. ನಮ್ಮ ಜನಗಳ ಒಂದು ವಿಶಾಲ ವಿಭಾಗ ಜೀವನೋಪಾಯದ ಎಲ್ಲ ಸಾಧನಗಳನ್ನೂ ಕಳಕೊಂಡಿದೆ. ತಮ್ಮ ಮನೆಗಳಿಗೆ ಹಿಂದಿರುಗಲು ಬೀದಿಗಳಲ್ಲಿ ಸಾಗಿರುವ ಹಸಿದ ವಲಸೆ ಕಾರ್ಮಿಕರ ಹೃದಯವೇದಕ ಅನುಭವಗಳು ನಮ್ಮ ಜನಗಳ ಗಮನಾರ್ಹ ವಿಭಾಗಗಳು ಇಂದು ಎಷ್ಟೊಂದು ಹಸಿವಿನಿಂದ ಪೀಡಿತರಾಗಿದ್ದಾರೆ ಎಂಬುದನ್ನು ತೋರಿಸಿದೆ. ಇಂತಹ ಪರಿಸ್ಥಿತಿಗಳ ವಿರುದ್ಧ ಪ್ರತಿಭಟನೆಗಳನ್ನು ದೇಶಾದ್ಯಂತ ಸಂಘಟಿಸಬೇಕು ಎಂದು ಪೊಲಿಟ್‌ಬ್ಯುರೊ ನಿರ್ಧರಿಸಿದೆ. ಈ ಪ್ರತಿಭಟನೆಗಳನ್ನು ಆಯಾಯ ಪ್ರದೇಶದಲ್ಲಿರುವ ನಿಬಂಧನೆಗಳು ಮತ್ತು ನಿರ್ಬಂಧಗಳನ್ನು ಚಾಚೂ ತಪ್ಪದೆ ಪಾಲಿಸುತ್ತಲೇ, ದೈಹಿಕ ಅಂತರವನ್ನು ಕಾಯ್ದುಕೊಂಡು, ಮುಖಗವಸು ಇತ್ಯಾದಿಗಳನ್ನು ಧರಿಸಿಕೊಂಡು ನಡೆಸಲಾಗುವುದು. ಈ ಕೆಳಗಿನ ಬೇಡಿಕೆಗಳ ಮೇಲೆ ಜೂನ್ 16ರಂದು ಅಖಿಲ ಭಾರತ ಪ್ರತಿಭಟನಾ ದಿನವನ್ನು ಆಚರಿಸಲು ಪೊಲಿಟ್‌ಬ್ಯುರೊ ಕರೆ ನೀಡಿದೆ:

1. ಆದಾಯ ತೆರಿಗೆ ತೆರುವ ಮಿತಿಗಳ ಹೊರಗಿರುವ ಎಲ್ಲ ಕುಟುಂಬಗಳಿಗೆ ತಿಂಗಳಿಗೆ ರೂ.7500 ರಂತೆ ಆರು ತಿಂಗಳ ವರೆಗೆ ನಗದು ವರ್ಗಾವಣೆ.

2. ಪ್ರತಿವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ. ಯಂತೆ ಆರು ತಿಂಗಳ ವರೆಗೆ ಉಚಿತ ಆಹಾರಧಾನ್ಯಗಳ ವಿತರಣೆ.

3. ಮನರೇಗದ ಅಡಿಯಲ್ಲಿ ಹೆಚ್ಚಿಸಿದ ಕೂಲಿಗಳೊಂದಿಗೆ ಕನಿಷ್ಟ 200 ದಿನಗಳ ಉದ್ಯೋಗ. ನಗರದ ಬಡವರಿಗೂ ಉದ್ಯೋಗ ಖಾತ್ರಿ ಯೋಜನೆಯ ವಿಸ್ತರಣೆ. ನಿರುದ್ಯೋಗಿ ವ್ಯಕ್ತಿಗಳಿಗೆ ತಕ್ಷಣವೇ ಒಂದು ನಿರುದ್ಯೋಗ ಭತ್ಯೆಯ ಪ್ರಕಟಣೆ.

4. ರಾಷ್ಟ್ರೀಯ ಆಸ್ತಿಗಳ ಲೂಟಿಯನ್ನು, ಸಾರ್ವಜನಿಕ ವಲಯದ ಖಾಸಗೀಕರಣವನ್ನು ಮತ್ತು ಕಾರ್ಮಿಕ ಕಾನೂನುಗಳನ್ನು ರದ್ದು ಮಾಡುವುದನ್ನು ನಿಲ್ಲಿಸಬೇಕು.

ಬೇಡಿಕೆ ಹೆಚ್ಚುವ ನಿರೀಕ್ಷೆಯಿಲ್ಲದೆ 35ಶೇ. ಎಂಎಸ್‌ಎಂಇ ಗಳು ಮುಚ್ಚುತ್ತಿವೆ –ಆದರೂ ಮತ್ತದೇ ಸಾಲಗಳ ಪ್ಯಾಕೇಜ್, ಬೇಡಿಕೆ ಹೆಚ್ಚಿಸುವ ಕ್ರಮಗಳಿಲ್ಲ

20 ಲಕ್ಷ ಕೋಟಿ ರೂ.ಗಳ ಪ್ಯಾಕೇಜ್‌ನ ನಿಜ ಬಣ್ಣದ ಬಗ್ಗೆ ವ್ಯಾಪಕ ಚರ್ಚೆ ನಡೆದ ಮೇಲೆ ಅದಕ್ಕೆ 'ಅನುಮೋದನೆ' ಎಂಬುದನ್ನು ನೀಡಿದ ಕೇಂದ್ರ ಸಂಪುಟ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆ(ಎಂ.ಎಸ್.ಎಂ.ಇ) ಗಳಿಗೆ ಮತ್ತೊಂದು ಪ್ಯಾಕೇಜನ್ನು ನಿರ್ಧರಿಸಿದೆಯಂತೆ. ಮಹಾಮಾರಿಯ ವಿರುದ್ಧ ಸಮರದ ಸುಮಾರು ಮೂರು ತಿಂಗಳಲ್ಲಿ ಮೊದಲ ಬಾರಿಗೆ ಒಂದು ಪತ್ರಿಕಾಗೋಷ್ಠಿಯನ್ನು ನಡೆಸಿದ ಮೂವರು ಮಂತ್ರಿಗಳು ಜೂನ್ 1ರಂದು ಇದನ್ನು ಪ್ರಕಟಿಸಿದ್ದಾರೆ.

ಈ ನಡುವೆ ಎಂ.ಎಸ್.ಎಂ.ಇ ಗಳನ್ನು ಕುರಿತ ಒಂದು ಸರ್ವೆಯೂ ಪ್ರಕಟವಾಗಿದೆ. ಇದರ ಪ್ರಕಾರ 35ಶೇ. ಎಂ.ಎಸ್.ಎಂ.ಇ ಗಳು ಮುಚ್ಚಿ ಹೋಗುತ್ತಿವೆ, ಅಲ್ಲದೆ 37ಶೇ. ಸ್ವ–ಉದ್ಯೋಗಿಗಳು ಕೂಡ ತಮ್ಮ ಉದ್ಯೋಗಗಳನ್ನು ಮುಚ್ಚುತ್ತಿದ್ದಾರೆ. ಅಖಿಲ ಭಾರತ ತಯಾರಕರ ಸಂಘಟನೆ(ಎಐಎಂಒ) ಸರ್ವೆಯನ್ನು ನಡೆಸಿದೆ. ಎಂ.ಎಸ್.ಎಂ.ಇ ಗಳ ಪ್ರತಿನಿಧಿ ಎನ್ನಬಹುದಾದ ಈ ಸಂಘಟನೆ ಮೇ 24ರಿಂದ ಮೇ 30ರ ನಡುವೆ ನಡೆಸಿದ ಈ ಸರ್ವೆಯಲ್ಲಿ ಒಟ್ಟು 46,425 ಸ್ವ–ಉದ್ಯೋಗಿಗಳು, ಎಂ.ಎಸ್.ಎಂ.ಇ ಮಾಲಕರು, ಮತ್ತು ಕಾರ್ಪೊರೇಟ್ ಮಾಲಕರು ಹಾಗು ನೌಕರರು ಭಾಗವಹಿಸಿದರು. ಇದು 20 ಲಕ್ಷ ಕೋಟಿಯ ಪ್ಯಾಕೇಜಿನ ನಂತರ, ಆದರೆ 20ಸಾವಿರ ಕೋಟಿಯ ಪ್ಯಾಕೇಜಿನ ಮೊದಲು ಎಂಬುದನ್ನು ಗಮನಿಸಬೇಕು. ಇದರ ಫಲಿತಾಂಶ ಹೀಗಿದೆ:

ಕೊವಿಡ್ ಪರಿಣಾಮ	ಒಟ್ಟು	ಎಂ.ಎಸ್.ಎಂ.ಇ	ಕಾರ್ಪೊರೇಟ್‌ಗಳು	ಸ್ವ–ಉದ್ಯೋಗಿಗಳು
ತೊಂದರೆಯಾಗಿಲ್ಲ	7%	3%	6%	11%
3 ತಿಂಗಳಲ್ಲಿ ಚೇತರಿಸಿಕೊಳ್ಳಬಹುದು	18	12	46	27
6 ತಿಂಗಳಲ್ಲಿ ಚೇತರಿಸಿಕೊಳ್ಳಬಹುದು	29	32	26	6
12 ತಿಂಗಳಲ್ಲಿ ಚೇತರಿಸಿಕೊಳ್ಳಬಹುದು	9	7	2	2
ಚೇತರಿಕೆ ಸಾಧ್ಯವೇ ಇಲ್ಲ	32	35	12	37
ಅನಿಶ್ಚಿತತೆ	5	11	8	12

ಎಂ.ಎಸ್.ಎಂ.ಇ ಗಳಲ್ಲಿ 35ಶೇ.ದಷ್ಟು ಮತ್ತೆ ತಮ್ಮ ಉದ್ದಿಮೆಗಳ ಬಾಗಿಲು ತೆರೆಯಲು ಸಾಧ್ಯವಿಲ್ಲ ಎಂದಿದ್ದಾರೆ, ಸ್ವ–ಉದ್ಯೋಗಿಗಳಲ್ಲೂ 32ಶೇ. ಮಂದಿಗೆ ಚೇತರಿಕೆಯ ಸಾಧ್ಯತೆಯೇ ಕಾಣುತ್ತಿಲ್ಲ, 11ಶೇ. ಎಂ.ಎಸ್.ಎಂ.ಇ ಗಳು ಹಾಗೂ 17ಶೇ. ಸ್ವ–ಉದ್ಯೋಗಿಗಳು ಮುಂದೇನು ಎಂದು ಹೇಳುವ ಸ್ಥಿತಿಯಲ್ಲಿ ಇಲ್ಲ. ಅಂದರೆ ಅರ್ಧದಷ್ಟು ಎಂ.ಎಸ್.ಎಂ.ಇ ಗಳು ಹಾಗೂ ಸ್ವ–ಉದ್ಯೋಗಿಗಳಿಗೆ 20 ಲಕ್ಷ ಕೋಟಿ ಪ್ಯಾಕೇಜಿನಲ್ಲಿ ಇರುವ 3.5ಲಕ್ಷ ಕೋಟಿ ರೂ. ಮೊತ್ತದ ಸಾಲ ಇತ್ಯಾದಿ ಸೌಲಭ್ಯಗಳಿಂದ ಹೆಚ್ಚಿನ ನಿರೀಕ್ಷೆಯೇನೂ ಇಲ್ಲ. ಕಾರ್ಪೊರೇಟ್‌ಗಳು ಮಾತ್ರ ಹೆಚ್ಚಿನವರು 6 ತಿಂಗಳೊಳಗೆ ಚೇತರಿಸಿಕೊಳ್ಳುವ ಆಸೆಯಿಟ್ಟುಕೊಂಡಿದ್ದಾರೆ.

ಸುಮಾರು 7ಶೇ.ದಷ್ಟು ಉದ್ದಿಮೆಗಳು ಕೊವಿಡ್–19ರಿಂದ ತಮಗೇನೂ ತೊಂದರೆಯಾಗಿಲ್ಲ ಎಂದಿದ್ದಾರೆ. ಇವರೆಲ್ಲ ಕೋವಿಡ್–19 ಮಹಾಮಾರಿಯನ್ನು ಎದುರಿಸುವಂತಹ ಸೇವೆಗಳನ್ನು ಒದಗಿಸುವವರು ಎಂದು ಎಐಎಂಒ ಹೇಳಿದೆ. ಇದರಲ್ಲೂ ಎಂ.ಎಸ್. ಎಂ.ಇ ಗಳ ಪ್ರಮಾಣ ಬಹಳ ಕಡಿಮೆ, 3ಶೇ. ಮಾಲಕರು ಮಾತ್ರವೇ ತಮಗೆ ತೊಂದರೆಯಾಗಿಲ್ಲ ಎಂದಿದ್ದಾರೆ. ಬಹಳಷ್ಟು ಎಂ.ಎಸ್.ಎಂ.ಇ ಗಳು ಮೇ ತಿಂಗಳಲ್ಲಿ ಪ್ರಕಟಿಸಿದ ಪ್ಯಾಕೇಜ್ ಅಸಮರ್ಪಕವಾಗಿದೆ ,ಮತ್ತು ಅದು ಕೂಡ ಇನ್ನೂ ತಮಗೆ ತಲುಪಿಲ್ಲ ಎಂದಿರುವುದಾಗಿ ಎಐಎಂಒ ಹೇಳಿದೆ.

ಇನ್ನೊಂದು ಗಮನಾರ್ಹ ಅಂಕಿ–ಅಂಶವೆಂದರೆ ಮಾರ್ಚ್ 27ರಿಂದ ಎಪ್ರಿಲ್ ಅಂತ್ಯದ ನಡುವೆ ಬ್ಯಾಂಕುಗಳು ರಿಜರ್ವ್ ಬ್ಯಾಂಕಿನಲ್ಲಿ ಮರುಠೇವಣಿ ಇಡುವ ಮೊತ್ತ 3ಲಕ್ಷ ಕೋಟಿಯಿಂದ 8.4ಲಕ್ಷ ಕೋಟಿ ರೂ.ಗಳಿಗೇರಿದೆ. ಅಂದರೆ ಸಾಲಗಳನ್ನು ಕೇಳುವವರಿಲ್ಲ! ಕಾರಣ ಸರಳ, ಜನಗಳ ಖರೀದಿ ಸಾಮರ್ಥ್ಯ ಕುಸಿದಿದೆ. ಅದನ್ನು ಹೆಚ್ಚಿಸದೆ ಉದ್ದಿಮೆಗಳ ಉತ್ಪಾದನೆಗಳಿಗೆ ಬೇಡಿಕೆ ಹೆಚ್ಚುವುದಿಲ್ಲ, ಅದರಿಂದಾಗಿ ಈ ಉದ್ದಿಮೆಗಳ ಚೇತರಿಕೆ ಸಾಧ್ಯವಾಗುವುದಿಲ್ಲ.

ಆದ್ದರಿಂದ ಕೇವಲ ಸಾಲಗಳನ್ನು ಕೊಡಿಸುವ ಪ್ಯಾಕೇಜುಗಳು ಕೊವಿಡ್ ಎರಗುವ ಮೊದಲೇ ಕುಸಿಯಲಾರಂಭಿಸಿದ್ದ , ಕೊವಿಡ್‌ನಿಂದಾಗಿ ಮತ್ತಷ್ಟು ತೊಂದರೆಗೊಳಗಾಗಿರುವ ನಮ್ಮ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲಾರವು ಎಂಬುದನ್ನು ಮೋದಿ ಸರಕಾರ ಇನ್ನೂ ಅರಿಯುವಂತೆ ಕಾಣುತ್ತಿಲ್ಲ.

ಶತಮಾನೋತ್ಸವ ಲೇಖನ ಮಾಲೆ-29

ಅಸ್ಸಾಮ್ ಮತ್ತು ಸುರ್ಮಾ ಕಣಿವೆಯಲ್ಲಿ ರೈತ ಹೋರಾಟಗಳು

ಯುದ್ಧಾನಂತರದ ಸಾಮ್ರಾಜ್ಯಶಾಹಿ–ವಿರೋಧಿ ಜನಾಂದೋಲನದ ಅವಧಿಯಲ್ಲಿ, ಸುರ್ಮಾ ಕಣಿವೆಯ ಪೂರ್ವ ದಿಕ್ಕಿನ ಪ್ರದೇಶಗಳಲ್ಲಿನ ಅತ್ಯಂತ ದಮನಕ್ಕೊಳಗಾಗಿದ್ದ ರೈತ ವಿಭಾಗವು ಅರೆಗುಲಾಮಿ ನಂಕಾರ್ ಪದ್ಧತಿಗೆ ಒಂದು ತೀವ್ರವಾದ ಪೆಟ್ಟನ್ನು ಕೊಟ್ಟಿತು. 1946ರಲ್ಲಿ ಪ್ರಾರಂಭವಾಗಿ ವಿಭಜನೆಯ ನಂತರದ ಅವಧಿಯಲ್ಲೂ ಮುಂದುವರಿದ ದೊಡ್ಡ ಸಂಘಟಿತ ಚಳುವಳಿ ಅದಾಗಿತ್ತು. ಜಮೀನ್ದಾರರನ್ನು ದ್ವೇಷಿಸುತ್ತಿದ್ದ ಗೇಣಿದಾರರು ಹೋರಾಟವನ್ನು ಬೆಂಬಲಿಸಿದರು ಮತ್ತು ಅದು ಹೋರಾಟದ ತೀಕ್ಷ್ಣತೆಯನ್ನು ಇನ್ನೂ ಹೆಚ್ಚಿಸಿತು.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್



ಕಾಂ. ಇರಾವತ್ ಸಿಂಗ್

ವಿಭಜನೆಪೂರ್ವ ಅಸ್ಸಾಮಿನಲ್ಲಿ ಎರಡು ಪ್ರಾಂತೀಯ ಕಿಸಾನ್ ಸಭಾಗಳನ್ನು ಭಾಷಾಧಾರಿತವಾಗಿ ರಚಿಸಲಾಗಿತ್ತು – ಎರಡು ಬಂಗಾಳಿ ಮಾತನಾಡುವ ಜಿಲ್ಲೆಗಳ(ಕಚಾರ್ ಮತ್ತು ಸಿಲ್ಹೆಟ್) ಸುರ್ಮಾ ಕಣಿವೆ ಪ್ರಾಂತ ಕಿಸಾನ್ ಸಭಾವನ್ನು 1936ರಲ್ಲಿ ರಚಿಸಲಾಗಿತ್ತು ಮತ್ತು ಅಸ್ಸಾಮಿನ ಇನ್ನುಳಿದ ಎಲ್ಲಾ ಜಿಲ್ಲೆಗಳಲ್ಲಿ ಅಸ್ಸಾಮ್ ಪ್ರಾಂತ ಕಿಸಾನ್ ಸಭಾವನ್ನು 1946ರಲ್ಲಿ ರಚಿಸಲಾಗಿತ್ತು. ಆದರೆ ಅಸ್ಸಾಮಿನಲ್ಲಿ ಕಿಸಾನ್ ಸಭಾದ ಚಟುವಟಿಕೆಗಳು 1943ರಲ್ಲಿಯೇ ಶುರುವಾಗಿದ್ದವು.

ಆ ಭಾಗದ ಜಮೀನ್ದಾರಿ ಪ್ರದೇಶಗಳಲ್ಲಿ, ಗೇಣಿದಾರರು ನೆಲೆಸಿದ್ದ ಅಥವಾ ಸಾಗುವಳಿ ಮಾಡುತ್ತಿದ್ದ ಜಮೀನುಗಳಿಗೆ ಹಕ್ಕುಪತ್ರಗಳಿರಲಿಲ್ಲ. ಜಮೀನುದಾರರ ಮನಸೋಯಿಚ್ಛೆ ಅವರನ್ನು ಒಕ್ಕಲೆಬ್ಬಿಸಲಾಗುತ್ತಿತ್ತು. ಅವರು ನೆಲೆಸಿದ್ದ ಜಮೀನಿನಲ್ಲಿ ಒಂದು ಪಕ್ಕಾ ಮನೆಯನ್ನು ಕಟ್ಟುವ ಅಥವಾ ಜಮೀನಿನಲ್ಲಿ ಕೆರೆಯನ್ನು ಅಗೆಯುವ ಹಕ್ಕು ಅವರಿಗಿರಲಿಲ್ಲ ಮತ್ತು ಮರ ಕಡಿಯುವ ಹಕ್ಕು ಕೂಡ ಇರಲಿಲ್ಲ. ಜಮೀನುದಾರರ ಮನೆಗೆ ಹೋಗುವಾಗ ಅವರು ಚಪ್ಪಲಿ ಅಥವಾ ಶೂಗಳನ್ನು ಧರಿಸುವಂತಿರಲಿಲ್ಲ ಮತ್ತು ಕೊಡೆ ಬಳಸುವಂತಲೂ ಇರಲಿಲ್ಲ.

'ಸುಆಲ್' ಗೇಣಿಯನ್ನು ಹಣ ಅಥವಾ ವಸ್ತುಗಳ ರೂಪದಲ್ಲಿ ಕೊಡುವುದಲ್ಲದೇ, ಬೇರೆ ಬೇರೆ ಹಬ್ಬಗಳ ಸಮಯದಲ್ಲಿ ಮತ್ತು ಜಮೀನುದಾರರ ಮನೆಯಲ್ಲಿ ಬೇರಾವುದಾದರೂ ಸಮಾರಂಭಗಳಾದರೆ ಜಮೀನುದಾರರು 'ಅಬ್ವಾಬ್' ಅಥವಾ 'ನಜರಾನಾ'ವನ್ನು ಕಿತ್ತುಕೊಳ್ಳುತ್ತಿದ್ದರು. ಈ ಬಲಾತ್ಕಾರದ ವಸೂಲಿಗಳು ಜಮೀನುದಾರರ ಕಾನೂನು ಸಮ್ಮತ ಹಕ್ಕುಗಳಾಗಿದ್ದವು. ಜಮೀನುದಾರರ ಇಂತಹ ಸಾಮಾಜಿಕ ದಬ್ಬಾಳಿಕೆಗಳು ಮತ್ತು ಬಲಾತ್ಕಾರದ ಆರ್ಥಿಕ ವಸೂಲಿಗಳಿಂದಾಗಿ ಗೇಣಿದಾರರ ಬದುಕು ಅಸಹನೀಯವಾಗಿದ್ದವು.

1936ರಲ್ಲಿ ಸುರ್ಮಾ ಕಣಿವೆ ಕಿಸಾನ್ ಸಭಾವು ಗೇಣಿದಾರರ ಈ ಬೇಡಿಕೆಗಳಿಗಾಗಿ ಒತ್ತಾಯ ಮಾಡಿತು: ಜಮೀನುದಾರರ ಜಮೀನನ್ನು 12 ವರ್ಷಗಳಿಗಿಂತ ಹೆಚ್ಚು ಸಾಗುವಳಿ ಮಾಡಿದ್ದರೆ, ಅಂಥಹ ಗೇಣಿದಾರರಿಗೆ ಜಮೀನಿನ ಹಕ್ಕುಪತ್ರ ನೀಡಬೇಕು(ಅಂದರೆ ಅವರನ್ನು ಜಮೀನುದಾರರು ಮನಸ್ಸಿಗೆ ಬಂದಹಾಗೆ ಒಕ್ಕಲೆಬ್ಬಿಸುವಂತಿಲ್ಲ); ಹಕ್ಕು ಪತ್ರ ಹೊಂದಿರುವ ಗೇಣಿದಾರರು ಕೆರೆ ಅಗೆಯಲು ಮತ್ತು ಪಕ್ಕಾ ಮನೆ ಕಟ್ಟಿಕೊಳ್ಳಲು ಅಧಿಕಾರ ಹೊಂದುತ್ತಾರೆ; ಎಲ್ಲಾ ಕಾನೂನುಬಾಹಿರ ಬಲಾತ್ಕಾರದ ವಸೂಲಿಯನ್ನು ನಿಲ್ಲಿಸಬೇಕು; ಜಮೀನುದಾರರ ಮನೆಗಳಲ್ಲಿ ಮತ್ತು ಜಮೀನುಗಳಲ್ಲಿ ಮಾಡುತ್ತಿದ್ದ ಬಿಟ್ಟಿ ಚಾಕರಿಯನ್ನೂ ಒಳಗೊಂಡಂತೆ 'ನಂಕಾರ್' ಪದ್ಧತಿ(ಅರೆಗುಲಾಮ ಪದ್ಧತಿ)ಯನ್ನು ರದ್ದುಮಾಡಬೇಕು ಮತ್ತು ಗೇಣಿದಾರರು ಸಾಗುವಳಿ ಮಾಡುತ್ತಿದ್ದ ಜಮೀನುದಾರರ ಜಮೀನಿನ ಒಂದು ಭಾಗದಲ್ಲಿ ಕಟ್ಟಿಕೊಂಡ ಮನೆಯ ಹಕ್ಕುಪತ್ರವನ್ನೂ ನೀಡುವಂತೆ ಗೇಣಿ ಕಾಯಿದೆಯಲ್ಲಿ ನಮೂದಿಸಬೇಕು; ಟೀ ತೋಟಗಳಲ್ಲಿ ನೆಲೆಸಿರುವ ಗೇಣಿದಾರರಿಗೆ ಕೂಡ ಅವರು ನೆಲೆಸಿರುವ ಜಮೀನಿಗೆ ಹಕ್ಕುಪತ್ರ ನೀಡಬೇಕು ಮತ್ತು ಗೇಣಿದಾರರ ಮೇಲೆ ನಡೆಯುತ್ತಿದ್ದ ಎಲ್ಲಾ ರೀತಿಯ ದಬ್ಬಾಳಿಕೆಗಳು ನಿಲ್ಲಬೇಕು ಹಾಗೂ ಎಲ್ಲಾ ಸಾಮಾಜಿಕ ಅವಮಾನ ಮತ್ತು ಕಡೆಗಣಿಕೆಗಳನ್ನು ತೆಗೆದುಹಾಕಬೇಕು.

ಈ ಬೇಡಿಕೆಗಳಿಗಾಗಿ ಪ್ರಚಾರ ಮಾಡುತ್ತಾ ನೂರಾರು ಸಭೆಗಳನ್ನು ಸಿಲ್ಹೆಟ್ ಜಿಲ್ಲೆಯಾದ್ಯಂತ ನಡೆಸಲಾಯಿತು ಮತ್ತು ಎಲ್ಲಾ ಜಮೀನುದಾರಿ ಪ್ರದೇಶಗಳಲ್ಲಿ ಮೆರವಣಿಗೆಗಳನ್ನು ಸಂಘಟಿಸಲಾಯಿತು. ಜಮೀನುದಾರರು ಈ ಮೆರವಣಿಗೆಗಳ ಮೇಲೆ ದಾಳಿ ಮಾಡುವ ಮೂಲಕ ಭಾಗವಹಿಸಿದವರಿಗೆ ಬೆದರಿಕೆ ಒಡ್ಡಿದರು, ಅನೇಕರು ಗಾಯಗೊಂಡರು. ಈ ಮೆರವಣಿಗೆಗಳ ಮೇಲೆ ದಾಳಿ ಮಾಡಲು ಜಮೀನ್ದಾರರು ತಮಗೆ ನಿಷ್ಠರಾಗಿದ್ದ ಅರೆಗುಲಾಮ(ನಂಕಾರ್‌ಗಳನ್ನು)ರನ್ನು ಬಳಸಿದರು. ಇದು ಚಳುವಳಿಯಲ್ಲಿನ ದುರ್ಬಲ ಅಂಶವನ್ನು ಬಯಲುಮಾಡಿತು. ಕಿಸಾನ್ ಸಭಾವು ಗೇಣಿದಾರರ ಬೇಡಿಕೆಗಳ ಮೇಲೆ ಹೆಚ್ಚು ಒತ್ತು ನೀಡುತ್ತಾ ನಂಕಾರರ ಬೇಡಿಕೆಗಳನ್ನು ಕಡೆಗಣಿಸಿತ್ತು. ಆ ಧೋರಣೆಯನ್ನು ಆ ನಂತರದಲ್ಲಿ ತಿದ್ದಿಕೊಳ್ಳಲಾಯಿತು.

ನಂಕಾರರು ಮತ್ತವರ ಕುಟುಂಬದವರು ಜಮೀನ್ದಾರರು ನೀಡಿದ ಒಂದು ತೀರ ಚಿಕ್ಕ ಸಾಗುವಳಿ ಜಮೀನು ಅಥವಾ ಮನೆ ಕಟ್ಟಿಕೊಂಡ ಅತಿ ಸಣ್ಣ ಜಾಗಕ್ಕೆ ಬದಲಾಗಿ ಜಮೀನ್ದಾರರಿಗೆ ಬಿಟ್ಟಿ ಚಾಕರಿ ಮಾಡಬೇಕಾಗುತ್ತಿತ್ತು. ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವಂತಿರಲಿಲ್ಲ, ಅವರಿಗೆ ಲಕ್ಷಣವಾದ ಅಥವಾ ಒಳ್ಳೆಯ ಹೆಸರನ್ನೂ ಇಡುವಂತಿರಲಿಲ್ಲ. ಜಮೀನ್ದಾರರ ಕಾಮದಾಸೆಯಿಂದ ನಂಕಾರರ ಹೆಂಡತಿ ಮತ್ತು ಹೆಣ್ಣು ಮಕ್ಕಳನ್ನು ರಕ್ಷಿಸುವ ಮಾರ್ಗ ಕೂಡ ಇರಲಿಲ್ಲ. ಗುಲಾಮಗಿರಿ ಪದ್ಧತಿಯ ಯಾವ ಪಾರಂಪರಿಕ ನಿಯಮವನ್ನು ಉಲ್ಲಂಘಿಸಿದರೂ ಮೃಗೀಯ ಹಿಂಸೆ ಸಾಮಾನ್ಯವಾಗಿತ್ತು. ಈ ಎಲ್ಲಾ ದಮನಕಾರಿ ಸ್ಥಿತಿಯ ಹಿನ್ನೆಲೆಯಲ್ಲಿ, ಅವರ ಬೇಡಿಕೆಗಳ ಮೇಲೆ ವ್ಯಾಪಕ ಪ್ರಚಾರವನ್ನು ನಡೆಸಲಾಯಿತು ಮತ್ತು ಇದರ ಪರಿಣಾಮವಾಗಿ ದೊಡ್ಡ ಸಂಖ್ಯೆಯ ನಂಕಾರರು ಚಳುವಳಿಗೆ ಸೇರಿದರು.

1938ರಲ್ಲಿ, ಹಿಂದೆಂದೂ ಕಂಡಿಲ್ಲದ ಮತಪ್ರದರ್ಶನವನ್ನು ಶಿಲ್ಲಾಂಗಿನಲ್ಲಿ ನಡೆಸಲಾಯಿತು, ನೂರಾರು ರೈತರು ಮತ್ತು ನಂಕಾರರು 86 ಮೈಲಿಗಳ ದೂರ ಗುಡ್ಡ ಬೆಟ್ಟಗಳನ್ನು ದಾಟಿ ಬಂದು ಅದರಲ್ಲಿ ಪಾಲ್ಗೊಂಡಿದ್ದರು. ನಂಕಾರ್ ಪದ್ಧತಿಯನ್ನು ರದ್ದುಮಾಡಬೇಕೆಂಬ ಬೇಡಿಕೆಯೊಂದಿಗೆ ನಂಕಾರರು ಈ ಚಳುವಳಿಯಲ್ಲಿ ಸೇರಿದ್ದರು.

ನಂಕಾರರ ಚಳುವಳಿಯು ಗೇಣಿದಾರರ ಚಳುವಳಿಯ ಅವಿಭಾಜ್ಯ ಅಂಗವಾಗಿತ್ತು. ನಂಕಾರರ ಹೋರಾಟವು ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿದ್ದಾಗ್ಯೂ ಎರಡೂ ಚಳುವಳಿಗಳ ಯಶಸ್ಸು ನಿಕಟ ಅಂತರ್ಸಂಬಂಧ ಹೊಂದಿದ್ದವು. ಧಾರ್ಮಿಕ ಭಿನ್ನತೆಯನ್ನು ಮೀರಿನಿಂತು, ಮುಸ್ಲಿಂ ಮತ್ತು ಹಿಂದು ನಂಕಾರರು ಭುಜಕ್ಕೆ ಭುಜ ಕೊಟ್ಟು ಹೋರಾಡಿದರು, ಅದು ಚಳುವಳಿಗೆ ಒಂದು ಹೊಸ ಶಕ್ತಿಯನ್ನು ತಂದಿತು. ಜಮೀನ್ದಾರರು ಮತ್ತು ಸರ್ಕಾರ ಕೋಪದಿಂದ ಕೆರಳಿದವು; ಬಂಧನ ಮತ್ತು ನಿರ್ದಯ ಹೊಡೆತಗಳಲ್ಲದೇ ನಂಕಾರರು ಮತ್ತು ಗೇಣಿದಾರರ ಮೇಲೆ ಕ್ರಿಮಿನಲ್ ಪ್ರಕರಣಗಳನ್ನು ದಾಖಲು ಮಾಡಿದರು.

ಜಮೀನ್ದಾರರ ಜತೆ ಶಾಮೀಲಾಗಿ ಸರ್ಕಾರಿ ಯಂತ್ರವು ಆನೆಗಳನ್ನು ಬಳಸಿ ಗೇಣಿದಾರರ ಮನೆಗಳನ್ನು ಧ್ವಂಸ ಮಾಡಿತು ಮತ್ತು ಸಶಸ್ತ್ರ ಪಡೆಗಳನ್ನು ಬಳಸಿ ತೀವ್ರ ದಬ್ಬಾಳಿಕೆ ನಡೆಸಿ ಹೋರಾಟವನ್ನು ದಮನ ಮಾಡಿದರು. ಇದರೊಂದಿಗೆ ಸುರ್ಮಾ ಕಣಿವೆಯ ಹೋರಾಟದ ಮೊದಲ ಹಂತ ಕೊನೆಗೊಂಡಿತು; ಆದರೆ ಆ ಪ್ರದೇಶದ ಎಲ್ಲಾ ಗೇಣಿದಾರರು ಜಮೀನ್ದಾರರ ದಬ್ಬಾಳಿಕೆ ಮತ್ತು ಬಲಾತ್ಕಾರದ ವಸೂಲಿಯ ವಿರುದ್ಧ ಅಚಲವಾಗಿದ್ದರು. ಅದು ಇಡೀ ಅಸ್ಸಾಮಿನ ಜಮೀನ್ದಾರಿ ಪ್ರದೇಶದಲ್ಲಿ ವ್ಯಾಪಕ ಚಳುವಳಿಗೆ ಕಾರಣವಾಯಿತು, ಗೇಣಿದಾರಿಕೆಯ ರಕ್ಷಣೆಗಾಗಿ ಮತ್ತು ನ್ಯಾಯಯುತ ಗೇಣಿಯ ಖಾತ್ರಿಗಾಗಿ ಗೇಣಿ ಕಾಯಿದೆ ತರಬೇಕೆಂದು ಒತ್ತಾಯಿಸಿದರು.

ಮೂವತ್ತರ ದಶಕದಲ್ಲಿ ಅಸ್ಸಾಮಿನ ಕಣಿವೆಯಲ್ಲಿ, ಕಿಸಾನ್ ಚಳುವಳಿಯು ಪ್ರಥಮತಃ ಕಾಂಗ್ರೆಸ್‌ನ ಅಡಿಯಲ್ಲಿತ್ತು. ಶ್ರೀಮಂತ ರೈತರ ನೇತೃತ್ವದಲ್ಲಿದ್ದ ಅದು ಬಡ ಹಾಗೂ ಭೂಹೀನ ರೈತರ, ಆದಿ–ಕಂಡ್ವಾ(ಪಾಲುಗುತ್ತಿಗೆದಾರ) ಮತ್ತು ಕೃಷಿ ಕೂಲಿಗಾರರ ಬೇಡಿಕೆಗಳನ್ನು ಎತ್ತಿಕೊಳ್ಳಲಿಲ್ಲ. ಜನಬೆಂಬಲದ ಕೊರತೆಯಿಂದಾಗಿ ಈ ರೈತ ಸಭಾಗಳು 1940ರ ನಂತರ ನಿಷ್ಕ್ರಿಯವಾದವು.

ಕಮ್ಯುನಿಸ್ಟ್ ಕಾರ್ಯಕರ್ತರು, ವೈಯಕ್ತಿಕವಾಗಿ ಅಥವಾ ಗುಂಪುಗಳಾಗಿ 1938ರಿಂದಲೂ ಅಸಾಮ್ ಕಣಿವೆಯ ಬೇರೆ ಬೇರೆ ಜಾಗಗಳಲ್ಲಿ ರೈತರ ನಡುವೆ ಕೆಲಸ ಮಾಡುತ್ತಿದ್ದಾಗ್ಯೂ, ಅಸ್ಸಾಮ್ ಕಣಿವೆ ಸಮಿತಿ(ಬಹಳ ಬೇಗ ಅಸ್ಸಾಮ್ ಪ್ರಾಂತ ಸಂಘಟನಾ ಸಮಿತಿಯಾಗಿ ಮಾರ್ಪಾಟಾಯಿತು) ರಚನೆಯಾದ ಮೇಲೆಯೇ 1943ರಲ್ಲಿ ಎಐಕೆಎಸ್ ಸ್ಥಾಪನೆಯ ಸಿದ್ಧತೆಗಳು ಮತ್ತು ಅದರ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಯಿತು. ಅದಕ್ಕೂ ಮುಂಚೆ, 1940ರಲ್ಲಿ ಕಮ್ಯುನಿಸ್ಟ್ ಲೀಗ್ ನೇತೃತ್ವದಲ್ಲಿ ಅಸ್ಸಾಮ್ ಕಿಸಾನ್ ಬನುವಾ(ಪೆಸೆಂಟ್ಸ್ ಅಂಡ್ ಲೇಬರ್ ಯೂನಿಯನ್) ಸ್ವತಂತ್ರವಾಗಿ ಮತ್ತು ಕಾಂಗ್ರೆಸ್ಸಿಗೆ ವಿರುದ್ಧವಾಗಿ ರಚನೆಗೊಂಡಿತ್ತು. ಈ ಸಂಘಟನೆಯು ಕಾಮರೂಪ್, ಶಿಬ್ಸಾಗರ್ ಮತ್ತು ದಿಬ್ರೂಗರ್ ಪ್ರದೇಶಗಳ ಭಾಗಗಳಲ್ಲಿ ಸಕ್ರಿಯವಾಗಿತ್ತು.

ಮೊದಲ ಕಿಸಾನ್ ಸಮ್ಮೇಳನವನ್ನು ಕಮ್ಯುನಿಸ್ಟರ ನೇತೃತ್ವದಲ್ಲಿ 1943ರಲ್ಲಿ ಹಾವೋರಪ್‌ನಲ್ಲಿ ನಡೆಸಲಾಯಿತು. ಬೆಲೆ ಏರಿಕೆ, ಕಾಳಸಂತೆ ಮತ್ತು ಕಳ್ಳದಾಸ್ತಾನುಗಳ ವಿರುದ್ಧ, ಕೃಷಿ ಸಾಲ, ಭತ್ತದ ಬೀಜಗಳ ವಿತರಣೆಗಾಗಿ ಒತ್ತಾಯಿಸಿ, ಜಮೀನ್ದಾರರು, ಜೋತೆದಾರರು ಹಾಗೂ ಬಡ್ಡಿ ಸಾಹುಕಾರರ ದಬ್ಬಾಳಿಕೆ ವಿರುದ್ಧ ಸಮ್ಮೇಳನ ನಿರ್ಣಯಗಳನ್ನು ಅಂಗೀಕರಿಸಿತು. 1944ರಲ್ಲಿ ನಡೆದ ಗೋಲ್ಪಾರ ಮಹಾಕುಮಾ ಕಿಸಾನ್ ಸಮ್ಮೇಳನದಲ್ಲಿ ಜಮೀನ್ದಾರಿ ಪದ್ಧತಿಯ ರದ್ದಿಗಾಗಿ ನಿರ್ಣಯ ಅಂಗೀಕರಿಸಲಾಯಿತು.

ಆದಿವಾಸಿ ರೈತರನ್ನು ಸಂಘಟಿಸುವ ಸಲುವಾಗಿ, ಕೇವಲ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿದ್ದ ಆದಿವಾಸಿ ಸಂಘವನ್ನು ಪುನರ್ಸಂಘಟಿಸಲು ಕಮ್ಯುನಿಸ್ಟರು ಮುತುವರ್ಜಿ ವಹಿಸಿದರು. ಅದರ ಬ್ಯಾನರ್ ಅಡಿಯಲ್ಲಿ, ಅವರು ಆರ್ಥಿಕ ಸಮಸ್ಯೆಗಳನ್ನೂ ಕೈಗೆತ್ತಿಕೊಳ್ಳಲು ಶುರುಮಾಡಿದರು. ಇದು ಬಂಗ್ಲಾಬಾರಿ, ಬಿಜ್ನಿ ದುವಾರ ಟೀ ತೋಟಗಳ ಗೇಣಿದಾರರನ್ನು ಪ್ರಭಾವಿಸಿತು; ಗೇಣಿಯನ್ನು ಹಣದ ಬದಲು ಭತ್ತದ ರೂಪದಲ್ಲಿ ನೀಡಬೇಕೆಂಬ ನಿಲುವಿನ ವಿರುದ್ಧ ಮತ್ತು ಬಂಗಲೆಯ ಎದುರು ಯಾರೂ ಕೊಡೆಯೊಂದಿಗೆ ಮತ್ತು ಶೂ ಹಾಕಿಕೊಂಡು ಬರಬಾರದೆಂಬ ಹಾಗೂ ತೋಟದ ಮ್ಯಾನೇಜರ್‌ನ ಮತ್ತಿತರ ಕಿರುಕುಳಗಳ ವಿರುದ್ಧ ಮಗುರ್ಮಾರಿಯಲ್ಲಿ ಸಭೆ ನಡೆಸಲಾಯಿತು. ಮ್ಯಾನೇಜರನ ದಬ್ಬಾಳಿಕೆಯ ವಿರುದ್ಧ ಕೆಂಬಾವುಟಗಳನ್ನು ಹಿಡಿದು ದೊಡ್ಡ ಮತಪ್ರದರ್ಶನ ನಡೆಸಲಾಯಿತು. ಆ ನಂತರದಲ್ಲಿ, ಮ್ಯಾನೇಜರನ ಬಂಗಲೆ ಎದುರಿನ ರಸ್ತೆಯಲ್ಲಿ ಓಡಾಡುವಾಗಿನ ನಿರ್ಬಂಧ ತೆಗೆದುಹಾಕಲಾಯಿತು.

ಯುದ್ಧಾನಂತರದ ಸಾಮ್ರಾಜ್ಯಶಾಹಿ–ವಿರೋಧಿ ಜನಾಂದೋಲನದ ಅವಧಿಯಲ್ಲಿ, ಸುರ್ಮಾ ಕಣಿವೆಯ ಪೂರ್ವ ದಿಕ್ಕಿನ ಪ್ರದೇಶಗಳಲ್ಲಿನ ಅತ್ಯಂತ ದಮನಕ್ಕೊಳಗಾಗಿದ್ದ ರೈತ ವಿಭಾಗವು ಅರೆಗುಲಾಮಿ ನಂಕಾರ್ ಪದ್ಧತಿಗೆ ಒಂದು ತೀವ್ರವಾದ ಪೆಟ್ಟನ್ನು ಕೊಟ್ಟಿತು. 1946ರಲ್ಲಿ ಪ್ರಾರಂಭವಾಗಿ ವಿಭಜನೆಯ ನಂತರದ ಅವಧಿಯಲ್ಲೂ ಮುಂದುವರಿದ ದೊಡ್ಡ ಸಂಘಟಿತ ಚಳುವಳಿ ಅದಾಗಿತ್ತು. ಜಮೀನ್ದಾರರನ್ನು ದ್ವೇಷಿಸುತ್ತಿದ್ದ ಗೇಣಿದಾರರು ಹೋರಾಟವನ್ನು ಬೆಂಬಲಿಸಿದರು ಮತ್ತು ಅದು ಹೋರಾಟದ ತೀಕ್ಷ್ಣತೆಯನ್ನು ಇನ್ನೂ ಹೆಚ್ಚಿಸಿತು.

1946ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು ಜಮೀನ್ದಾರರ ಜತೆ ಶಾಮೀಲಾಗಿ ತೀವ್ರ ದಮನಕಾರಿ ದಾಳಿಯನ್ನು ಹರಿಬಿಟ್ಟಿತು. ವಿಭಜನೆಯ ನಂತರವೂ, ಸಿಲ್ಹೆಟ್ ಪೂರ್ವ ಪಾಕಿಸ್ತಾನ(ಬಾಂಗ್ಲಾದೇಶ)ದ ಭಾಗವಾದ ಮೇಲೂ, ನಂಕಾರರು ಕೆಂಬಾವುಟದ ಅಡಿಯಲ್ಲಿ ಹೋರಾಟ ಮುಂದುವರಿಸಿದರು. ಆಗ ಆದ ಒಂದೇ ಬದಲಾವಣೆಯೆಂದರೆ, ಭಯಾನಕ ದಬ್ಬಾಳಿಕೆ ಕಾಂಗ್ರೆಸ್ ಸರ್ಕಾರದ ಬದಲು ಮುಸ್ಲಿಂ ಲೀಗಿನದಾಗಿತ್ತು. ಚಳುವಳಿಯನ್ನು ಬಗ್ಗುಬಡಿಯಲು ಆಗದ ಲೀಗ್ ಸರ್ಕಾರ ನಂಕಾರರ ಕೆಲವು ಬೇಡಿಕೆಗಳನ್ನು ಈಡೇರಿಸಿತು.


1944ರಿಂದ ಯುದ್ಧ ಕಾಲದ ದಾಳಿಗಳಾದ ಬರಗಾಲದ ನಮೂನೆಯ ಸ್ಥಿತಿಗಳು, ತೀವ್ರ ಬೆಲೆ ಏರಿಕೆ ಹಾಗೂ ಕಾಳ ಸಂತೆಗಳನ್ನು ವಿರೋಧಿಸುವ ಮೂಲಕ ಕಿಸಾನ್ ಸಭಾವು ತನ್ನ ನೆಲೆಯನ್ನು ಉತ್ತಮ ಪಡಿಸಿಕೊಂಡಿತು. ಸ್ವಾತಂತ್ರ್ಯ ಚಳುವಳಿಯನ್ನು ಕಟ್ಟಿ ದಂತಕತೆಯಾಗಿದ್ದ ಮತ್ತು ಮಣಿಪುರದ ಕಮ್ಯುನಿಸ್ಟ್ ಚಳುವಳಿಯ ನೇತಾರರೂ ಆಗಿದ್ದ ಕಾಂ.ಇರಾವತ್ ಸಿಂಗ್ ಅವರು ಕಚಾರ್ ನಲ್ಲಿ ಕಿಸಾನ್ ಕಾರ್ಯವನ್ನು ಕೈಗೆತ್ತಿಕೊಂಡ ಮೇಲೆ ಅದರ ಸಾಮುದಾಯಿಕ ಪ್ರಭಾವ ಹೆಚ್ಚಾಯಿತು. ಅವರು ಸಿಲ್ಹೆಟ್ ಜೈಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯಲ್ಲಿ ಅನೇಕ ಕಮ್ಯುನಿಸ್ಟರನ್ನು ಭೇಟಿ ಮಾಡಿದ ನಂತರ ಕಮ್ಯುನಿಸ್ಟರಾದವರು. ಬಿಡುಗಡೆಯಾದ ಮೇಲೆ ಮಣಿಪುರ ಪ್ರವೇಶಕ್ಕೆ ನಿರ್ಬಂಧ ಹೇರಿದ್ದರಿಂದಾಗಿ, ಸಿಲ್ಚಾರಿನಲ್ಲಿಯೇ ಉಳಿದುಕೊಂಡು ಕಿಸಾನ್ ಸಭಾವನ್ನು ಗಟ್ಟಿಗೊಳಿಸಲು ಕೆಲಸ ಮಾಡಿದರು. ಬಂಗಾಳದ ತೇಭಾಗಾ ಹೋರಾಟದ ಪ್ರಭಾವದ ಜತೆಯಲ್ಲೇ, ಇಲ್ಲಿ ಮಾಡಿದ ತಳಮಟ್ಟದ ಕೆಲಸವೂ ಸೇರಿಕೊಂಡು ಇದೇ ವಿಷಯಗಳ ಮೇಲಿನ ಆಧಾರದಲ್ಲಿ 1946ರಲ್ಲಿ ಕಾಚಾರಿನಲ್ಲಿ ಹೋರಾಟ ಸಿಡಿದೆದ್ದಿತು. ಅದು ಹತ್ತಾರು ಸಾವಿರ ಪಾಲುಬೆಳೆಗಾರರು, ಬಡ ರೈತರು ಮತ್ತು ಕೃಷಿ ಕೂಲಿಗಾರರ ನಡುವೆ ಜನಪ್ರಿಯವಾಯಿತು.

ಸಾಧ್ಯವಾದ ಎಲ್ಲಾ ರೀತಿಯ ಕ್ರೂರ ದಮನಕಾರಿ ದಾಳಿಗಳ ಮೂಲಕ ಹೋರಾಟವನ್ನು ಬಗ್ಗುಬಡಿಯಲು ಕಾಂಗ್ರೆಸ್ ಸರ್ಕಾರ ಯತ್ನಿಸಿತು. ಮತ್ತೊಂದೆಡೆ, ದೃಢಸಂಕಲ್ಪ ಮಾಡಿದ್ದ ರೈತರು ತಮ್ಮ ಹೋರಾಟವನ್ನು ಉತ್ತುಂಗಕ್ಕೆ ಒಯ್ದು ತಮ್ಮ ಧೀರತನವನ್ನು ಮತ್ತು ಶಿಸ್ತನ್ನು ಪ್ರದರ್ಶಿಸಿದರು.


ಪಾಲುಬೆಳೆಗಾರರ ಮೇಲೆ ಹಲ್ಲೆ ಮಾಡಿದ ಪೋಲಿಸರನ್ನು ಮಹಿಳಾ ಕಾರ್ಯಕರ್ತರು ಎದುರಿಸಿ ನಿಂತರು ಮತ್ತು ಅವರು ಹಿಂದೆ ಸರಿಯುವಂತೆ ಮಾಡಿದರು. ಜಿಲ್ಲೆಯಾದ್ಯಂತ ಆ ಮಹಿಳಾ ನಾಯಕಿಯರ ಹೆಸರು ಜನಪ್ರಿಯವಾಯಿತು. ಇಮಾಚೌ ದೇವಿ, ಮಣಿಪುರದ ಮಹಿಳಾ ಕೃಷಿ ಕೂಲಿಗಾರ್ತಿ ಮತ್ತು ಇತರ ನಾಲ್ಕು ರೈತರು 1949ರಲ್ಲಿ ಪಾಲುಬೆಳೆಗಾರರ ಭತ್ತವನ್ನು ರಕ್ಷಿಸುತ್ತಿರುವಾಗ ಅಸಾಮ್ ರೈಫಲ್ಸ್‌ರ ಗುಂಡಿಗೆ ಬಲಿಯಾದರು. ಪಾಲುಬೆಳೆಗಾರರ ಭತ್ತವನ್ನು ಕಸಿದುಕೊಂಡುಹೋಗುತ್ತಿದ್ದ ಜಮೀನ್ದಾರರಿಗೆ ಪೋಲಿಸರು ಸಹಾಯ ಮಾಡುತ್ತಿದ್ದರು. ಮತ್ತೊಂದೆಡೆ, ಹೋರಾಡುವ ರೈತರು ಲಾರಿಗಳನ್ನು ತಡೆದು ತಮ್ಮ ಪಾಲಿನ ಭತ್ತವನ್ನು ಹಿಂತಿರುಗಿಸಲು ಕಾದಾಡುತ್ತಿದ್ದಾಗ ಅವರ ಮೇಲೆ ದಾಳಿ ಮಾಡಿದರು ಮತ್ತು ಕೊಂದರು ಕೂಡ.

ಈ ಹೋರಾಟ ಮತ್ತು ಅದರ ನಂತರ 1948–50ರ 'ಜೀವ ಕೊಟ್ಟೇವು, ಭತ್ತ ಕೊಡುವುದಿಲ್ಲ' ಎಂಬ ಘೋಷಣೆಯೊಂದಿಗೆ ಅಸ್ಸಾಮಿನ ಬ್ರಹ್ಮಪುತ್ರ ಕಣಿವೆ ಜಿಲ್ಲೆಯ ಕಿಸಾನ್ ಹೋರಾಟವು ಪಾಲುಬೆಳೆಗಾರರ ಕಾಯಿದೆಯೊಂದನ್ನು ಕಾಂಗ್ರೆಸ್ ಸರ್ಕಾರವು ಅನಿವಾರ್ಯವಾಗಿ ಅಂಗೀಕರಿಸುವಂತೆ ಮಾಡಿತು. ಮತ್ತು ಇನ್ನೂ ಕೆಲವು ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡಿತು. ತಮ್ಮ ಕಹಿ ಅನುಭವಗಳಿಂದ ರೈತರು ಕಾಂಗ್ರೆಸ್ ಸರ್ಕಾರವು ಜಮೀನ್ದಾರರ ಪರವಾಗಿದೆಯೇ ವಿನಃ ತಮ್ಮ ಪರವಾಗಿಲ್ಲ ಎನ್ನುವುದನ್ನು ಮನಗಂಡರು.

11 ವರ್ಷಗಳಲ್ಲೇ ಅತಿ ಕಡಿಮೆ ಜಿಡಿಪಿ ಬೆಳವಣಿಗೆ ದರ



ಎರಡನೇ ಮೋದಿ ಸರಕಾರ ತನ್ನ ಮೊದಲ ವರ್ಷವನ್ನು ಪೂರೈಸಿದ ಹಿಂದಿನ ದಿನವೇ ರಾಷ್ಟ್ರೀಯ ಸಂಖ್ಯಾ ಕಚೇರಿ(ಎನ್.ಎಸ್ಒ.) 2019–20 ನೇ ಹಣಕಾಸು ವರ್ಷದ ಅಂಕಿ–ಅಂಶಗಳನ್ನು ಬಿಡುಗಡೆ ಮಾಡಿದೆ. ಇದರ ಪ್ರಕಾರ ನಮ್ಮ ಆಳುವ ಮಂದಿ ಅಭಿವೃದ್ಧಿಯ ಪ್ರಮುಖ ಮಾನದಂಡವೆಂದು ಪರಿಗಣಿಸುವ ಒಟ್ಟು ಆಂತರಿಕ ಉತ್ಪನ್ನ, ಅಂದರೆ ಜಿ,ಡಿಪಿ. ಯ ಬೆಳವಣಿಗೆ ದರ ಕಳೆದ 11 ವರ್ಷಗಳಲ್ಲೇ ಅತೀ ಕಡಿಮೆ ಮಟ್ಟಕ್ಕೆ ಇಳಿದಿದೆ. 2019–20ರ ಬಜೆಟ್ ಅಂದಾಜು ಈ ಬೆಳವಣಿಗೆ ದರ 8.5ಶೇ. ಇರುತ್ತದೆ ಎಂದಿತ್ತು. ಆದರೆ ಎನ್.ಎಸ್.ಒ. 5ಶೇ.ಕ್ಕೆ ಇಳಿಯಬಹುದು ಎಂದಿತ್ತು. ಈಗ ವಾಸ್ತವ ದರ ನ್ನೂ ಕಡಿಮೆಯೆಂದು ಖಚಿತವಾಗಿದೆ.



1.2 ಕೋಟಿ ಕಾಲಾಳುಗಳು ಬಡತನದ ರೇಖೆಯನ್ನು ದಾಟಲಿದ್ದಾರೆ
ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ ಆಫ್ ಇಂಡಿಯ

ಈ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ, ಅಂದರೆ ಜನವರಿ–ಮಾರ್ಚ್ 2020 ರ ಅವಧಿಯಲ್ಲಿ ಈ ಬೆಳವಣಿಗೆ ದರ, ಹಿಂದಿನ ಮೂರೂ ತ್ರೈಮಾಸಿಕಕ್ಕಿಂತಲೂ ಕೆಳಕ್ಕೆ, 3.1 ಶೇ. ಕ್ಕೆ ಕುಸಿದಿದೆ ಎಂದು ಎನ್.ಎಸ್.ಒ. ಲೆಕ್ಕ ಹಾಕಿದೆ. ಇದರಿಂದಾಗಿ ಒಟ್ಟು 2019–20 ರ ವರ್ಷದ ಜಿಡಿಪಿ ಬೆಳವಣಿಗೆ ದರ 4.2ಶೇ. ಆಗಿದೆ.

ಜನವರಿ– ಮಾರ್ಚ್ ಅವಧಿಯಲ್ಲಿ ಇದು 2.2ಶೇ ಕ್ಕೆ ಕುಸಿಯಬಹುದು ಎಂದು ಕೆಲವರು ಲೆಕ್ಕ ಹಾಕಿದ್ದರು. ಆದರೆ ಹಾಗಾಲಿಲ್ಲವಲ್ಲ ಎಂದು ಸರಕಾರ ಸಮಾಧಾನ ಪಟ್ಟುಕೊಳ್ಳುವಂತಾಗಿದೆ. ಈ ಅವಧಿಯಲ್ಲಿ ಕೃಷಿ ಉತ್ಪಾದನೆ 5.9ಶೇ. ಮತ್ತು ಹಣಕಾಸು ವರ್ಷದ ಕೊನೆಯಲ್ಲಿ ಸಾರ್ವಜನಿಕ ಆಡಳಿತ, ರಕ್ಷಣೆ ಮತ್ತು ಇತರ ಸೇವೆಗಳಲ್ಲಿ ಸರಕಾರದ ವೆಚ್ಚ 10.1 ಶೇ. ಹೆಚ್ಚಳವನ್ನು ದಾಖಲಿಸಿದ್ದರಿಂದಾಗಿ ಅದು 3.1ಶೇ. ವನ್ನಾದರೂ ತೋರಿಸಿದೆ.

ಬಳಕೆದಾರರ ಬೇಡಿಕೆಯಲ್ಲಿ ಇಳಿಕೆಯಾಗಿರುವುದು, ಹೂಡಿಕೆಗಳು ಮತ್ತು ರಫ್ತುಗಳಂತೂ ಋಣಾತ್ಮಕ ಬೆಳವಣಿಗೆಗೆ, ಇಳಿದಿರುವುದು, ಅಂದರೆ ಬೆಳವಣಿಗೆ ಕಾಣುವ ಬದಲು ಮೊದಲಿಗಿಂತಲೂ ಕಡಿಮೆಯಾಗಿರುವುದು ಆತಂಕಕಾರಿ ಸಂಗತಿಗಳು ಎಂಧು ಹೇಳಲಾಗುತ್ತಿದೆ. ಸರಕಾರದ ಆದಾಯಗಳಲ್ಲೂ 3.4ಶೇ.ಇಳಿಕೆಯಾಗಿದೆ. ಇದರಿಂದಾಗಿ ಸರಕಾರ ಬಹಳಷ್ಟು ಭಯಪಡುವ ವಿತ್ತೀಯ ಕೊರತೆ ಬಜೆಟ್ ನಲ್ಲಿ ಅಂದಾಜು ಮಾಡಿದ್ದ 3.8ಶೇ.ವನ್ನು ದಾಟಿ 4.6ಶೇ.ಕ್ಕೆ ಏರಿದೆ.

ಈ ವೇಳೆಗೆ ಲಾಕ್‌ಡೌನ್ ಪ್ರಭಾವ ಇನ್ನೂ ಬಿದ್ದಿರಲಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು.

ಕೋಟ್ಯಂತರ ವಲಸೆ ಕಾರ್ಮಿಕರು ಉದ್ಯೋಗವಿಲ್ಲದೆ, ಆದಾಯವಿಲ್ಲದೆ, ಅನ್ನ–ನೀರುಗಳಿಲ್ಲದೆ ಪರದಾಡುವಂಥ ಪರಿಸ್ಥಿತಿಯಲ್ಲಿದ್ದಾರೆ ಎಂಬುದು ಪ್ರತಿದಿನ ಎದ್ದು ಕಾಣುತ್ತಿದೆ. ಲಾಕ್‌ಡೌನಿನ ಪರಿಣಾಮವಾಗಿ ಜಿಡಿಪಿಯಲ್ಲಿ 5ರಿಂದ 7ಶೇ.ದ ವರೆಗೂ ಇಳಿಕೆಯಾಗಬಹುದು, ಅಂದರೆ ಜಿಡಿಪಿ ಬೆಳವಣಿಗೆಯೂ 2020–21 ರ ಮೊದಲ ತ್ರೈಮಾಸಿಕದಲ್ಲಿ ಋಣಾತ್ಮಕಗೊಳ್ಳವುದು, ಮೈನಸ್‌ಗೆ ಇಳಿಯುವುದು ಖಂಡಿತವೆಂಬಂತೆ ಕಾಣುತ್ತದೆ. ರಿಝರ್ವ್ ಬ್ಯಾಂಕ್ ಗವರ್ನರ್ ಈ ಬಗ್ಗೆ ಆಗಲೇ ಎಚ್ಚರಿಕೆ ನೀಡಿದ್ದಾರೆ. ಏಕೆಂದರೆ ಕೈಗಾರಿಕಾ ಉತ್ಪಾದನೆ ಮತ್ತು ರಫ್ತು ಆಗಲೇ ಮೈನಸ್ ಗೆ ಇಳಿದಿವೆ. ಉದ್ಯೋಗಹೀನತೆ 8ಶೇ.ದಿಂದ 25ಶೇ,ಕ್ಕೆ ನೆಗೆದಿದೆ. 1.2 ಕೋಟಿ ಜನರು ಈ ಅವಧಿಯಲ್ಲಿ ಕಡು ಬಡತನಕ್ಕೆ ತಳ್ಳಲ್ಪಟ್ಟಿದ್ದಾರೆ ಎಂದು ವರದಿಯಾಗಿದೆ.

ಪ್ರಧಾನ ಮಂತ್ರಿಗಳು ತಮ್ಮ ಎರಡನ ಆಳ್ವಿಕೆಯ ಮೊದಲ ವಾರ್ಷಿಕೋತ್ಸವದ ಪ್ರಸಾರ ಭಾಷಣ ಮಾಡಿಲ್ಲ, ಬದಲಿಗೆ ದೇಶಬಾಂಧವರಿಗೆ ಒಂದು ಪತ್ರ ಬರೆದಿದ್ದಾರೆ. ಅದನ್ನು 10 ಕೋಟಿ ಮನೆಗಳಿಗೆ ತಲುಪಿಸುವ ಬೃಹತ್ ಕಾರ್ಯಕ್ರಮವನ್ನು ಆಳುವ ಪಕ್ಷ ಹಾಕಿಕೊಂಡಿದೆ ಎನ್ನಲಾಗಿದೆ. ಅದರಲ್ಲಿ ಈ ಒಂದು ವರ್ಷವನ್ನು 'ಸುವರ್ಣ ಅಧ್ಯಾಯ' ಎನ್ನಲಾಗಿದೆ. ಇದನ್ನೇ ಸುವರ್ಣ ಕಾಲ ಎನ್ನುವುದಾದರೆ ಮುಂಬರುವ ಕಾಲವನ್ನು ಹೇಗೆ ವರ್ಣಿಸುತ್ತಾರೋ!

'ರಣಹದ್ದು' ರೂಪಕ: ಸಂವೇದನಾಶೂನ್ಯ ಸರಕಾರಕ್ಕೆ ತಕ್ಕ ಕಾನೂನು ಅಧಿಕಾರಿ!



ಕೊನೆಗೂ ದೇಶದ ಸರ್ವೋಚ್ಚ ನ್ಯಾಯಾಲಯ ದೇಶವನ್ನು ಕಳೆದ ಎರಡು ತಿಂಗಳಿಂದ ಎಲ್ಲಕ್ಕಿಂತ ಹೆಚ್ಚಾಗಿ ಬಾಧಿಸುತ್ತಿರುವ ವಲಸೆ ಕಾರ್ಮಿಕರ ಪ್ರಶ್ನೆಯನ್ನು ತಾನಾಗಿಯೇ ಎತ್ತಿಕೊಳ್ಳಲು ನಿರ್ಧರಿಸಿ ಮೇ 28ರಂದು ವಿಚಾರಣೆಯನ್ನು ಆರಂಭಿಸಿದಾಗ ಸರಕಾರದ ಪರವಾಗಿ ವಾದಿಸಲು ಸಾಲಿಸಿಟರ್–ಜನರಲ್(ಎಸ್.ಜಿ.) ತುಷಾರ್ ಮೆಹ್ತ ಎದ್ದು ನಿಂತಾಗ ದೇಶಕ್ಕೆ ಇನ್ನೊಂದು ಆಘಾತವೇ ಕಾದಿತ್ತು. ರಸ್ತೆಯ ಮೇಲೆ ಒಬ್ಬರೂ ವಲಸೆ ಕಾರ್ಮಿಕರು ಇಲ್ಲ, ಸರಕಾರ ಎಲ್ಲರ ಯೋಗಕ್ಷೇಮಕ್ಕೆ ವ್ಯವಸ್ಥೆ ಮಾಡಿದೆ ಎಂದು ತಾನು ಈ ಮೊದಲು ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ಹೇಳಿದ ಮಾತನ್ನು ನ್ಯಾಯಾಲಯ ನಂಬುತ್ತಿಲ್ಲ ಎಂಬುದಕ್ಕೆ ಈ ವಿಚಾರಣೆಯೇ ಸಾಕ್ಷಿ ಎಂಬ ಪರಿವೆಯೂ ಇಲ್ಲದೆ ಆಡಿದ ಅವರ ಎಲ್ಲೆಮೀರಿದ ಮಾತುಗಳು ಮತ್ತು ಅದಕ್ಕೆ ಕಳಸವಿಟ್ಟಂತೆ ಒಂದು ಸುಳ್ಳು ವಾಟ್ಸ್‌ಆಪ್ ಕತೆಯ ಉದ್ಧರಣೆ ಈಗ ವ್ಯಾಪಕ ಟೀಕೆಗೆ ಒಳಗಾಗಿದೆ.

ಎಸ್.ಜಿ. ಯವರು ಸರಕಾರ ಈ ಪ್ರಶ್ನೆಯನ್ನು ನಿಭಾಯಿಸಲು ಕೈಗೊಂಡಿದೆ ಎನ್ನಲಾದ ಕ್ರಮಗಳ ಬಗ್ಗೆ ಹೇಳುತ್ತ "ಕೇಂದ್ರ ಸರಕಾರ ಬಹಳಷ್ಟು ಕ್ರಮಗಳನ್ನು ಕೈಗೊಳ್ಳುತ್ತಿದೆ, ಆದರೆ ಪ್ರಳಯವೇ ಕಾದಿದೆ ಎನ್ನುವ ಪ್ರವಾದಿಗಳು ನಕಾರಾತ್ಮ ಕತೆಯನ್ನು ಹರಡುತ್ತಿದ್ದಾರೆ" ಎಂದು ಕಟಕಿಯಾಡಿದರು. ಸಾಮಾಜಿಕ ಮಾಧ್ಯಮಗಳಲ್ಲಿ ಬರೆಯುತ್ತಿರುವ, ಸಂದರ್ಶನಗಳನ್ನು ಕೊಡುತ್ತಿರುವ ಇವರೆಲ್ಲರೂ "ಆರಾಮ ಕುರ್ಚಿಯ ಬುದ್ಧಿಜೀವಿಗಳು", ದೇಶದ ಪ್ರಯತ್ನಗಳನ್ನು ಗುರುತಿಸುವ ದೇಶಪ್ರೇಮವೇ ಇರದವರು ಎಂದರು.

ಮುಂದುವರೆದು ಅವರು ರಣಹದ್ದು ಮತ್ತು ಮಗುವಿನ ಒಂದು ಕತೆಯನ್ನು ನಿರೂಪಿಸಿದರು: "ಒಬ್ಬ ಫೊಟೋಗ್ರಾಫರ್ ಇದ್ದ, ಆತ 1983ರಲ್ಲಿ ಸುಡಾನ್‌ಗೆ ಹೋದ. ಒಂದು ಭಯಗ್ರಸ್ತ ಮಗು ಇತ್ತು. ಒಂದು ರಣಹದ್ದು ಆ ಮಗು ಸಾಯುವುದನ್ನು ಕಾಯುತ್ತಿತ್ತು. ಆತ ಅದರ ಫೋಟೋ ತೆಗೆದ. ಅದು ನ್ಯೂಯಾರ್ಕ್ ಟೈಮ್ಸದಲ್ಲಿ ಪ್ರಕಟವಾಯಿತು. ಮತ್ತು ಆ ಫೊಟೋಗ್ರಾಫರ್‌ಗೆ ಆ ಚಿತ್ರಕ್ಕಾಗಿ ಪುಲಿಟ್ಝರ್ ಪ್ರಶಸ್ತಿ ಸಿಕ್ಕಿತು. ನಾಲ್ಕು ತಿಂಗಳ ನಂತರ ಆತ ಆತ್ಮಹತ್ಯೆ ಮಾಡಿಕೊಂಡ. ಒಬ್ಬ ಪತ್ರಕರ್ತ ಆತನನ್ನು ಕೇಳಿದ್ದ– ಆ ಮಗುವಿಗೆ ಮುಂದೇನಾಯ್ತು? ಆತನೆಂದ– ನಂಗೊತ್ತಿಲ್ಲ, ನಾನು ಮನೆಗೆ ಮರಳಬೇಕಾಗಿತ್ತು. ನಂತರ ವರದಿಗಾರ ಆತನನ್ನು ಕೇಳಿದ–ಅಲ್ಲಿ ಎಷ್ಟು ರಣಹದ್ದುಗಳಿದ್ದವು? ಆತ ಹೇಳಿದ– ಒಂದು. ವರದಿಗಾರ ಹೇಳಿದ–ಅಲ್ಲ, ಎರಡು ರಣಹದ್ದುಗಳಿದ್ದವು, ಅವುಗಳಲ್ಲಿ ಒಂದು ಕ್ಯಾಮರಾ ಹಿಡಿದಿತ್ತು.."

ಇದು ಕಳೆದ ಕನಿಷ್ಟ ಒಂದು ವಾರದಿಂದ, ಮುಖ್ಯವಾಗಿ ಪ್ರಧಾನಮಂತ್ರಿಗಳ ಬೆಂಬಲಿಗರ ನಡುವೆ ವೈರಲ್ ಆಗಿರುವ ಒಂದು ವಾಟ್ಸ ಆಪ್ ಕತೆ. ಇದನ್ನು ದೇಶದ ಎರಡನೇ ಅತ್ಯುನ್ನತ ಕಾನೂನು ಅಧಿಕಾರಿಯ ಹುದ್ದೆಯಲ್ಲಿರುವವರು ದೇಶದ ಸರ್ವೋಚ್ಚ ನ್ಯಾಯಾಲಯದ ಒಂದು ಪೀಠದ ಮುಂದೆ ಶಬ್ದಶಃ ಒಪ್ಪಿಸಿದರು! ಇದು ಎಂತಹ ಆಘಾತಕರ ಸಂಗತಿ ಎಂದು ಈ ಕತೆಯ ಸತ್ಯಾಸತ್ಯತೆಯನ್ನು ಶೋಧಿಸಿರುವ 'ಆಲ್ಟ್ ನ್ಯೂಸ್' ಬಯಲಿಗೆಳೆದಿದೆ. ನಿಜ, ಈ ಸುಳ್ಳು ವಾಟ್ಸ್‌ಆಪ್ಸ್ ನ್ನು ಒಪ್ಪಿಸುವಾಗಲೂ ಈ ಎಸ್.ಜಿ. ಒಂದು ತಪ್ಪುಮಾಡಿದರು. ಇದು 1993 ರಲ್ಲಿ ನಡೆದ ಒಂದು ಘಟನೆಯ ಹುಸಿ ನಿರೂಪಣೆ, 1983 ರದ್ದಲ್ಲ. ನಿಜ. ಅದೇನೂ ದೊಡ್ಡ ತಪ್ಪಲ್ಲ. ಆದರೆ ವಲಸೆ ಕಾರ್ಮಿಕರ ಪ್ರಶ್ನೆಯ ಬಗ್ಗ ಆತನ ಮತ್ತು ಆತ ಪ್ರತಿನಿಧಿಸುವ ಸರಕಾರದ ನಿಜವಾದ ಮನೋಭಾವವನ್ನು ಅದು ಬಿಂಬಿಸಿದೆ.



ಎದ್ದೇಳಮ್ಮಾ, ಬುಲೆಟ್ ರೈಲು ಬರಲಿದೆ!
ಕೃಪೆ: ಆರ್.ಪ್ರಸಾದ್

ಎಸ್.ಜಿ.ಯವರು ಹೇಳಿದ ಕತೆಯ ಫೊಟೋಗ್ರಾಫರ್ ಹೆಸರು ಕೆವಿನ್ ಕಾರ್ಟರ್. ಈತ ಫೊಟೋಗ್ರಾಫರ್ ಮಾತ್ರವಲ್ಲ, ದಕ್ಷಿಣ ಆಫ್ರಿಕಾದ ವರ್ಣದ್ವೇಷಿ ಸರಕಾರದ ಅತ್ಯಾಚಾರಗಳನ್ನು ಮತ್ತು ಆಫ್ರಿಕಾ ಖಂಡದ ದೇಶಗಳನ್ನು ಪೀಡಿಸಿದ ಕ್ಷಾಮಗಳ ದಾಖಲೆಗಳನ್ನು ತಯಾರಿಸುವಲ್ಲಿ ಗಮನಾರ್ಹ ಕೊಡುಗೆ ನೀಡಿದ ಹೆಸರಾಂತ ಫೊಟೋಜರ್ನಲಿಸ್ಟ್.

ಈ ಕತೆಯ ಹಲವು ಆವೃತ್ತಿಗಳು ಬಹಳ ವರ್ಷಗಳಿಂದ ಪ್ರಚಲಿತವಾಗಿವೆ. ಆ ಆವೃತ್ತಿಗಳು ಸತ್ಯಕತೆಯನ್ನು ಹೇಳುವುದಕ್ಕಿಂತ ಹೆಚ್ಚಾಗಿ ಕತೆಯ ನಿರೂಪಕರ ಆಶಯ/ಮನೋಭಾವಗಳನ್ನು ಬಿಂಭಿಸುತ್ತ ಬಂದಿವೆ. ಈ ಎಸ್.ಜಿ.ಯಂತೆ.

ಸತ್ಯ ಸಂಗತಿ ಇಷ್ಟು– ಕೆವಿನ್ ಕಾರ್ಟರ್ ಆ ಮಗುವನ್ನು ಅಲ್ಲಿ ಬಿಟ್ಟು ಮನೆಗೆ ಹೋಗಲಿಲ್ಲ. ಆ ರಣಹದ್ದನ್ನು ಓಡಿಸಲು ಪ್ರಯತ್ನಿಸಿದ. ಆತ ಮಗುವನ್ನು ಎತ್ತಿಕೊಳ್ಳುವಂತಿರಲಿಲ್ಲ. ಏಕೆಂದರೆ ಆ ಕ್ಷಾಮದ ಸಮಯದಲ್ಲಿ ಪತ್ರಕರ್ತರು ಯಾರನ್ನೂ, ಯಾವುದನ್ನೂ ಮುಟ್ಟಬಾರದು ಎಂಬ ನಿಬಂಧನೆಯಿತ್ತು. ಆದ್ದರಿಂದ ರಣಹದ್ದು ಹಾರಿ ಹೋಗುವವರೆಗೂ ಕಾದಿದ್ದು, ಮಗು ಮುಂದೆ ಅದು ಸೇರಬೇಕಾದ ಕೇಂಧ್ರಕ್ಕೆ ಹೋಗುವವರೆಗ ಇದ್ದ.

ಮತ್ತು ಆತನ ಆತ್ಮಹತ್ಯೆಗೆ ಎಸ್.ಜಿ. ನಿರೂಪಿಸಿದ ಹುಸಿ ವಾಟ್ಸ್ ಆಪ್ ಕತೆ ಸೂಚಿಸುವಂತೆ ಈ ಘಟನೆ ಕಾರಣ ಎನ್ನುವುದಕ್ಕೆ ಯಾವ ದಾಖಲೆಯೂ ಇಲ್ಲ. ಇನ್ನೊಂದು ರಣಹದ್ದು ಇತ್ತು, ಅದರ ಕೈಯಲ್ಲಿ ಕ್ಯಾಮರಾ ಇತ್ತು ಎಂದು ಮತ್ತೊಬ್ಬ ವರದಿಗಾರ ಹೇಳಿರುವ ದಾಖಲೆಯೂ ಇಲ್ಲ. "ಪತ್ರಕಾರಿತೆಗೆ ಕಾರ್ಟರ್ ನ ಕೊಡುಗೆಯನ್ನು ಅರ್ಥವಾಡಿಕೊಳ್ಳಲು, ಆತನ ನೈತಿಕ ತುಮುಲಗಳು, ಮತ್ತು ಆಫ್ರಿಕಾ ಖಂಡದಲ್ಲಿನ ದುರಂತಗಳನ್ನು ಒಂದಾದ ಮೇಲೊಂಧರಂತೆ ವರದಿ ಮಾಡುವಾಗ ಅನುಭವಿಸಿದ ಮಾನಸಿಕ ಆಘಾತಗಳನ್ನು ಅರ್ಥಮಾಡಿಕೊಳ್ಳಲು ವಿಶ್ವಾಸಾರ್ಹ ಮಾಹಿತಿ ಮೂಲಗಳನ್ನು ಹುಡುಕುವ ಬದಲು ಶ್ರೀ ಮೆಹ್ತ ರವರು ಹೇಗೆ ಎರವಲು ತಂದು ಒಂದು ಸುಳ್ಳು ವಾಟ್ಸ್ ಆಪ್ ಫಾರ್ವರ್ಡನ್ನು ಒಂದು ಸತ್ಯ ಸಂಗತಿ ಎಂಬಂತೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಇಟ್ಟಿದ್ದಾರೆ ಎಂಬುದನ್ನು ಆಲ್ಟ್ ನ್ಯೂಸ್ ನಂತಹ ಸತ್ಯಶೋಧಕ ಸಂಘಟನೆಗಳು ಬಯಲಿಗೆ ತಂದಿವೆ" ಎಂಧು ದಿ ಹಿಂದು ಪತ್ರಿಕೆಯ ವಾಚಕರ ಸಂಪಾದಕರಾಗಿರುವ ಎ.ಎ.ಪನ್ನೀರ್ಸೆಲ್ವನ್ ಹೇಳುತ್ತಾರೆ(ದಿ ಹಿಂದು, ಜೂನ್ 1).

ಪತ್ರಕಾರಿತೆಯಲ್ಲಿ ಮೂರು ಅವಿಭಾಜ್ಯ ಅಂಗಗಳಿವೆ– ಸಾಕ್ಷಿಯಾಗಿರುವುದು, ತಾದಾತ್ಮ್ಯತೆ ಅಥವ ಮಾನವೀಯತೆ ಮತ್ತು ಅಧಿಕಾರಸ್ಥರ ಹೊಣೆಗಾರಿಕೆಯನ್ನು ನೆನಪಿಸುವುದು ಎಂಬುದು ಮೆಹ್ತರವರಿಗೆ ಗೊತ್ತಿರಬೇಕು ಎಂದೂ ಹೇಳುತ್ತಾರೆ ಪನ್ನೀರ್ ಸೆಲ್ವನ್.

ಆದರೆ ಭಾರತ ಸರಕಾರದ ಎಸ್.ಜಿ. ಆಗಿರುವ ಮೆಹ್ತರವರ ಉದ್ದೇಶ ಈ ಉದಾತ್ತ ಅಂಶಗಳನ್ನು ಅರ್ಥ ಮಾಡಿಕೊಳ್ಳುವುದಂತೂ ಖಂಡಿತಾ ಇರಲಿಕ್ಕಿಲ್ಲ. ಅಖಿಲ ಭಾರತ ಕಾರ್ಯ ನಿರತ ಕ್ಯಾಮರಾಮನ್‌ಗಳ

ಪುಟ 14 ನೋಡಿ

ದಾರಿ ಇಲ್ಲದಂತಾಗಿರುವ ನವ-ಉದಾರ ಬಂಡವಾಳಶಾಹಿ



ಸಮಕಾಲೀನ ಜಾಗತಿಕ ಬಂಡವಾಳಶಾಹಿ, 1930ರ ದಶಕದಂತೆ ಮತ್ತೊಮ್ಮೆ ಮುಂದೆ ಸಾಗಲಾಗದ ಸ್ಥಿತಿಯನ್ನು ತಲುಪಿದ್ದು, ಅದರ ರೀತಿ ರಿವಾಜುಗಳು ಇಲ್ಲಿಯತನಕ ಇದ್ದ ರೀತಿಯಲ್ಲಿ ಇನ್ನು ಮುಂದೆ ಇರಲು ಸಾಧ್ಯವಿಲ್ಲ. ಇದು ಪಾಶ್ಚಿಮಾತ್ಯ ಜಗತ್ತಿನ ಆಳುವ ಮಂದಿಯ ಅರಿವಿಗೆ ಬಂದಿದೆ. ಆದರೆ, ಭಾರತದಲ್ಲಿ ಆಳುವ ಪಡೆಗೆ ಪ್ರಪಂಚದಲ್ಲಿ ಏನೆಲ್ಲಾ ವಿದ್ಯಮಾನಗಳು ಜರುಗುತ್ತಿವೆ ಎಂಬುದರ ಬಗ್ಗೆ ಏನೇನೂ ಅರಿವೇ ಇಲ್ಲ. ನವ ಉದಾರವಾದದ ಕೊನೆಗಾಲವು ಮುಂದುವರೆದ ದೇಶಗಳ ಬೂರ್ಜ್ವಾ ಚಿಂತಕರ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುತ್ತಿದ್ದರೂ ಸಹ, ನಮ್ಮ ಹಿಂದುತ್ವ ಪಡೆಗೆ ಅದು ಕಾಣಿಸುತ್ತಲೇ ಇಲ್ಲ. ಮೋದಿ ಸರಕಾರವು ಈಗಲೂ ಸಹ ನವ ಉದಾರವಾದದ ಅಜೆಂಡಾಕ್ಕೆ ಆತುಕೊಂಡಿರುವುದಷ್ಟೇ ಅಲ್ಲ, ಕೊರೋನಾ ಸಾಂಕ್ರಾಮಿಕ ಜಾಡ್ಯವು ಸೃಷ್ಟಿಸಿರುವ ಈ ಒಂದು ತೀವ್ರ ಮಾನವೀಯ ಬಿಕ್ಕಟ್ಟಿನ ನಡುವೆಯೂ ಅದು ಈ ಅಜೆಂಡಾದಿಂದ ಕೊಂಚವೂ ಮಿಸುಕಾಡುತ್ತಿಲ್ಲ. ಬುದ್ಧಿಗೇಡಿಯಾಗಿಯೇ ವರ್ತಿಸುತ್ತಿದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಲಂಡನ್ನಿನ 'ಫೈನಾನ್ಷಿಯಲ್ ಟೈಮ್ಸ್' ವಿಶ್ವದ ಒಂದು ಅತ್ಯಂತ ಗೌರವಾನ್ವಿತ ಮತ್ತು ವಿಶ್ವಾಸಾರ್ಹ ಬೂರ್ಜ್ವಾ ಪತ್ರಿಕೆ. ಇಂತಹ ಪತ್ರಿಕೆಯೂ ಸಹ, ಬಹಳ ದಿನಗಳಿಂದ ಎಡ ಪಂಥೀಯರು ಹೇಳುತ್ತಿದ್ದ ಸಂಗತಿಯೊಂದನ್ನು ಈಗ ಒಪ್ಪಿಕೊಂಡಿದೆ. ಈ ಪತ್ರಿಕೆಯು, ಏಪ್ರಿಲ್ 3, 2020 ರ ತನ್ನ ಸಂಪಾದಕೀಯದಲ್ಲಿ ಹೀಗೆ ಬರೆದಿತ್ತು: "ಕಳೆದ ನಾಲ್ಕು ದಶಕಗಳಿಂದಲೂ ಪ್ರಚಲಿತವಿರುವ ಆರ್ಥಿಕ ನೀತಿಗಳ ದಿಕ್ಕನ್ನು ಹಿಮ್ಮುಖವಾಗಿ ತಿರುಗಿಸುವ ಸಲುವಾಗಿ ಅವುಗಳ ಆಮೂಲಾಗ್ರ ಸುಧಾರಣೆಗಳನ್ನು ಚರ್ಚೆಗೆ ಒಳಪಡಿಸುವ ಅಗತ್ಯ ಈಗ ಒದಗಿ ಬಂದಿದೆ. ಇನ್ನು ಮುಂದೆ ಸರ್ಕಾರಗಳು ಅರ್ಥವ್ಯವಸ್ಥೆಯಲ್ಲಿ ಹೆಚ್ಚು ಹೆಚ್ಚು ಸಕ್ರಿಯ ಪಾತ್ರ ವಹಿಸಬೇಕಾಗುತ್ತದೆ. ಸರಕಾರಗಳು ಸಾರ್ವಜನಿಕ ಸೇವೆಗಳನ್ನು ಒಂದು ಬಾಧ್ಯತೆ ಎಂದು ನೋಡುವುದರ ಬದಲಿಗೆ ಅವುಗಳನ್ನು ಒಂದು ಹೂಡಿಕೆ ಎಂದು ಕಾಣಬೇಕು. ಶ್ರಮ ಮಾರುಕಟ್ಟೆಯ ಅಭದ್ರತೆಯನ್ನು ತಿಳಿಗೊಳಿಸಲು ಮಾರ್ಗೋಪಾಯ ಗಳನ್ನು ಕಂಡುಕೊಳ್ಳಬೇಕು. ಸಂಪತ್ತಿನ ಮರುವಿತರಣೆಯ ವಿಷಯವನ್ನು ಮತ್ತೊಮ್ಮೆ ಕಾರ್ಯಸೂಚಿಯಲ್ಲಿ ಇಟ್ಟುಕೊಳ್ಳಬೇಕಿದೆ.....ವಿಲಕ್ಷಣ ನೀತಿಗಳು ಎಂದು ಇತ್ತೀಚಿನವರೆಗೆ ಪರಿಗಣಿಸಲಾಗಿದ್ದ ಕನಿಷ್ಠ ವರಮಾನ (ಬೇಸಿಕ್ ಇನ್‌ಕಮ್), ಸಂಪತ್ತು ತೆರಿಗೆ ಇತ್ಯಾದಿಗಳ ಮಿಶ್ರಣವನ್ನು ಒಳಗೊಂಡ ನೀತಿಗಳನ್ನು ಸರಕಾರಗಳು ಅನುಸರಿಸಬೇಕಾಗುತ್ತದೆ."

ಮೋದಿ ಸರ್ಕಾರದ ಆರ್ಥಿಕ ನೀತಿಗಳು, ಫೈನಾನ್ಷಿಯಲ್ ಟೈಮ್ಸ್ ಈಗ ಏನು ಸಲಹೆ ಕೊಟ್ಟಿದೆಯೋ ಅವುಗಳಿಗೆ ತದ್ವಿರುದ್ಧವಾಗಿವೆ ಎಂಬ ಅಂಶವನ್ನು ಈ ಸಂಪಾದಕೀಯದಿಂದ ಗಮನಿಸಬಹುದಾಗಿದೆ. ಬಿಜೆಪಿಯ ಆಡಳಿತವಿರುವ ರಾಜ್ಯಗಳಲ್ಲಿ ಕಾರ್ಮಿಕ ಕಾನೂನುಗಳನ್ನು ಅಮಾನತಿನಲ್ಲಿಡುವ ಕ್ರಮವು ಶ್ರಮ ಮಾರುಕಟ್ಟೆಯ ಅಭದ್ರತೆಯನ್ನು ಕಡಿಮೆ ಮಾಡುವುದರ ಬದಲು ಅದನ್ನು ಹೆಚ್ಚು ಅಭದ್ರಗೊಳಿಸುವ ಉದ್ದೇಶ ಹೊಂದಿವೆ. ಈ ರಾಜ್ಯಗಳು ಮೋದಿಯವರ ಒಪ್ಪಿಗೆಯಿಲ್ಲದೆ ಇಂತಹ ಕ್ರಮ ಕೈಗೊಂಡಿರಲಾರವು. ಇತ್ತೀಚೆಗೆ, ಭಾರತೀಯ ರೆವಿನ್ಯೂ ಸೇವೆಯ (ಐಆರ್‌ಎಸ್) ಕೆಲವು ಅಧಿಕಾರಿಗಳು ಶ್ರೀಮಂತರಿಂದ ಹೆಚ್ಚಿನ ತೆರಿಗೆಗಳನ್ನು ಸಂಗ್ರಹಿಸಬೇಕು ಎಂಬುದಾಗಿ ಕೊಟ್ಟ ಒಂದು ಸಲಹೆಯೇ ಅವರನ್ನು ಶಿಕ್ಷೆಗೆ ಗುರಿಪಡಿಸಲು ಕಾರಣವಾಗಿತ್ತು. ಅಷ್ಟಕ್ಕೂ ಅವರೇನೂ ತಾವಾಗಿಯೇ ಮೇಲೆ ಬಿದ್ದು ಈ ಸಲಹೆ ಕೊಟ್ಟಿರಲಿಲ್ಲ. ಹೆಚ್ಚು ಹೆಚ್ಚು ತೆರಿಗೆ ಸಂಗ್ರಹಿಸುವ ಮಾರ್ಗೋಪಾಯಗಳ ಬಗ್ಗೆ ಸರಕಾರವು ಸಾರ್ವಜನಿಕರಿಂದ ಸಲಹೆ ಕೋರಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ, ಮುಂದುವರಿದ ಬಂಡವಾಳಶಾಹಿ ದೇಶಗಳು ನಾಲ್ಕು ದಶಕಗಳ ಹಿಂದೆ ಉದುರಿಸಿದ ಬೌದ್ಧಿಕ ತುಣುಕುಗಳನ್ನೇ ಬುದ್ಧಿಗೇಡಿ ಮೋದಿ ಸರ್ಕಾರವು ಈಗಲೂ ಎತ್ತಿಕೊಳ್ಳುತ್ತಿದೆ, ಪ್ರಪಂಚ ಮುಂದೆ ಮುಂದೆ ಸಾಗುತ್ತಿದೆ ಎಂಬುದರ ಅರಿವಿಲ್ಲದೆ.

ಆದರೆ, ಈ ಜಗತ್ತು ತೆರಳಿರುವುದಾದರೂ ಎಲ್ಲಿಗೆ? ಸುಮಾರು ಎಲ್ಲ ದೇಶಗಳೂ ಕಳೆದ ನಾಲ್ಕು ದಶಕಗಳಲ್ಲಿ ಅನುಸರಿಸಿದ ನೀತಿಗಳನ್ನು, ಅಂದರೆ, ಪ್ರಸಕ್ತ ಜಾಗತೀಕರಣ ಯುಗದ ಸ್ವಭಾವ ಸೂಚಕವಾದ ನವ ಉದಾರ ಆರ್ಥಿಕ ನೀತಿಗಳನ್ನು ಬದಲಾಯಿಸಲೇಬೇಕು ಎಂಬುದು ಫೈನಾನ್ಷಿಯಲ್ ಟೈಮ್ಸ್‌ನ ಸಂಪಾದಕೀಯದಿಂದ ಸ್ಪಷ್ಟವಾಗುತ್ತದೆ. ಅಂದರೆ, ಕಳೆದ ನಾಲ್ಕು ದಶಕಗಳ ನವ ಉದಾರವಾದಿ ಜಾಗತೀಕರಣವು ಮುಂದೆ ಹೆಜ್ಜೆ ಇಡಲು ದಾರಿ ಇಲ್ಲದೆಡೆಗೆ ತಲುಪಿದೆ ಎಂದಾಗುತ್ತದೆ. ಜಾಗತಿಕ ಬಂಡವಾಳಶಾಹಿಯು, 1930 ರ ದಶಕದಲ್ಲಿ, ಅಲ್ಲಿಯತನಕ ಯಾವ ರೀತಿಯಲ್ಲಿ ಬಾಳಿ ಬದುಕಿತ್ತೋ ಅದೇ ರೀತಿಯಲ್ಲಿ ಮುಂದೆ ಸಾಗಲಾಗದ ಸ್ಥಿತಿಯನ್ನು ತಲುಪಿತ್ತು. ಆಗ, ಬಂಡವಾಳಶಾಹಿ ವ್ಯವಸ್ಥೆಯನ್ನು ಸಂರಕ್ಷಿಸುವ ಸಲುವಾಗಿಯೇ ಅದನ್ನು ಮಾರ್ಪಡಿಸುವ ಅಗತ್ಯವನ್ನು ಅನೇಕ ದೂರ ದೃಷ್ಟಿಯುಳ್ಳ ಬಂಡವಾಳಶಾಹಿ ಚಿಂತಕರು ಒತ್ತಿ ಹೇಳಿದ್ದರು. ನಿಖರವಾಗಿ ಅದೇ ರೀತಿಯಲ್ಲಿ ಸಮಕಾಲೀನ ಜಾಗತಿಕ ಬಂಡವಾಳಶಾಹಿಯೂ ಮುಂದೆ ಸಾಗಲಾಗದ ಸ್ಥಿತಿಯನ್ನು ತಲುಪಿದ್ದು, ಅದರ ರೀತಿ ರಿವಾಜುಗಳು ಇಲ್ಲಿಯತನಕ ಇದ್ದ ರೀತಿಯಲ್ಲಿ ಇನ್ನು ಮುಂದೆ ಇರಲು ಸಾಧ್ಯವಿಲ್ಲ.

ಕುತೂಹಲಕಾರಿ ಅಂಶವೆಂದರೆ, ಮೇ 8ರಂದು, ಮತ್ತೊಂದು ಸಂಪಾದಕೀಯದಲ್ಲಿ ಫೈನಾನ್ಷಿಯಲ್ ಟೈಮ್ಸ್ ಹೀಗೆ ಬರೆದಿತ್ತು: " ಇಂದಿನ ಪರಿಸ್ಥಿತಿಯು 1930 ರ ದಶಕದ ಪರಿಸ್ಥಿತಿಯನ್ನೇ ಹೋಲುತ್ತದೆ. ಆಗ, ಅಮೇರಿಕಾದ ಅಧ್ಯಕ್ಷರಾಗಿದ್ದ ಫ್ರಾಂಕ್ಲಿನ್ ಡೆಲಾನೋ ರೂಸ್‌ವೆಲ್ಟ್ ರಿಂದ ಹಿಡಿದು ಬ್ರಿಟಿಷ್ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್ ರವರ ವರೆಗಿನ ಮಧ್ಯಮಾರ್ಗಿ ಉದಾರವಾದಿ ಆರ್ಥಿಕ ಚಿಂತಕರು, ಬಂಡವಾಳಶಾಹಿಯು ಜೀವಂತ ಉಳಿಯಬೇಕಾದರೆ, ಅದರ ಉದಾರ ಹಾಗೂ ಪ್ರಜಾಸತ್ತಾತ್ಮಕ ಗುಣದಿಂದಾಗಿ ಅದು ಪ್ರತಿಯೊಬ್ಬರಿಗೂ ಒದಗಿ ಬರುತ್ತದೆ ಎಂಬುದಾಗಿ ಬಿಂಬಿಸಬೇಕಾದ ಅಗತ್ಯವನ್ನು ಮನಗಂಡಿದ್ದರು. ಅವರ ಈ ವಿಚಾರಧಾರೆಯ ಗೆಲುವು ಎರಡನೇ ಮಹಾಯುದ್ಧದ ನಂತರದ ದಶಕಗಳಲ್ಲಿ ಪಾಶ್ಚಾತ್ಯ ದೇಶಗಳ ಬಂಡವಾಳಶಾಹಿ ವ್ಯವಸ್ಥೆಯ ಯಶಸ್ಸಿಗೆ ವೇದಿಕೆ ನಿರ್ಮಿಸಿತು. ಈಗ, ಅಂದಿನ ರೀತಿಯಲ್ಲಿಯೇ, ಬಂಡವಾಳಶಾಹಿಗೆ ರಿಪೇರಿಯ ಅಗತ್ಯವಿದೆಯೆ ವಿನಃ ಅದನ್ನು ಬದಲಾಯಿಸುವ ಅಗತ್ಯವಿಲ್ಲ." ಪ್ರಭುತ್ವವು ಅರ್ಥವ್ಯವಸ್ಥೆಯಲ್ಲಿ ಮಧ್ಯಪ್ರವೇಶ ಮಾಡುವ ಮೂಲಕ ಸಂತ್ರಸ್ತರಿಗೆ ಬೃಹತ್ ಪ್ರಮಾಣದ ಹಣಕಾಸಿನ ನೆರವು ಒದಗಿಸುತ್ತಿರುವ ನಿರ್ದಿಷ್ಟ ಸನ್ನಿವೇಶದಲ್ಲಿ ಈ ಸಂಪಾದಕೀಯವನ್ನು ಬರೆದಿದ್ದರೂ ಸಹ, ಅದರ ವಿಶಾಲ ಅಂತರಾರ್ಥವು ಸ್ಪಷ್ಟವಾಗಿಯೇ ಇದೆ: ಇಂದು ಜಾಗತಿಕ ಬಂಡವಾಳಶಾಹಿಯು 1930 ರ ದಶಕದ ರೀತಿಯ ಅವನತಿಗೆ ತಲುಪಿದೆ.

ಬಂಡವಾಳಶಾಹಿ ಪದ್ಧತಿಯಲ್ಲಿ ಯಾವುದೇ ರೀತಿಯ ಬದಲಾವಣೆ ತರಬೇಕು ಎಂದಾದರೆ, ಯುದ್ಧಾನಂತರದ ಕಾಲದಲ್ಲಿ "ಕಲ್ಯಾಣ ಬಂಡವಾಳಶಾಹಿ" ಎಂದು ಗುರುತಿಸಿಕೊಂಡಿದ್ದ ಬಂಡವಾಳಶಾಹಿ ಆವೃತ್ತಿಯ ಪುನರಾಗಮನವೂ ಸೇರಿದಂತೆ ಯಾವುದೇ ರೀತಿಯ ಬದಲಾವಣೆ ಆಗಬೇಕು ಎಂದಾದರೆ, ಮೊದಲಿಗೆ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಯಜಮಾನಿಕೆಯನ್ನು ಸಡಿಲಗೊಳಿಸಬೇಕಾಗುತ್ತದೆ. ಆಗ, ಅದರ ತೀವ್ರ ವಿರೋಧವನ್ನು ಎದುರಿಸಬೇಕಾಗುತ್ತದೆ. ಬಂಡವಾಳಶಾಹಿ ಪದ್ಧತಿಯಲ್ಲಿ ಬದಲಾವಣೆಯ ಅಗತ್ಯದ ಬಗ್ಗೆ ಬೂರ್ಜ್ವಾ ಚಿಂತಕರಿಗೆ ಸ್ಪಷ್ಟತೆ ಇದೆ ಎಂದ ಕೂಡಲೇ, ಹಣಕಾಸು ಬಂಡವಾಳವು ಈಗ ಆನಂದಿಸುತ್ತಿರುವ ತನ್ನ ಯಜಮಾನಿಕೆಯನ್ನು ಸಲೀಸಾಗಿ ಬಿಟ್ಟುಕೊಡುತ್ತದೆ ಎಂದಲ್ಲ. ಈ ಸಂಗತಿಗೆ 1930 ರ ದಶಕದ ಬಂಡವಾಳಶಾಹಿಯ ಇತಿಹಾಸವೇ ಸಾಕ್ಷಿಯಾಗಿದೆ.

ಮಹಾ ಕುಸಿತದ ಹೊಡೆತಕ್ಕೆ 1929ರಲ್ಲೇ ನಲುಗಿದ್ದ ಬ್ರಿಟನ್‌ನಲ್ಲಿ ಉದ್ಯೋಗಗಳನ್ನು ಸೃಷ್ಟಿಸುವ ಸಲುವಾಗಿ ಪ್ರಭುತ್ವವು ಅರ್ಥವ್ಯವಸ್ಥೆಯಲ್ಲಿ ಮಧ್ಯಪ್ರವೇಶ ಮಾಡಬೇಕೆಂದು ಕೀನ್ಸ್ ಹೇಳತೊಡಗಿದರು. ಕೀನ್ಸ್ ಈ ಅಭಿಪ್ರಾಯವನ್ನು ತಮ್ಮ ಲಿಬರಲ್ ಪಾರ್ಟಿಯ ನಾಯಕ ಲಾಯ್ಡ್ ಜಾರ್ಜ್ ಮೂಲಕ ಪ್ರಚುರಪಡಿಸಲು ಪ್ರಯತ್ನಿಸಿದರು. ವಿತ್ತೀಯ ಕೊರತೆಯ ಮೂಲಕ ಹೊಂದಿಸಿಕೊಂಡ ಹಣದಿಂದ ಸಾರ್ವಜನಿಕ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಉದ್ಯೋಗಗಳನ್ನು ಸೃಷ್ಟಿಸಬಹುದು ಎಂಬುದಾಗಿ ಕೀನ್ಸ್ 1929ರಲ್ಲೇ ಮಾಡಿದ ಸಲಹೆಗೆ ಯಾರೂ ಕಿವಿಗೊಡಲಿಲ್ಲ. ಈ ಸಲಹೆಯನ್ನು, ಒಂದು ವಿತ್ತೀಯ ಕೊರತೆಯು ಖಾಸಗಿ ಹೂಡಿಕೆಯು ತನಗೆ ಕಾಲೂರಲು ಜಾಗವಿಲ್ಲದೆ ಹೊರಹೋಗುವಂತೆ ಮಾಡುತ್ತದೆಯಲ್ಲದೆ ಹೆಚ್ಚುವರಿ ಉದ್ಯೋಗಗಳನ್ನು ಸೃಷ್ಟಿಸುವುದಿಲ್ಲ ಎಂಬ ಅರ್ಥಹೀನ ವಾದದ (ಇಂತಹ ವಾದವೇ ಈಗ ಮತ್ತೊಮ್ಮೆ ಸದ್ದು ಮಾಡುತ್ತಿದೆ) ನೆಲೆಯಲ್ಲಿ ವಿರೋಧಿಸಲಾಯಿತು. ಈ ವಿರೋಧವನ್ನು ಅಲ್ಲಗಳೆಯುತ್ತಾ 1936 ರಲ್ಲಿ ಬರೆದ ತನ್ನ ಕೃತಿಯಲ್ಲಿ ಕೀನ್ಸ್ ತಮ್ಮ ನಿಲುವಿನ ಸೈದ್ಧಾಂತಿಕ ಆಧಾರವನ್ನು ಸ್ಪಷ್ಟಪಡಿಸಿದರು. ಅದೂ ಕೂಡ ಪ್ರಯೋಜನವಾಗಲಿಲ್ಲ. ಈ ರೀತಿಯಲ್ಲಿ ಇಡೀ 1930 ರ ದಶಕದುದ್ದಕ್ಕೂ, ಬ್ರಿಟನ್ನಿನಲ್ಲಿ ಉದ್ಯೋಗಾವಕಾಶಗಳ ಹೆಚ್ಚಳಕ್ಕಾಗಿ, ಪ್ರಭುತ್ವವು ಅರ್ಥವ್ಯವಸ್ಥೆಯಲ್ಲಿ ಮಧ್ಯಪ್ರವೇಶ ಮಾಡಬೇಕೆಂದು ಹೇಳುತ್ತಿದ್ದ ಕೀನ್ಸ್ ರವರ ಸಲಹೆಯನ್ನು ಸಂಪೂರ್ಣವಾಗಿ ಅಲಕ್ಷಿಸಲಾಯಿತು.

ಅದೇ ರೀತಿಯಲ್ಲಿ, ಅಮೇರಿಕಾದಲ್ಲಿ ರೂಸ್‌ವೆಲ್ಟ್ ಜಾರಿಗೆ ತಂದ ಹೊಸ ಯೋಜನೆಗಳು (ನ್ಯೂ ಡೀಲ್) ನಿರುದ್ಯೋಗವನ್ನು ಹತೋಟಿಗೆ ತರುವಲ್ಲಿ ಯಶಸ್ವಿಯಾದ ನಂತರ, ಆ ಯೋಜನೆಯಿಂದ ಹಿಂದೆ ಸರಿಯುವಂತೆ ರೂಸ್‌ವೆಲ್ಟ್ ಅವರ ಮೇಲೆ ಅಮೇರಿಕಾದ ಹಣಕಾಸು ಬಂಡವಾಳವು ಒತ್ತಾಯ ಹಾಕಿತು. ಈ ಒತ್ತಾಯಕ್ಕೆ ಮಣಿದ ಪರಿಣಾಮವಾಗಿ 1937 ರಲ್ಲಿ ಮತ್ತೊಮ್ಮೆ ಅಲ್ಲಿ ಆರ್ಥಿಕ ಹಿಂಜರಿತ ಉಂಟಾಯಿತು. ಎರಡನೇ ಮಹಾಯುದ್ಧದ ಪೂರ್ವಸಿದ್ಧತೆಯಾಗಿ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಆರಂಭಿಸಿದ ನಂತರವೇ ಆ ದೇಶವು ಮಹಾ ಕುಸಿತದಿಂದ ಅಂತಿಮವಾಗಿ ಚೇತರಿಸಿಕೊಂಡಿತು.

ಬೃಹತ್ ನಿರುದ್ಯೋಗವನ್ನು ತೊಡೆದುಹಾಕುವ ಸಲುವಾಗಿ ಒಟ್ಟಾರೆ ಬೇಡಿಕೆಯನ್ನು ವರ್ಧಿಸುವ ಕ್ರಮವನ್ನು ಯುದ್ಧಾನಂತರದ ಕಾಲಘಟ್ಟದಲ್ಲಿ ಮುಂದುವರಿದ ದೇಶಗಳಲ್ಲಿ ದುಡಿಯುವ ವರ್ಗದ ಬಲ ಮೊದಲಿಗಿಂತ ಹೆಚ್ಚಾದ ಸನ್ನಿವೇಶದಲ್ಲಿ ಅಂತಿಮವಾಗಿ ಒಪ್ಪಿಕೊಳ್ಳಲಾಯಿತು. ಯುದ್ಧಾನಂತರದ ಚುನಾವಣೆಗಳಲ್ಲಿ, ಬ್ರಿಟನ್ನಿನಲ್ಲಿ ಲೇಬರ್ ಪಕ್ಷದ ಗೆಲುವು ಮತ್ತು ಫ್ರಾನ್ಸ್ ಮತ್ತು ಇಟಲಿ ದೇಶಗಳಲ್ಲಿ ಕಮ್ಯೂನಿಸ್ಟರ ಬಲದ ಹೆಚ್ಚಳ ಇವು ದುಡಿಯುವ ವರ್ಗದ ಬಲ ಮೊದಲಿಗಿಂತ ಹೆಚ್ಚಾದುದರ ಸ್ಪಷ್ಟ ಗುರುತುಗಳು. ರಷ್ಯಾದ ಕೆಂಪು ಸೇನೆಯು ಪಶ್ಚಿಮ ಯುರೋಪಿನ ದೇಶಗಳ ಬಾಗಿಲ ವರೆಗೂ ಬಂದೇ ಬಿಟ್ಟಿದೆ ಎನ್ನುವ ಭಯ-ಭೀತಿ ಸೃಷ್ಟಿಯಾದ ಸನ್ನಿವೇಶದಲ್ಲಿ, ಒತ್ತಡ ಹೇರಿದ ಪರಿಣಾಮವಾಗಿ ಹಣಕಾಸು ಬಂಡವಾಳವು ಅಂತಿಮವಾಗಿ ತನ್ನ ಬಿಗಿ ಪಟ್ಟನ್ನು ಸಡಿಲಿಸಿತು.

ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಬಂಡವಾಳಶಾಹಿ ವ್ಯವಸ್ಥೆಯ ಸಂರಕ್ಷಣೆಗಾಗಿಯೇ ಹಣಕಾಸು ಬಂಡವಾಳವು ತನ್ನ ಯಾವ ಪಟ್ಟುಗಳನ್ನು ಬಿಟ್ಟುಕೊಡುವುದು ಅತ್ಯಗತ್ಯವೆಂದು ಬಂಡವಾಳಶಾಹಿ ಚಿಂತಕರು ಭಾವಿಸುತ್ತಾರೋ ಅದನ್ನೂ, ಹಣಕಾಸು ಬಂಡವಾಳವು ಸ್ವಯಂಪ್ರೇರಿತವಾಗಿ ಬಿಟ್ಟುಕೊಡುವುದಿಲ್ಲ. ಹಾಗಲ್ಲದೆ ಈ ಅಂಶವನ್ನು ಬೇರೊಂದು ರೀತಿಯಲ್ಲಿ ಭಾವಿಸುವುದು, ಕೀನ್ಸ್ ಯಾವ ಬಲೆಗೆ ಬಿದ್ದರೂ ಅದೇ ಬಲೆಗೆ ಬಿದ್ದಂತಾಗುತ್ತದೆ. ವಿಚಾರಗಳು ಈ ಜಗತ್ತನ್ನು ಆಳುತ್ತವೆ ಎಂಬ ಮುಗ್ಧ ನಂಬಿಕೆಯನ್ನು ಕೀನ್ಸ್ ಇಟ್ಟುಕೊಂಡಿದ್ದರು. ಕೀನ್ಸ್ ಅವರ ಪ್ರಕಾರ "ಸರಿಯಾದ ವಿಚಾರಗಳು" (ತಾವು ನಂಬಿದ್ದ ರೀತಿಯ ವಿಚಾರಗಳು) ಕಾಲಕ್ರಮೇಣ ತಮ್ಮಷ್ಟಕ್ಕೆ ತಾವೇ ಅಂಗೀಕಾರ ಪಡೆಯುತ್ತವೆ. ಆದರೆ, ನಿಜ ಜೀವನದಲ್ಲಿ, ಇದಕ್ಕೆ ತದ್ವಿರುದ್ಧ ಎನ್ನುವ ರೀತಿಯಲ್ಲಿ, ಅಂತಿಮವಾಗಿ, ವರ್ಗ ಹೋರಾಟವು ಜಗತ್ತು ಯಾವ ದಿಕ್ಕಿನಲ್ಲಿ ಚಲಿಸಲಿದೆ ಎಂಬುದನ್ನು ನಿರ್ಧರಿಸುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ನಿಜ, ಈ ವರ್ಗಹೋರಾಟ ವಿಚಾರಗಳಿಂದ ಕೂಡಿರುತ್ತದೆ.

ಆದ್ದರಿಂದ, ಸಮಕಾಲೀನ ಬಂಡವಾಳಶಾಹಿಯನ್ನು ಅದರ ಹಿಂದಿನ "ಕಲ್ಯಾಣ ಬಂಡವಾಳಶಾಹಿ" ಆವೃತ್ತಿಯ ದಿಕ್ಕಿನಲ್ಲಿ ಬದಲಿಸುವುದಕ್ಕೂ ಸಹ,

ಪುಟ 14 ನೋಡಿ



ಮೋದಿ ಸರ್ಕಾರ ಕಳೆದ ನಾಲ್ಕು ದಶಕಗಳಲ್ಲಿ ಅನುಸರಿಸಿದ ಜಾಡಿನಲ್ಲೇ, ಮತ್ತು ಅದು ನವ ಉದಾರವಾದದ ಅವನತಿಯನ್ನು ಗುರುತಿಸದೆಯೇ ಸಾಗುತ್ತಿದೆ. ಅದು ನವ ಉದಾರವಾದದ ಕೊನೆಗಾಲದಲ್ಲೂ ಅದರೊಂದಿಗೇ ಹೆಣಗಾಡುತ್ತಲೇ ಉಳಿಯುವ ಸೂಚನೆ. ಈ ಹೆಣಗಾಟದ ಪರಿಣಾಮವಾಗಿ, ಫ್ಯಾಸಿಸ್ಟ್-ದಬ್ಬಾಳಿಕೆಯ ಕ್ರಮಗಳು ಹೆಚ್ಚುತ್ತವೆ. ಕೋಮು ವಿಭಜನೆಯನ್ನು ಪ್ರೋತ್ಸಾಹಿಸುವ ಅಸಹ್ಯದ ಕ್ರಮಗಳು ಹೆಚ್ಚುತ್ತವೆ. ಆದ್ದರಿಂದ, ಈ ಇಡೀ ಹೆಣಗಾಟದ ವಿರುದ್ಧ ದುಡಿಯುವ ಜನರು ಹೋರಾಟ ನಡೆಸಿ, ದಾರಿಗಾಣದೆ ನಿಂತಿರುವ ನವ-ಉದಾರವಾದದಿಂದ ಹೊರ ಬರುವ ದಾರಿಯನ್ನು ತೋರಿಸಬೇಕಾಗಿದೆ.

ದಾರಿ ಇಲ್ಲದಂತಾಗಿರುವ ನವ-ಉದಾರ ಬಂಡವಾಳಶಾಹಿ

ಪುಟ 13 ರಿಂದ


ಕಾರ್ಮಿಕ ವರ್ಗವು ಅದನ್ನೇ ಒಂದು ಕಾರ್ಯಸೂಚಿಯಾಗಿ ಇಟ್ಟುಕೊಂಡೇ ಹೋರಾಡುವುದು ಅತ್ಯಗತ್ಯವಾಗುತ್ತದೆ. ಕಾರ್ಮಿಕ ವರ್ಗವು ಅಂತಹ ಒಂದು ಹೋರಾಟ ಮಾಡುತ್ತಿರುವಾಗ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಅದನ್ನು ಪ್ರತಿರೋಧಿಸುವಷ್ಟರಲ್ಲಿ ನಾವು ಅದಾಗಲೇ ವರ್ಗ ಹೋರಾಟದಲ್ಲಿ ಮಗ್ನರಾಗಿ ಅದರ ನಟ್ಟ ನಡುವಿನಲ್ಲಿರುತ್ತೇವೆ. ಈ ಹೋರಾಟವು ಕೇವಲ "ಕಲ್ಯಾಣ ಬಂಡವಾಳಶಾಹಿ" ಯ ಪುನರಾಗಮನದೊಂದಿಗೆ ಮುಕ್ತಾಯವಾಗುತ್ತದೆಯೇ ಅಥವಾ ಬಂಡವಾಳಶಾಹಿಯನ್ನು ಸಂಪೂರ್ಣವಾಗಿ ಮೀರಿ ಸಮಾಜವಾದಿ ಪರ್ಯಾಯದೆಡೆಗೆ ಹೋಗುತ್ತದೆಯೇ ಎಂಬುದನ್ನು ಕಾಲ ಮಾತ್ರ ಹೇಳಲಿದೆ. ವ್ಯವಸ್ಥೆಯನ್ನು ಅದರ ಈಗಿನ ಸ್ವರೂಪದಿಂದ ಬದಲಾಯಿಸುವ ವರ್ಗ ಹೋರಾಟವು ಒಮ್ಮೆ ರಭಸ ಪಡೆದರೆ, ಅದರ ಫಲಿತಾಂಶವು ತಾಲೀಮನ್ನು ಅವಲಂಬಿಸಿರುತ್ತದೆ ಮತ್ತು ಅದು ವ್ಯವಸ್ಥೆಯ ಚೌಕಟ್ಟಿಗೆ ಸೀಮಿತವಾಗುವುದಿಲ್ಲ.

ಆದರೆ, ಭಾರತದಲ್ಲಿ ಆಳುವ ಪಡೆಗೆ ಪ್ರಪಂಚದಲ್ಲಿ ಏನೆಲ್ಲಾ ವಿದ್ಯಮಾನಗಳು ಜರುಗುತ್ತಿವೆ ಎಂಬುದರ ಬಗ್ಗೆ ಏನೇನೂ ಅರಿವೇ ಇಲ್ಲ. ನವ ಉದಾರವಾದದ ಕೊನೆಗಾಲವು ಮುಂದುವರೆದ ದೇಶಗಳ ಬೂರ್ಜ್ವಾ ಚಿಂತಕರ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುತ್ತಿದ್ದರೂ ಸಹ, ನಮ್ಮ ಹಿಂದುತ್ವ ಪಡೆಗೆ ಅದು ಕಾಣಿಸುತ್ತಲೇ ಇಲ್ಲ. ಮೋದಿ ಸರಕಾರವು ಈಗಲೂ ಸಹ ನವ ಉದಾರವಾದದ ಅಜೆಂಡಾಕ್ಕೆ ಆತುಕೊಂಡಿರುವುದಷ್ಟೇ ಅಲ್ಲ, ಕೊರೋನಾ ಸಾಂಕ್ರಾಮಿಕ ಜಾಡ್ಯವು ಸೃಷ್ಟಿಸಿರುವ ಈ ಒಂದು ತೀವ್ರ ಮಾನವೀಯ ಬಿಕ್ಕಟ್ಟಿನ ನಡುವೆಯೂ ಅದು ಈ ಅಜೆಂಡಾದಿಂದ ಕೊಂಚವೂ ಮಿಸಕಾಡುತ್ತಿಲ್ಲ. ಮಾತ್ರವಲ್ಲ, ಸರ್ಕಾರದ ಸ್ಪಂದನೆಯೂ ಬುದ್ಧಿಗೇಡಿತನದಿಂದಲೇ ಕೂಡಿದೆ.

ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ನೆರವು ಒದಗಿಸಿದ ಬಗ್ಗೆ ಮೋದಿ ಸರ್ಕಾರದ ನಿಲುವು-ಸಾಧನೆ ಮತ್ತು ಯೂರೋಪಿನ ದೇಶಗಳ ಸರ್ಕಾರಗಳ ನಿಲುವು-ಸಾಧನೆಗಳನ್ನು ಅಕ್ಕಪಕ್ಕದಲ್ಲಿಟ್ಟು ನೋಡಿದಾಗ ವ್ಯತ್ಯಾಸ ಎಷ್ಟಿದೆ ಎಂಬುದನ್ನು ಫೈನಾನ್ಷಿಯಲ್ ಟೈಮ್ಸ್‌ನ ಮೇ 8ರ ಸಂಪಾದಕೀಯದಿಂದ ಹೆಕ್ಕಲಾಯಬಹುದು: "ಕಮ್ಯುನಿಸ್ಟ್ ಕ್ರಾಂತಿಗಿಂತ ಕಡಿಮೆ ಏನೂ ಇಲ್ಲ ಎನ್ನುವ ರೀತಿಯಲ್ಲಿ, ಸರ್ಕಾರಗಳು ಖಾಸಗಿ ಮಾರುಕಟ್ಟೆಗಳಲ್ಲಿ – ದುಡಿಮೆಗಾರರ ಪರವಾಗಿ, ಅಗತ್ಯವಿದ್ದವರಿಗೆ ಸಾಲ ಒದಗಿಸುವುದಕ್ಕಾಗಿ ನಿಂತವು. ಕಳೆದೆರಡು ತಿಂಗಳ ಲಾಕ್‌ಡೌನ್ ಅವಧಿಯಲ್ಲಿ ಎಷ್ಟು ಶೀಘ್ರವಾಗಿ ಮತ್ತು ಚೆನ್ನಾಗಿ ಸರಕು ಮತ್ತು ಸೇವೆಗಳ ವಿನಿಮಯ ಕಲ್ಪಿಸುವಲ್ಲಿ ಹೇಗೆ ಮಧ್ಯಪ್ರವೇಶ ಮಾಡಿದವು ಎಂಬ ಅಂಶವು ಊಹೆಗೂ ಮೀರಿದೆ. ಬೆಳಗಾಗುವಷ್ಟರಲ್ಲಿ ಲಕ್ಷಾಂತರ ಖಾಸಗಿ ವಲಯದ ಉದ್ಯೋಗಿಗಳು ಸಾರ್ವಜನಿಕ ಖಜಾನೆಯಿಂದ ತಮ್ಮ ವೇತನ ಚೆಕ್ಕುಗಳನ್ನು ಪಡೆದರು. ಕೇಂದ್ರ ಬ್ಯಾಂಕ್‌ಗಳು ವಿದ್ಯುನ್ಮಾನ ಮಾಧ್ಯಮದ ಮೂಲಕ ಹಣಕಾಸು ಮಾರುಕಟ್ಟೆಗಳಿಗೆ ಹಣ ಹರಿಸಿದವು".

ಭಾರತದಲ್ಲಿ, ಖಾಸಗಿ ವಲಯದ ಉದ್ಯೋಗಿಗಳಿಗೆ ಖಜಾನೆಯಿಂದ ವೇತನ ಕೊಡುವ ಮಾತಿರಲಿ, ಸರ್ಕಾರವು 14 ಕೋಟಿ ವಲಸಿಗ ಕೆಲಸಗಾರರೂ (ಅವರಲ್ಲಿ ಸುಮಾರು 10 ಕೋಟಿ ಮಂದಿ ಅಂತರ್-ರಾಜ್ಯ ವಲಸಿಗರು) ಸೇರಿದಂತೆ ಕೋಟಿಗಟ್ಟಲೆ ಕಾರ್ಮಿಕರ ಆದಾಯಗಳನ್ನು ದೋಚಿದೆ. ಅವರ ಉದ್ಯೋಗಗಳನ್ನು ನಾಶಪಡಿಸಿದೆ. ಅವರಿಗೆ ವಸತಿ ಇಲ್ಲದಂತೆ ಮಾಡಿದೆ. ಆದರೂ, ಪರಿಹಾರವಾಗಿ ಅವರಿಗೆ ಒಂದು ಪೈಸೆಯನ್ನೂ ಕೊಡಲಿಲ್ಲ. ಈ ಪರಿಸ್ಥಿತಿಯು ಭಾಗಶಃವಾಗಿ ಮೋದಿ ಸರಕಾರದ ಸಂಪೂರ್ಣ ಅಮಾನವೀಯತೆಯ ಪರಿಣಾಮ ಎನ್ನುವುದರಲ್ಲಿ ಅನುಮಾನವಿಲ್ಲ. ಭಾಗಶಃವಾಗಿ, ನಾಗರಿಕರ ಸ್ವಾತಂತ್ರ್ಯ ಮತ್ತು ಅವರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನಿರಾಕರಿಸುವ ಮೂಲಕ ಮತ್ತು ಜನರನ್ನು ವಿಭಜಿಸುವ ಉದ್ದೇಶ ಹೊಂದಿರುವ ಕೋಮುವಾದಿ ಕಾರ್ಯಸೂಚಿಯನ್ನು ಉತ್ತೇಜಿಸುವ ಮೂಲಕ, ಹಣಕಾಸು ಬಂಡವಾಳದ ಬಗ್ಗೆ ಅದು ತನಗಿರುವ ಪುಕ್ಕಲುತನವನ್ನು ಮರೆಮಾಚಿ, ಹಣಕಾಸು ಬಂಡವಾಳಕ್ಕೆ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತಿರುವುದರ ಪರಿಣಾಮವೂ ಹೌದು.

ಆದರೆ, ಸರ್ಕಾರವು "ಕಳೆದ ನಾಲ್ಕು ದಶಕಗಳಲ್ಲಿ" ಅನುಸರಿಸಿದ ಜಾಡನ್ನೇ ಅನುಸರಿಸುವ ಕ್ರಮ ಮತ್ತು ಅದು ನವ ಉದಾರವಾದದ ಅವನತಿಯನ್ನು ಗುರುತಿಸದೇ ಇರುವ ಕ್ರಮ, ಇವುಗಳು, ನವ ಉದಾರವಾದದ ಕೊನೆಗಾಲದಲ್ಲಿ ಅದರೊಂದಿಗ ಹೆಣಗಾಡುತ್ತಲೇ ಉಳಿಯುವ ಸೂಚನೆ ಕೊಡುತ್ತವೆ. ಈ ಹೆಣಗಾಟದ ಪರಿಣಾಮವಾಗಿ, ಫ್ಯಾಸಿಸ್ಟ್-ದಬ್ಬಾಳಿಕೆಯ ಕ್ರಮಗಳು ಹೆಚ್ಚುತ್ತವೆ. ಕೋಮು ವಿಭಜನೆಯನ್ನು ಪ್ರೋತ್ಸಾಹಿಸುವ ಅಸಹ್ಯದ ಕ್ರಮಗಳು ಹೆಚ್ಚುತ್ತವೆ. ಆದ್ದರಿಂದ, ಈ ಇಡೀ ಹೆಣಗಾಟದ ವಿರುದ್ಧ ದುಡಿಯುವ ಜನರು ಹೋರಾಟ ನಡೆಸಿ, ದಾರಿಗಾಣದೆ ನಿಂತಿರುವ ನವ-ಉದಾರವಾದದಿಂದ ಹೊರ ಬರುವ ದಾರಿಯನ್ನು ತೋರಿಸಬೇಕಾಗಿದೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ



ಪುಟ 12 ರಿಂದ

'ರಣಹದ್ದು' ರೂಪಕ....

ಸಂಘದ ಅಧ್ಯಕ್ಷ ಎಸ್.ಎನ್.ಸಿನ್ಹ ಮತ್ತು ಪ್ರಧಾನ ಕಾರ್ಯದರ್ಶಿ ಸಂಧೀಪ್ ಶಂಕರ್ ಹೇಳಿಕೆಯೊಂದರಲ್ಲಿ ವರ್ಣಿಸಿರುವಂತೆ **ಸರಕಾರದ ಅಸಮರ್ಥನೀಯ ನಿಷ್ಕ್ರಿಯತೆಯನ್ನು ಸಮರ್ಥಿಸಿಕೊಳ್ಳುವುದಷ್ಟೇ ಮೋದಿ ಸರಕಾರದ ಎಸ್.ಜಿ.ಯವರ ಗುರಿ.** ಆ ಭರದಲ್ಲಿ ಅವರು ದೇಶ ಎದುರಿಸುತ್ತಿರುವ ಈ ಮಾನವೀಯತೆಯ ಬಿಕ್ಕಟ್ಟಿನ ಬಗ್ಗೆ ಅನುತಾಪ, ಖೇದ, ಆಕ್ರೋಶವನ್ನು ವ್ಯಕ್ತಪಡಿಸುವವರನ್ನು ರಣಹದ್ದುಗಳು ಮತ್ತು ದೇಶದ್ರೋಹಿಗಳು ಎಂದು ಕರೆದು ಕೃತಾರ್ಥರಾಗಿದ್ದಾರೆ. ಇದು ಕಳೆದ ಆರು ವರ್ಷಗಳ ಕಥನಗಳಿಗೆ ಅನುಗುಣವಾಗಿಯೇ ಇದೆ.

ಹೀಗೆ ಅಸಮರ್ಥನೀಯವಾದುದನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ ಈ ಸಮಸ್ಯೆಯ ಬಗ್ಗೆ ಅನುತಾಪ, ಸಂವೇದನೆಯನ್ನು ತೋರಿಸಿರುವ ಕೆಲವು ಹೈಕೋರ್ಟ್‌ಗಳನ್ನು ಕೂಡ ಟೀಕಿಸುವ ಮಟ್ಟಕ್ಕೆ ಹೋದರೂ ಈ ಮೂವರು ನ್ಯಾಯಾಧೀಶರಿದ್ದ ನ್ಯಾಯಪೀಠ ಸಾಲಿಸಿಟರ್ ಜನರಲ್‌ರವರ ಎಲ್ಲೆ ಮೀರಿದ ಮಾತುಗಳಿಗೆ ಕಡಿವಾಣ ಹಾಕಲಿಲ್ಲವೇಕೆ ಎಂದು ಕೆಲವು ಟಿಪ್ಪಣಿಗಾರರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಆದರೆ ವಲಸೆ ಕಾರ್ಮಿಕರಿಗೆ ಆಹಾರ ಮತ್ತು ನೀರು ಒದಗಿಸಿ, ಅವರಿಂದ ಪ್ರಯಾಣ ದರ ವಸೂಲು ಮಾಡಬೇಡಿ ಎಂದು ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗ ಆದೇಶ ನೀಡಿರುವುದು ಈ ಸರಕಾರಗಳು ಬಹಳಷ್ಟು ಮಾಡಿವೆ ಎಂದವರಿಗೆ ಸರಕಾರ ಏನನ್ನು ಮಾಡಿಲ್ಲ ಎಂದು ಹೇಳುವಂತಿದೆಯಲ್ಲವೇ ಎಂದು ಇನ್ನು ಕೆಲವರು ಟಿಪ್ಪಣಿ ಮಾಡಿದ್ದಾರೆ.

"ಈಗ ನ್ಯಾಯಾಂಗದ ಘನತೆ ಮತ್ತು ಪ್ರತಿಷ್ಠೆ ನ್ಯಾಯಾಧೀಶರುಗಳ ಕೈಯಲ್ಲಿದೆ, ಏಕೆಂದರೆ ಈ ವ್ಯಕ್ತಿಯನ್ನು ಉದ್ದೇಶಪೂರ್ವಕವಾಗಿಯೇ ಆರಿಸಿರುವ ಸರಕಾರಕ್ಕೆ (ತನ್ನಆಯ್ಕೆಯಬಗ್ಗೆ) ವಿಷಾದವೇನೂ ಇಲ್ಲ" ಎಂದು ಸಿಪಿಐ(ಎಂ) ಪ್ರಧಾನಕಾರ್ಯರ್ಶಿ ಸೀತಾರಾಂ ಯೆಚುರಿ ಈ ಕುರಿತು ಮಾರ್ಮಿಕವಾಗಿ ಹೇಳಿದ್ದಾರೆ.

ಅಸಂಗತ, ಪೂರ್ವಯೋಚನೆಯಿಲ್ಲದ ಕಾರ್ಯತಂತ್ರಗಳಿಗೆ ದೇಶ ಭಾರೀ ಬೆಲೆತೆರಬೇಕಾಗಿ ಬಂದಿದೆ-ಲಾಕ್‌ಡೌನ್ ಕುರಿತು ಪರಿಣಿತರ ಜಂಟಿ ಹೇಳಿಕೆ

ಕೊವಿಡ್-19 ಮಹಾಮಾರಿಯ ವಿರುದ್ಧ ಮಹಾಭಾರತ ಸಮರ ಎಂದು ಹಾಕಿರುವ ಲಾಕ್ ಡೌನ್ ಮಹಾಭಾರತದ 18 ದಿನಗಳನ್ನು ಎಂದೋ ದಾಟಿ ಐದನೇ ಬಾರಿಗೆ ವಿಸ್ತರಣೆಗೊಂಡಿದೆ. ಯಾರೊಡನೆಯೂ, ಅದನ್ನು ಜಾರಿಗೊಳಿಸಬೇಕಾದ ರಾಜ್ಯ ಸರಕಾರಗಳೊಡನೆ ಕೂಡ ಸಮಾಲೋಚಿಸದೆ, ಅವರ ಗಮನಕ್ಕೂ ತಾರದೆ, ಏಕಾಏಕಿ ನಾಲ್ಕೇ ಗಂಟೆಗಳ ನೋಟೀಸಿನಲ್ಲಿ ಅದನ್ನು ಹೇರಿದವರು ಐದನೇ ವಿಸ್ತರಣೆಯ ಮೊದಲೇ ಅದರಿಂದ ಸಂಪೂರ್ಣವಾಗಿ ಕೈತೊಳೆದುಕೊಂಡು ಅದರಿಂದ ಹೊರಬರುವ ಜವಾಬ್ದಾರಿಯನ್ನು ರಾಜ್ಯಸರಕಾರಗಳ ಹೆಗಲಿಗೆ ದಾಟಿಸಿದ್ದಾರೆ ಎಂಬುದನ್ನೀಗ ಸುಮಾರಾಗಿ ಎಲ್ಲರೂ ಕಾಣುತ್ತಿದ್ದಾರೆ.

ಆಳುವ ಪಕ್ಷ ಮೋದಿಯವರ ಎರಡನೇ ಅಧಿಕಾರಾವಧಿಯ ಮೊದಲ ವರ್ಷದ 'ಸಾಧನೆ'ಗಳಲ್ಲಿ ಮಹಾಮಾರಿಯ ವಿರುದ್ಧ ಸಮರವನ್ನೂ ಸೇರಿಸಿಕೊಂಡಿದ್ದರೂ, ಅವರ ಸರಕಾರದ ಎರ್ರಾಬಿರ್ರಿ ಕ್ರಮಗಳಿಂದಾಗಿ ದೇಶ ಈಗ, ಮಾನವೀಯ ದೃಷ್ಟಿಯಿಂದಲೂ ಮತ್ತು ಮಹಾಮಾರಿಯ ಹರಡಿಕೆಯ ದೃಷ್ಟಿಯಿಂದಲೂ ಭಾರೀ ಬೆಲೆ ತೆರಬೇಕಾಗಿ ಬಂದಿದೆ ಎಂದು ಸಾರ್ವಜನಿಕ ಆರೋಗ್ಯ ಪರಿಣಿತರು ಹೇಳಿದ್ದಾರೆ. ಭಾರತೀಯ ಸಾರ್ವಜನಿಕ ಆರೋಗ್ಯಸಂಘ(ಐ.ಪಿ.ಹೆಚ್.ಎ), ಭಾರತೀಯ ನಿರೋಧಕ ಮತ್ತು ಸಾಮಾಜಿಕ ಔಷಧಿ ಸಂಘ ಐ.ಎ.ಪಿ.ಎಸ್.ಎಂ) ಮತ್ತು ಭಾರತೀಯ ಸಾಂಕ್ರಾಮಿಕ ರೋಗಗಳ ತಜ್ಞರ ಸಂಘ(ಐ.ಎ.ಇ.) ಮೇ 31ರಂದು ನೀಡಿರುವ ಜಂಟಿ ಹೇಳಿಕೆಯಲ್ಲಿ ಇದನ್ನು ಹೇಳಿವೆ. ಇದು ಈ ಸಂಘಟನೆಗಳು ನೀಡಿರುವ ಎರಡನೇ ಜಂಟಿ ಹೇಳಿಕೆ. ಈ ಮೂರು ಸಂಘಟನೆಗಳಲ್ಲಿ ಕೊನೆಯ ಎರಡು ಪ್ರಧಾನಿಗಳು ರಚಿಸಿದ ಕಾರ್ಯಪಡೆಯ ಭಾಗವಾಗಿದ್ದವು, ಆದರೆ ಈ ಕಾರ್ಯಪಡೆಯ ಸಭೆಯನ್ನು ಮಾರ್ಚ್ 24 ರಂದೇ, ಅಂದರೆ ಬಹುಶಃ ಲಾಕ್ ಡೌನ್ ಹಾಕಲು ನಿರ್ಧರಿಸಿದ ಮೇಲೆಯೇ ಕರೆಯಲಾಯಿತು ಎಂಬುದು ಗಮನಾರ್ಹ. ಪ್ರಧಾನಮಂತ್ರಿಗಳು ಮಹಾಮಾರಿಯ ವಿರುದ್ಧ ಸಮರವನ್ನು ನಿಭಾಯಿಸುವಲ್ಲಿ ಕೆಲವು ಅಧಿಕಾರಶಾಹಿಗಳನ್ನೇ ಅವಲಂಬಿಸಿದ್ದರು, ಪರಿಣಿತರನ್ನಲ್ಲ ಎಂಬುದೂ ಕೂಡ ಈ ಮೊದಲೇ ವರದಿಯಾಗಿತ್ತು ಎಂಬುದನ್ನು ಗಮನಿಸಬೇಕು.

ಭಾರತ ಸರಕಾರ ಜಗತ್ತಿನಲ್ಲೇ ಅತ್ಯಂತ ಕಟು ಲಾಕ್‌ಡೌನ್ ಹೇರಿದರೂ, ಮಾರ್ಚ್ 25 ರಂದು ವರದಿಯಾದ ಸೋಂಕುಗಳ ಸಂಖ್ಯೆ ಕೇವಲ 606 ಇದ್ದದ್ದು ಮೇ 24 ರ ವೇಳೆಗೆ 1,38,845ಕ್ಕ ನೆಗೆಯಿತು. ಸಾವುಗಳ ಸಂಖ್ಯೆ 5000 ದಾಟಿತು. ಐದನೇ ಲಾಕ್‌ಡೌನ್ ಆರಂಭವಾಗುವ ವೇಳೆಗೆ ಇದು 1ಲಕ್ಷ 93 ಸಾವಿರವನ್ನು ದಾಟಿತು. ಇವರಲ್ಲಿ ಸುಮಾರ 92 ಸಾವಿರ ಮಂದಿ ಗುಣಮುಖರಾಗಿದ್ದಾರೆ, ಮತ್ತು ಸಾವುಗಳ ಸಂಖ್ಯೆ 5394.

ವಲಸಿಗ ಕಾರ್ಮಿಕರನ್ನು ಆರಂಭದಲ್ಲೇ, ಸೋಂಕಿತರ ಸಂಖ್ಯೆ ಇನ್ನೂ 500 ರ ಆಸುಪಾಸಿನಲ್ಲೇ ಇದ್ದಾಗ, ಅವರವರ ಊರುಗಳಿಗೆ ಮರಳಲು ವ್ಯವಸ್ಥೆ ಮಾಢಿದ್ದರೆ, ಈಗಿನ ಪರಿಸ್ಥಿತಿ ಬರುತ್ತಿರಲಿಲ್ಲ. ಈಗ ಊರುಗಳಿಗೆ ಮರಳುತ್ತಿರುವ ಕಾರ್ಮಿಕರೊಂದಿಗೆ ಮಹಾಮಾರಿ ದೇಶದ ಮೂಲೆ-ಮೂಲೆಗಳಿಗೆ, ಬಹುಪಾಲು ಗ್ರಾಮೀಣ ಮತ್ತು ಅರೆ-ಪಟ್ಟಣ ಪ್ರದೇಶಗಳಿಗೂ, ಆರೋಗ್ಯ ವ್ಯವಸ್ಥೆ ಬಹಳ ದುರ್ಬಲವಾಗಿರುವ ಜಿಲ್ಲೆಗಳಿಗೂ ಹರಡುವಂತಾಗುತ್ತಿದೆ ಎಂದು ಈ ಜಂಟಿ ಹೇಳಿಕೆ ಆತಂಕ ವ್ಯಕ್ತಪಡಿಸಿದೆ.

ಈ ಲಾಕ್‌ಡೌನ್ ಒಂದು ಪ್ರಭಾವೀ ಸಂಸ್ಥೆಯ ಹರಡಿಕೆ ಮಾಡೆಲಿಂಗ್ ಕಸರತ್ತನ್ನು ಅವಲಂಭಿಸಿರುವಂತೆ ಕಾಣುತ್ತದೆ. ಈ ಮಾಡೆಲ್ ನ ಭವಿಷ್ಯವಾಣಿಗಳೆಲ್ಲ ನಂತರ ಹುಸಿಯಾಗಿವೆ. ಭಾರತ ಸರಕಾರ ಸಾಂಕ್ರಾಮಿಕ ರೋಗ ಹರಡಿಕೆಯ ಬಗ್ಗೆ ಹೆಚ್ಚಿನ ಅರಿವು ಇರುವ ತಜ್ಞರೊಡನೆ ಸಮಾಲೋಚನೆ ನಡೆಸಿದ್ದರೆ ಒಳ್ಳೆಯದಿತ್ತು ಎಂದು ಈ ಹೇಳಿಕೆ ಅಭಿಪ್ರಾಯ ಪಟ್ಟಿದೆ.

ಸರಕಾರದ ನೀತಿಗಳನ್ನು ರೂಪಿಸುವವರು ಅಧಿಕಾರಶಾಹಿಗಳನ್ನೇ ಬಹುವಾಗಿ ಅವಲಂಬಿಸಿರುವಂತೆ ಕಾಣುತ್ತದೆ. ಸಾಂಕ್ರಾಮಿಕ ರೋಗಶಾಸ್ತ್ರ, ಸಾರ್ವಜನಿಕ ಆರೋಗ್ಯ ,ನಿರೋಧಕ ಔಷಧಿ ಮತ್ತು ಸಾಮಾಜಿಕ ವಿಜ್ಞಾನಿಗಳೊಡನೆ ಸಮಾಲೋಚನೆಗಳು ಬಹಳ ಸೀಮಿತವಾಗಿದ್ದವು.

ಸುಸಂಗತವಲ್ಲದ, ತ್ವರಿತವಾಗಿ ಬದಲಿಸುವ ಕಾರ್ಯತಂತ್ರಗಳು ಮತ್ತು ಧೋರಣೆಗಳು, ವಿಶೇಷವಾಗಿ ರಾಷ್ಟ್ರೀಯ ಮಟ್ಟದಲ್ಲಿ, ಸಾಂಕ್ರಾಮಿಕಗಳನ್ನು ಕುರಿತ ವೈಜ್ಞಾನಿಕ ತಿಳಿವನ್ನು ಆಧರಿಸಿದ ಒಂದು ಸುಯೋಜಿತ ಸುಸಂಗತ ಕಾರ್ಯತಂತ್ರ ಮತ್ತು ಧೋರಣೆಯಾಗಿರುವ ಬದಲಿಗೆ, ಕ್ರಮಗಳನ್ನು ಪ್ರಕಟಿಸಿದ ನಂತರ ಯೋಚಿಸುವ, ಪರಿಸ್ಥಿತಿಗಳ ಬೆನ್ನಟ್ಟುವ ಮಟ್ಟದಲ್ಲೆ ಉಳಿದವು ಎಂದು ಈ ಪರಿಣಿತರು ಹೇಳುತ್ತಾರೆ. ಇದಕ್ಕೆ ದೇಶ ಮಾನವೀಯತೆಯ ದೃಷ್ಟಿಯಿಂದಲೂ ಮತ್ತು ಮಹಾಮಾರಿಯ ಹರಡಿಕೆಯ ದೃಷ್ಟಿಯಿಂದಲೂ ಬಹಳಷ್ಟ ಬೆಲೆ ತೆರಬೇಕಾಗಿ ಬಂದಿದೆ ಎನ್ನುತ್ತಾರೆ ಅವರು.

ಕೇಂದ್ರ, ರಾಜ್ಯ ಮತ್ತು ಜಿಲ್ಲಾಮಟ್ಟಗಳಲ್ಲಿ ಸಾರ್ವಜನಿಕ ಆರೋಗ್ಯ ಹಾಗೂ ಮಾನವೀಯ ಬಿಕ್ಕಟ್ಟಿನ ಪ್ರಶ್ನೆಗಳನ್ನು ನಿಭಾಯಿಸಲು ಸಾರ್ವಜನಿಕ ಆರೋಗ್ಯ ಮತ್ತು ನಿರೋಧಕ ಔಷಧಿ ಪರಿಣಿತರು ಹಾಗೂ ಸಮಾಜ ವಿಜ್ಞಾನಿಗಳ ಅಂತರ್-ಶಿಸ್ತೀಯ ತಂಡವನ್ನು ರಚಿಸಬೇಕು, ತಪಾಸಣೆಯ ಫಲಿತಾಂಶಗಳೂ ಸೇರಿದಂತೆ ಎಲ್ಲ ಮಾಹಿತಿಗಳು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಬೇಕು, ಒಂದು ಸಾರ್ವಜನಿಕ ಆರೋಗ್ಯ ಆಯೋಗವನ್ನು, ಮತ್ತು ನಿರ್ದಿಷ್ಟ ಕೆಲಸಗಳನ್ನು ವಹಿಸಿದ ಕಾರ್ಯಗುಂಪುಗಳನ್ನು ತಕ್ಷಣವೇ ರಚಿಸಬೇಕು ಎಂದು ಈ ಪರಿಣಿತರು ಶಿಫಾರಸು ಮಾಡಿದ್ದಾರೆ. ರೋಗ ಪತ್ತೆಯ ಸೌಲಭ್ಯಗಳನ್ನು ಗಮನಾರ್ಹವಾಗಿ ಹೆಚ್ಚಿಸಬೇಕು ಎಂದೂ ಇವರು ಹೇಳಿದ್ದಾರೆ.

ಈ ವರದಿಯನ್ನು ಪ್ರಧಾನಮಂತ್ರಿಗಳಿಗೆ ಕಳಿಸಲಾಗುವುದು ಎಂದು ಈ ಪರಿಣಿತರು ಹೇಳಿದ್ದಾರೆ.

ದೇಶದ ಮುಂದಿರುವ ಆರೋಗ್ಯ ತುರ್ತುಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಮೋದಿಸರಕಾರ ಶೋಚನೀಯವಾಗಿ ವಿಫಲಗೊಂಡಿದೆ ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ತೀರ್ಪು ಬೇಕಿಲ್ಲ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ. ಇದು ಕೋಟ್ಯಂತರ ಜನಗಳ ಬದುಕುಗಳನ್ನು ನಾಶಮಾಡಿದೆ. ನಮ್ಮ ಜನಗಳ ಮೇಲೆ ಹೇರಿರುವ ಈ ಕ್ರಿಮಿನಲ್ ದುರಂತವನ್ನು ಈಗ ವೈಭವೀಕರಣದ ಮಾತುಗಳಿಂದ ಅಥವ ಮಾಧ್ಯಮಗಳ ವೈಭವಿಕರಣದಿಂದ ಮರೆಮಾಚಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

ಜಾರ್ಜ್ ಫ್ಲಾಯ್ಡ್ ಹತ್ಯೆ: ಭುಗಿಲೆದ್ದ ಆಕ್ರೋಶ, ಬಂಕರ್ ನಲ್ಲಿ ಅವಿತು ಕೂತ ಟ್ರಂಪ್

ದಂಗೆಯ ತೀವ್ರತೆ ನೋಡಿದರೆ ಇದು ಬರಿಯ ಆಫ್ರಿಕನ್-ಅಮೆರಿಕನ್ನರ ಮೇಲೆ ದೌರ್ಜನ್ಯದ ವಿರುದ್ಧ ಪ್ರತಿಭಟನೆ ಮಾತ್ರವಲ್ಲ. ಆರ್ಥಿಕ ಬಿಕ್ಕಟ್ಟು, ಕೊರೊನಾ ಆರೋಗ್ಯ ಬಿಕ್ಕಟ್ಟು, ಏರುತ್ತಿರುವ ನಿರುದ್ಯೋಗ, ಇವೆಲ್ಲವನ್ನು ನಿಭಾಯಿಸಲು ವಿಫಲರಾಗಿರುವ ಟ್ರಂಪ್ ದುರಾಡಳಿತದ ವಿರುದ್ಧ ರಾಜಕೀಯ ಆಕ್ರೋಶವೂ ಹೌದು. ಕೆಲವು ಎಡಪಂಥೀಯರು, ಪ್ರಗತಿಪರರು ಅಮೆರಿಕದ ಈ ವ್ಯಾಪಕ ದಂಗೆಗಳನ್ನು 'ಕ್ರಾಂತಿಕಾರಿ ಬದಲಾವಣೆಗಳ ಆರಂಭ' ಇತ್ಯಾದಿಯಾಗಿ ಅರ್ಥೈಸುತ್ತಿದ್ದಾರೆ. ಅದು ಅತಿಶಯೋಕ್ತಿಯಾದೀತು.

ಜಗದ ಸುತ್ತ
ನಾಗರಾಜ ನಂಜುಂಡಯ್ಯ



ಜಾರ್ಜ್ ಫ್ಲಾಯ್ಡ್ ಎಂಬ ಆಫ್ರಿಕನ್-ಅಮೆರಿಕನ್ ಮೇಲೆ ಕ್ಷುಲ್ಲಕ ಅಪರಾಧದ ಆಪಾದನೆ ಮೇಲೆ ಪೋಲಿಸ್ ಅಧಿಕಾರಿಯೊಬ್ಬ ದೌರ್ಜನ್ಯ ಎಸಗಿ ಹತ್ಯೆ ಮಾಡಿದ ಪ್ರಕರಣ ನಡೆದಿದೆ. ಇದರಿಂದಾಗಿ ಅಮೆರಿಕಾದ ಸುಮರು 40 ಕ್ಕೂ ಹೆಚ್ಚು ನಗರಗಳಲ್ಲಿ ಪ್ರತಿಭಟನೆಗಳು ಹಿಂಸಾತ್ಮಕ ರೂಪ ತಾಳಿ ಭುಗಿಲೆದ್ದಿವೆ. ಇಡೀ ಅಮೆರಿಕಾ ಹಲವು ದಿನಗಳ ಕಾಲ ಪ್ರತಿಭಟನೆಗಳ ಮತ್ತು ಹಿಂಸಾಚಾರದ ತಾಣವಾಗಿದೆ. ಪೋಲೀಸ್ ದೌರ್ಜನ್ಯದ ವಿರುದ್ಧ ದಂಗೆಯ ಸ್ವರೂಪವನ್ನು ಇದು ಪಡೆದಿದೆ. ಈ ದಂಗೆಯನ್ನು ಹತ್ತಿಕ್ಕಲು ಪೋಲಿಸ್ ಬಳಸಿದ ದಮನಕಾರಿ ತಂತ್ರಗಳು, ಕೆಲವು ರಾಜಗಳ ಆಡಳಿತ, ರಿಪನಬ್ಲಿಕನ್ ಪಕ್ಷದ ನಾಯಕರು ಮತ್ತು ಸ್ವತಃ ಅಧ್ಯಕ್ಷ ಟ್ರಂಪ್ ಅವರ ಆಕ್ರಾಮಕ ಧೋರಣೆಯಿಂದಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಇಲ್ಲಿಯವರೆವಿಗೂ, 5 ಆಪ್ರಿಕನ್-ಅಮೆರಿಕನ್ನರು ಈ ಹಿಂಸಾಚಾರದಲ್ಲಿ ಕೊಲ್ಲಲ್ಪಟ್ಟಿದ್ದಾರೆ. ನೂರಾರು ಜನರು ಗಾಯಗೊಂಡಿದ್ದಾರೆ. ವಾಷಿಂಗ್ಟನ್ ನ ಶ್ವೇತ ಭವನದ ಮುಂದೆಯು ಆಕ್ರೋಶ ಭರಿತವಾದ ಪ್ರತಿಭಟನೆ ನಡೆದ ಕಾರಣ, ವೈಟ್ ಹೌಸ್ ನಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಂಕರ್ ಒಳಗೆ ಸ್ವಲ್ಪ ಕಾಲದವರೆಗೆ, ಬೆದರಿ ಅವಿತುಕೊಂಡಿದ್ದರು ಎಂದು ವರದಿಯಾಗಿದೆ.

ಕಳೆದ ಹಲವು ದಶಕಗಳಲ್ಲಿ ಯು.ಎಸ್ ನಲ್ಲಿ ನಡೆದ ಅತ್ಯಂತ ತೀವ್ರ ದಂಗೆ ಇದಾಗಿದೆ. ಮಿನ್ನೆಸೊಟಾ ರಾಜ್ಯದ ಮಿನ್ನಿಯಾಪೋಲಿಸ್ ನಲ್ಲಿ 46 ವರ್ಷದ ಫ್ಲಾಯ್ಡ್ ನ ಹತ್ಯೆಯ ನಂತರದ 3-4 ದಿನಗಳಲ್ಲಿ ಅಮೆರಿಕಾದ್ಯಂತ, ಕನಿಷ್ಟ 140 ನಗರಗಳಿಗೆ ದಂಗೆ ಹರಡಿದೆ. ಬಿಳಿ ಪೋಲಿಸ್ ಅಧಿಕಾರಿಯೊಬ್ಬರು ಫ್ಲಾಯ್ಡ್ ರನ್ನು ತನ್ನ ಪೋಲಿಸ್ ಬೂಟಿನಿಂದ, ಕತ್ತಿನ ಬಳಿ ಉಸಿರಾಟ ನಿಲ್ಲುವವರೆಗೂ ಮಂಡಿಯೂರಿ ಹಿಸುಕಿ, ಕುಸಿದು ಕೆಳಗೆ ಬಿದ್ದು ಸಾವನ್ನಪ್ಪುವಂತೆ ಹತ್ಯೆಗೈದಿದ್ದಾರೆ ಎಂದು ವರದಿಯಾಗಿದೆ. ಸ್ಟೋರ್ ಒಂದರಲ್ಲಿ ಖರೀದಿ ಮಾಡಿ 20 ಡಾಲರ್ ಖೋಟಾ ನೋಟು ಕೊಟ್ಟ ಎಂಬುದು ಇದ್ದ ಆಪಾದನೆ. ಈ ಆಪಾದನೆಯ ಕುರಿತು ತನಿಖೆ ನಡೆಸುವ ವ್ಯವಧಾನವೂ ಪೋಲೀಸರಿಗಿರಲಿಲ್ಲ. ಕನಿಷ್ಟ 20 ರಾಜ್ಯಗಳು 'ರಾಷ್ಟ್ರೀಯ ಗಾರ್ಡ್' ಗಳನ್ನು (ನಮ್ಮಲ್ಲಿ ಕೇಂದ್ರ ದಂಗೆ ನಿಯಂತ್ರಣ ಮೀಸಲು ಪಡೆಯಂತಹ ಪಡೆ) ಸಕ್ರಿಯ ಗೊಳಿಸಲು ನಿರ್ಧರಿಸಿವೆ.

ಇಲ್ಲಿಯವರೆಗೂ, ಯುಎಸ್ ನ ಸುಮಾರು ಎರಡು ಡಜನ್ ನಗರಗಳಲ್ಲಿ, ಕನಿಷ್ಟ 2600 ಆಫ್ರಿಕ್ನ್ ಅಮೆರಿಕನ ರನ್ನು ಪೋಲಿಸರು ಬಂಧಿಸಿದ್ದಾರೆ. ಆ ಬಂಧನದಲ್ಲಿ ಸುಮಾರು ಐದನೇ ಒಂದು ಭಾಗ ಲಾಸ್ ಏಂಜಲೀಸ್ ನಗರದಲ್ಲಿ ಆಗಿದೆ. ಈ ಪ್ರತಿಭಟನೆಗಳು ಮೊದಲು, ಮಿನ್ನೇಸೋಟ್' ದ ಮಿನ್ನಿಯಾಪೋಲಿಸ್' ನಲ್ಲಿ ಪ್ರಾರಂಭವಾಯಿತು. ಆನಂತರ, ಯುಎಸ್ ನ ಪ್ರಮುಖ ಎಲ್ಲಾ ನಗರಗಳಿಗೂ ಹರಡಿತು. ಲಾಸ್ ಏಂಜಲೀಸ್, ಚಿಕಾಗೋ, ನ್ಯೂಯಾರ್ಕ್, ಹೌಸ್ಟನ್, ಫಿಲಡೆಲ್ಫಿಯಾ ಮತ್ತು ವಾಷಿಂಗ್ಟನ್ ಡಿಸಿ ಸೇರಿದಂತೆ 350ಕ್ಕೂ ಹೆಚ್ಚು ನಗರಗಳಲ್ಲಿ ಪ್ರತಿಭಟನೆಗಳು ನಡೆದಿವೆ ಎಂದು ವರದಿಯಾಗಿದೆ. ಹತ್ಯೆ ಮಾಡಿದ ಪೋಲೀಸ್ ಅಧಿಕಾರಿಯ ಮೇಲೆ 'ಮೊದಲ ಡಿಗ್ರಿ' ಬದಲು 'ಮೂರನೇ ಡಿಗ್ರಿ' ಕೊಲೆಯ ಮೃದು ಆಪಾದನೆ ಹಾಕಿರುವುದು ಪ್ರತಿಭಟನಾಕಾರರನ್ನು ಇನ್ನಷ್ಟು ರೊಚ್ಚಿಗೆಬ್ಬಿಸಿತ್ತು.

ಟ್ರಂಪ್ ಅವರ ಉದ್ರೇಕಕಾರಿ ಟ್ವೀಟ್ ಗಳಿಂದ ಆಕ್ರೋಶಗೊಂಡ ಪ್ರತಿಭಟನೆಕಾರರು ಅಧ್ಯಕ್ಷ ಟ್ರಂಪ್ ವಿರುದ್ಧ ಘೋಷಣೆ ಗಳನ್ನು ಕೂಗುತ್ತಾ ಶ್ವೇತಭವನದ ಹೊರಗೆ ಜಮಾಯಿಸಿದ್ದಾರೆ. ಶ್ವೇತಭವನದ ಹೊರಗೆ ಬಾರಿ ಪ್ರತಿಭಟನೆಯ ತೀವ್ರತೆ ಕಂಡು ಬೆದರಿದ ಟ್ರಂಪ್ ಮತ್ತು ಅವರ ಕುಟುಂಬದ ಸದಸ್ಯರನ್ನು ಸ್ವಲ್ಪ ಸಮಯದವರೆಗೆ ಭೂಗತ ಬಂಕರ್ ಒಳಗೆ ಕರೆದೊಯ್ಯುಲಾಗಿತ್ತು.

ಅಧ್ಯಕ್ಷ ಟ್ರಂಪ್ ಸರಣಿ ಟ್ವೀಟ್ ಗಳಲ್ಲಿ ದೇಶದಲ್ಲಿ ಧ್ವೇಷ ಮತ್ತು ಅರಾಜಕತೆಯನ್ನು ಹುಟ್ಟು ಹಾಕಿದ್ದಾರೆ ಎಂದು ಒಬಾಮ, ಡೆಮೊಕ್ರಾಟಿಕ್ ಪಕ್ಷ ಮತ್ತು ಮಾಧ್ಯಮಗಳನ್ನು ದೂಷಿಸಿದ್ದಾರೆ. ರಾಜ್ಯದ ಗವರ್ನರುಗಳು ದಂಗೆಗಳನ್ನು ಕ್ರೂರ ಹಿಂಸೆಯಿಂದ ಮಟ್ಟ ಹಾಕಬೇಕು. ಇಲ್ಲದಿದ್ದರೆ ತಾನು ಮಿಲಿಟರಿ ಬಳಸಬೇಕಾದೀತು ಎಂಬಿತ್ಯಾದಿ ಟ್ವೀಟ್ ಮಾಡುವ ಮೂಲಕ ಟ್ರಂಪ್ ಪ್ರತಿಭಟನಾಕಾರರನ್ನು ಪ್ರಚೋದಿಸಿದ್ದಾರೆ. ಬೀದಿ ಹಿಂಸೆಯನ್ನು ಬೀದಿ ಹಿಂಸೆಯಿಂದಲೇ ಹಿಮ್ಮೆಟ್ಟಿಸಲಾಗುತ್ತದೆ ಎನ್ನುವುದರ ಮೂಲಕ ತಮ್ಮ ಬಲಪಂಥೀಯ ಬೆಂಬಲಿಗರಿಗೆ ಪ್ರತಿಭಟನಾಕಾರರಿಗೆ ಹಿಂಸೆಯಲ್ಲಿ ತೊಡಗಲು ಅವರು ತಮ್ಮ ಟ್ವೀಟ್ ಗಳಲ್ಲಿ ಕರೆ ಕೊಟ್ಟಿದ್ದಾರೆ. ಅವರ ಟ್ವೀಟ್ ಗಳು ಎಷ್ಟು ಸುಳ್ಳುಗಳಿಂದ ತುಂಬಿತ್ತು ಮತ್ತು ಪ್ರಚೋದನಕಾರಿಯಾಗಿತ್ತು ಎಂದರೆ, ಟ್ವಿಟರ್ ಕಂಪನಿ ಅವರ ಟ್ವೀಟ್ ಗಳ ಕುರಿತು ತಮ್ಮ ಮಾರ್ಗಧರ್ಶಿ ಸೂತ್ರಗಳನ್ನು ಅವು ಉಲ್ಲಂಘಿಸಿವೆ ಎಂದು ಎಚ್ಚರಿಕೆ ಪ್ರಕಟಿಸಬೇಕಾಯಿತು. ಶ್ವೇತಭವನದ ಬಳಿ ಗಲಭೆ ಸ್ವಲ್ಪ ತಣ್ಣಗಾದ ನಂತರ ಬೈಬಲ್ ಹಿಡಿದುಕೊಂಡು ಪಕ್ಕದ ಚರ್ಚ್‌ಗೆ ಹೋಗುವ ಮೂಲಕ ಧಾರ್ಮಿಕ ರಾಜಕಾರಣ ಮಾಡುವ ಪ್ರಯತ್ನ ಮಾಡಿದ್ದಾರೆ. ಈ ಎಲ್ಲ ತಂತ್ರಗಳ ಮೂಲಕ ತಮ್ಮ ಬಿಳಿ ಜನಾಂಗವಾದಿ ಬಲಪಂಥೀಯ ಬೆಂಬಲಿಗರ ಬೆಂಬಲವನ್ನು ಚುನಾವಣೆಯ ದೃಷ್ಟಿಯಿಂದ ಗಟ್ಟಿಗೊಳಿಸುವ ಸಿನಿಕ ರಾಜಕೀಯ ಉದ್ದೇಶವೂ ಅವರಿಗೆ ಇದ್ದಂತಿದೆ.

ಈ ದಂಗೆಗಳನ್ನು ಪ್ರಚೋದಿಸಿದೆ ಎಂಬ ಆಪಾದನೆಯ ಮೇಲೆ 'ಆಂಟಿಫಾ' ವನ್ನು ಭಯೋತ್ಪಾದಕ ಸಂಘಟನೆಯೆಂದು ಟ್ರಂಪ್ ಆಡಳಿತವು ಘೋಷಿಸಿದೆ. ಆದರೆ ವಾಸ್ತವವಾಗಿ 'ಆಂಟಿಫಾ' (ಆಂಟಿ-ಫ್ಯಾಸಿಸ್ಟ್) ಸದಸ್ಯತ್ವ ಆಧಾರಿತ ಪ್ರಾದೇಶಿಕ-ಸ್ಥಳೀಯ ಮತ್ತು ರಾಷ್ಟ್ರೀಯ ಘಟಕಗಳನ್ನು ಹೊಂದಿದ ಸ್ಪಷ್ಟ ರಚನೆಯುಳ್ಳ ಸಂಘಟನೆಯಲ್ಲ. ಅದು ಸದಸ್ಯತ್ವವೂ ಇಲ್ಲದ ಯು.ಎಸ್ ನ ಫ್ಯಾಸಿಸ್ಟ್-ವಿರೋಧಿ ಗುಂಪುಗಳ ಸಡಿಲವಾಗಿ ಹೆಣೆದ ಚಳುವಳಿಯಷ್ಟೇ. ಅದೂ ಬೀದಿ ಹಿಂಸೆಯಲ್ಲಿ ತೊಡಗಲಾರಂಭಿಸಿದ್ದ ಬಲಪಂಥೀಯ ಫ್ಯಾಸಿಸ್ಟ್ ಮತ್ತು ಅರೆ-ಫ್ಯಾಸಿಸ್ಟ್ ಗುಂಪುಗಳನ್ನು ವಿರೋಧಿಸಿ ಎದುರಿಸಲು ಹುಟ್ಟಿಕೊಂಡ ಚಳುವಳಿ. ದಂಗೆ ಹತ್ತಿಕ್ಕಲಾರದ ಶಾಂತಿಸ ಸ್ಥಾಪಿಸಲಾಗದ ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲು ಟ್ರಂಪ್ ಆಡಳಿತ ಟ್ರಂಪ್ ಆಡಳಿತದ ಮೇಲೆ ಗೂಬೆ ಕೂರಿಸುತ್ತಿದೆ.

ಟ್ರಂಪ್ ಮತ್ತು ರಿಪಬ್ಲಿಕನ್ ಆಡಳಿತ ರಾಜ್ಯಗಳು ಹೀಗೆ ಇಂತಹ ಸಮಯದಲ್ಲಿ ಚುನಾಯಿತ ಸರಕಾರವೊಂದು ತೋರಿಸಬೇಕಾದ ತಾಳ್ಮೆ, ಶಾಂತಿ ಕಾಪಾಡುವ ಪ್ರಾಥಮಿಕ ಕರ್ತವ್ಯಗಳನ್ನು ಮರೆತಿದ್ದವು. ಆದರೆ ಡೆಮೋಕ್ರಾಟಿಕ್ ಪಕ್ಷದ ಅಧ್ಯಕ್ಷೀಯ ನಾಮ ನಿರ್ದೇಶಿತ ಅಭ್ಯರ್ಥಿ ಹಾಗೂ ಮಾಜಿ ಉಪಾಧ್ಯಕ್ಷ ಜೋ ಬಿಡನ್ ಕೆಲವು ಕಡೆ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಶಾಂತಿ ಕಾಪಾಡುವ, ನ್ಯಾಯ ಶಾಂತಿಗಳನ್ನು ಕಾಪಾಡಲು ಸಂವಾದದ ಅಗತ್ಯದ ಕುರಿತು ಮಾತನಾಡಿದ್ದಾರೆ ಎಂಬುದು ಗಮನಾರ್ಹ.

ಮಾರ್ಟಿನ್ ಲೂಥರ್ ಕಿಂಗ್ ಅವರ ಹತ್ಯೆಯ ನಂತರ ನಡೆದ 1968 ರಲ್ಲಿನ ನಾಗರಿಕ ಅಶಾಂತಿಯ ನಂತರ, ಅನೇಕಸ್ಥಳೀಯ ನಾಯಕರು ಏಕಕಾಲದಲ್ಲಿ ಇಂತಹ ಪ್ರತಿಭಟನೆಗಳಿಗೆ ಕರೆ ಕೊಟ್ಟಿದ್ದು ಇದೇ ಮೊದಲು ಎಂದು ಹೇಳಲಾಗಿದೆ. ದಂಗೆಯ ತೀವ್ರತೆ ನೋಡಿದರೆ ಇದು ಬರಿಯ ಆಫ್ರಿಕನ್-ಅಮೆರಿಕನ್ನರ ಮೇಲೆ ದೌರ್ಜನ್ಯದ ವಿರುದ್ಧ ಪ್ರತಿಭಟನೆ ಮಾತ್ರವಲ್ಲ. ಆರ್ಥಿಕ ಬಿಕ್ಕಟ್ಟು, ಕೊರೊನಾ ಆರೋಗ್ಯ ಬಿಕ್ಕಟ್ಟು, ಏರುತ್ತಿರುವ ನಿರುದ್ಯೋಗ, ಇವೆಲ್ಲವನ್ನು ನಿಭಾಯಿಸಲು ವಿಫಲರಾಗಿರುವ ಟ್ರಂಪ್ ದುರಾಡಳಿತದ ವಿರುದ್ಧ ರಾಜಕೀಯ ಆಕ್ರೋಶವೂ ಹೌದು. 1968ರ ಕರಿಯರ ನಾಗರಿಕ ಹಕ್ಕುಗಳ ಚಳುವಳಿಯಿಂದ ಆರಂಭಿಸಿ ಹಲವು ಹಿಂದಿನ ಕರಿಯರ ಚಳುವಳಿಗಳಲ್ಲಿ ಬಿಳಿಯರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಲಾರಂಭಿಸಿದ್ದು, ಈ ಬಾರಿ ಇದು ಇನ್ನಷ್ಟು ಹೆಚ್ಚಿದೆಯೆನ್ನಲಾಗಿದೆ.

ಕೆಲವು ಎಡಪಂಥೀಯರು, ಪ್ರಗತಿಪರರು ಅಮೆರಿಕದ ಈ ವ್ಯಾಪಕ ದಂಗೆಗಳನ್ನು 'ಕ್ರಾಂತಿಕಾರಿ ಬದಲಾವಣೆಗಳ ಆರಂಭ' ಇತ್ಯಾದಿಯಾಗಿ ಅರ್ಥೈಸುತ್ತಿದ್ದಾರೆ. ಅದು ಅತಿಶಯೋಕ್ತಿಯಾದೀತು. ಡೆಮೊಕ್ರಾಟಿಕ್ ಅಧ್ಯಕ್ಷೀಯ ಅಭ್ಯರ್ಥಿ ಬರ್ನಿ ಸ್ಯಾಂಡರ್ಸ್ ಅವರ ಬಂಡವಾಳಶಾಹಿ-ವಿರೋಧಿ ರಾಜಕಾರಣಕ್ಕೆ ಅಗತ್ಯ ಸಾಕಷ್ಟು ಬೆಂಬಲ (ಅದರಲ್ಲೂ ವಿಶೇಷವಾಗಿ ಕರಿಯರಲ್ಲಿ) ಸಿಗಲಿಲ್ಲ ಎಂದು ಮರೆತು ಬಿಡುವಂತಿಲ್ಲ. ಆದರೆ ಈ ದಂಗೆಯಲ್ಲಿ ಬಿಳಿಯರು ಗಮನಾರ್ಹ ಪ್ರಮಾಣದಲ್ಲಿ ಭಾಗವಹಿಸುತ್ತಿದ್ದಾರೆ. ಮತ್ತು ಜನಾಂಗೀಯ ಐಕ್ಯತೆ ಸಹ ಕಂಡು ಬಂದಿದೆ ಎಂಬುದು ನಿಜ. ಭಾಗವಹಿಸಿದವರಲ್ಲಿ ಇಡೀ ಅಸಮಾನ ಕ್ರೂರ ವ್ಯವಸ್ಥೆಯ ಬಗ್ಗೆ ಮತ್ತು ಅದನ್ನು ಬದಲಾಯಿಸುವ ಅಗತ್ಯದ ಬಗೆಗೂ ಅರಿವಿದೆ. ಇದು ಜನಾಂಗವಾದಿ ಪೋಲೀಸರ ಸಮಸ್ಯೆಯಷ್ಟೇ. ಪೋಲಿಸ್ ಸುಧಾರಣೆಗಳಿಂದ ಸರಿಹೋಗುವುಂಥದ್ದು ಎಂಬ ಭ್ರಮೆಗಳಿಲ್ಲ. ಆದರೂ ಅಮೆರಿಕನ್ ಸಮಾಜದಲ್ಲಿ ಬದಲಾವಣೆಯ ತಹತಹ ಖಂಡಿತ ಕಾಣುತ್ತಿದೆ. ಕೊರೊನಾ ಮತ್ತು ಅದರ ಬೆನ್ನಿಗೆ ಬಂದ ಆರ್ಥಿಕ ಬಿಕ್ಕಟ್ಟು, ವ್ಯಾಪಕ ನಿರುದ್ಯೋಗ ಇನ್ನಷ್ಟು ದುಡಿಯುವ ಜನತೆಯ ಐಕ್ಯ ಸಮರಶೀಲ ಹೋರಾಟ ಪ್ರತಿರೋಧಗಳಿಗೆ ನಾಂದಿ ಹಾಡಬಹುದು. ಅದರತ್ತ ಈ ದಂಗೆಗಳ ಒಂದು ಹೆಜ್ಜೆಯಾಗಬಹುದು.

ಒಂದು ಪೋಲಿಸ್ ದೌರ್ಜನ್ಯ ಏಕೆ ಇಡೀ ದೇಶದಲ್ಲಿ ದಂಗೆಯೆಬ್ಬಿಸುತ್ತದೆ?

ಒಂದು ಪೋಲಿಸ್ ದೌರ್ಜನ್ಯ ಏಕೆ ಇಡೀ ದೇಶದಲ್ಲಿ ದಂಗೆಯೆಬ್ಬಿಸುತ್ತದೆ? ಎಂಬುದು ಹಲವರಿಗೆ ಅಚ್ಚರಿಯ ವಿಷಯವಾಗಿದೆ. ಇದಕ್ಕೆ ಕಾರಣ ಪೋಲಿಸ್ ದೌರ್ಜನ್ಯದ ವಿರುದ್ಧ ಬಡವರ ಕೆಳಸರ್ತದವರ ಸಾರ್ವತ್ರಿಕ ಆಕ್ರೋಶ ಮತ್ತು ತಮ್ಮ ವಿರುದ್ಧ ವಿಶೇಷವಾಗಿ ಗುರಿಯಿಟ್ಟ ದೌರ್ಜನ್ಯದ ವಿರುದ್ಧ ಮಡುಗಟ್ಟಿದ್ದ ಕರಿಯರ ಆಕ್ರೋಶ ಸ್ಫೋಟಗೊಂಡಿದ್ದು. ಅತ್ಯಂತ ಹೆಚ್ಚು ಆರ್ಥಿಕ-ಸಾಮಾಜಿಕ ಅಸಮಾನತೆ ಇರುವ ಯು.ಎಸ್ ನಲ್ಲಿ ಕಾರ್ಮಿಕರು, ಬಡವರು ಮತ್ತು ಕೆಳಸರ್ತದವರನ್ನು ನಿಯಂತ್ರಣದಲ್ಲಿ ಇಡಬೇಕಾದರೆ ಅವರನ್ನು ಭಯದಲ್ಲಿಡಬೇಕು. ಅವರನ್ನು ಒಡೆದು ಆಳಬೇಕು. ಇವೆರಡಕ್ಕೂ ಜನಾಂಗವಾದ ಉತ್ತಮ ಅಸ್ತ್ರ. ಅಲ್ಲದೆ ಎಲ್ಲ ವಿಷಮತೆಗಳನ್ನು ಹೆಚ್ಚಿಸುವ ನವ-ಉದಾರವಾದಿ ಬಂಡವಾಳಶಾಹಿ ಇಸ್ಲಾಮ್-ಭೀತಿ, ವಲಸೆಗಾರರ ವಿರುದ್ಧ ದ್ವೇಷ-ಪೂರ್ವಗ್ರಹ, ಜನಾಂಗವಾದವನ್ನು ಜೀವಂತವಾಗಿಟ್ಟಿದೆ. ಕರಿಯರು ಕಾರ್ಮಿಕರಾಗಿ, ಬಡವರಾಗಿ, ದಮನಿತ ಜನಾಂಗದವರಾಗಿ ತಾರತಮ್ಯ ಮತ್ತು ದೌರ್ಜನುಗಳನ್ನು ಎದುರಿಸುತ್ತಿದ್ದಾರೆ.

ಕರಿಯರಲ್ಲಿ ಶೇ. 20ರಷ್ಟು ಕಡುಬಡವರು. ಶೇ. 70 ಕರಿಯರು ಆರೋಗ್ಯಕರವಲ್ಲದ ತೀವ್ರ ಮಾಲಿನ್ಯದ ಕೊಂಪೆ ಪ್ರದೇಶಗಳ ಕೊಳೆಗೇರಿಗಳಲ್ಲಿ ವಾಸಿಸುತ್ತಾರೆ. ಆದಾಯ, ಆಸ್ತಿಗಳಲ್ಲಿ ಬಿಳಿಯರಿಗೂ ಕರಿಯರಿಗೂ ಅಜಗಜಾಂತರವಿದೆ. ಇದರಿಂದಾಗಿ ಕೊರೊನಾ ದಿಂದ ಬಾಧಿತರಾದ ಕರಿಯರ ಪ್ರಮಾಣ ಬಿಳಿರದ್ದಕ್ಕಿಂತ ಎರಡು ಪಟ್ಟು, ಕೆಲವು ರಾಜ್ಯಗಳಲ್ಲಿ ಮೂರು ಪಟ್ಟು.

ಕರಿಯರ ವಿರುದ್ಧ ಪೋಲಿಸ್ ದೌರ್ಜನ್ಯಗಳನ್ನು ವಿಶೇಷವಾಗಿ ಗುರಿಮಾಡಲಾಗಿದೆ ಎಂದು ತೋರಿಸುವ ಇಲ್ಲಿರುವ 2013-19 ಅವಧಿಯ ಪೋಲಿಸ್ ದೌರ್ಜನ್ಯದ ದಂಗು ಬಡಿಸುವ ಕೆಲವು ಅಂಕೆಸಂಖ್ಯೆಗಳು ಆಕ್ರೋಶಕ್ಕೆ ಕನ್ನಡಿ ಹಿಡಿಯುತ್ತವೆ.:

* ಪೋಲಿಸ್ ಗುಂಡಿಗೆ ಬಲಿಯಾಗುವ ಸಾಧ್ಯತೆ ಕರಿಯರಿಗೆ ಬಿಳಿಯರಿಗಿಂತ 3 ಪಟ್ಟು. 1944 ಇಂತಹ ದೌರ್ಜನ್ಯಗಳಲ್ಲಿ 10 ಲಕ್ಷ ಕರಿಯರಲ್ಲಿ 42 ಕರಿಯರು 2013-19 ರಲ್ಲಿ ಪೋಲಿಸ್ ಗುಂಡಿಗೆ ಬಲಿಯಾದರೆ, ಬಿಳಿಯರ ಪ್ರಮಾಣ 14.
* 98% ಪೋಲಿಸರಿಂದ ಆದ ಕರಿಯರ ಕೊಲೆ ಪ್ರಕರಣಗಳಲ್ಲಿ ಅವರ ಮೇಲೆ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಾಗಿಲ್ಲ. ದಾಖಲಾದ ಉಳಿದ 2% ಪ್ರಕರಣಗಳಲ್ಲಿ ಶಿಕ್ಷೆಯಾದ್ದು ಕೇವಲ 0.33 %.
* ಹಲವು ಇಂತಹ ಪ್ರಕರಣಗಳು ಡ್ಯೂಟಿಯಲ್ಲಿ ಇಲ್ಲದ ಪೋಲೀಸರಿಂದ ಆಗಿವೆ. ಇಂತಹ ಪ್ರಕರಣಗಳು ಕರಿಯರಲ್ಲಿ ಶೆ. 4.9 ಆದರೆ, ಬಿಳಿಯರಲ್ಲಿ ಶೇ. 2.3 - ಅಂದರೆ ಡ್ಯೂಟಿಯಲ್ಲಿ ಇಲ್ಲದ ಪೋಲೀಸರ ಗುಂಡೇಟಿಗೆ ಕರಿಯ ಬಲಿಯಾಗುವ ಸಾಧ್ಯತೆ ಬಿಳಿಯರಿಗಿಂತ ಎರಡು ಪಟ್ಟು
* ಪೋಲಿಸ್ ಗುಂಡಿನ ಬಲಿಪಶುವಾದಾಗ (ವ್ಯಕ್ತಿಯ ಬಳಿ ಶಸ್ತ್ರವಿದ್ದಿದ್ದರಿಂದ ಪೋಲಿಸರು ಭಯದಿಂದ ಗುಂಡು ಹಾರಿಸರಬಹುದು ಎಂಬ ಸಮರ್ಥನೆಯ ಹಿನ್ನೆಲೆಯಲ್ಲಿ) ಶಸ್ತ್ರವಿಲ್ಲದ ಕರಿಯರ ಪ್ರಮಾಣ ಶೇ. 17.3%. ಇದ್ದರೆ ಅಂತಹ ಬಿಳಿಯರ ಪ್ರಮಾಣ ಶೇ. 13.4

JANASHAKTHI KANNADA VARA PATRIKE JUNE 8-14, 2020 Price: Rs. 10/- Date of Publication: 5 JUNE 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283





ರಾಜ್ಯದಾದ್ಯಂತ ಸಿಐಟಿಯು ಸಂಘಟನೆಯ 50ನೇ ವಾರ್ಷಿಕೋತ್ಸವ ಆಚರಣೆ

ಪುಟ 5 ರಿಂದ

ದೇಶದ ಸ್ವಾತಂತ್ರ್ಯ, ಐಕ್ಯತೆ, ಸಮಗ್ರತೆ ಸಾರ್ವಭೌಮತ್ವಕ್ಕಾಗಿ ಸಂವಿಧಾನ ಉಳಿವಿಗಾಗಿ ಇಡಿ ದೇಶದ ಕಾರ್ಮಿಕ ವರ್ಗವನ್ನು ಒಂದೇ ವೇದಿಕೆ ಅಡಿಯಲ್ಲಿ ತರುವಲ್ಲಿ ಅವಿರತವಾಗಿ ಶ್ರಮಿಸಿ ತ್ಯಾಗ ಬಲಿದಾನವನ್ನು ಮಾಡಿ ದೇಶ ಕಟ್ಟಲು ದುಡಿದ ಮುಂಚುನಿಯ ಸಂಘಟನೆ ಸಿ.ಐ.ಟಿ.ಯು ಆಗಿದೆ. ಕಾರ್ಮಿಕರ ಪರವಾಗಿ ರಾಜಿ ರಹಿತ ಹೋರಾಟ ನಡೆಸಿದ ಕೀರ್ತಿ ಸಿ.ಐ.ಟಿ.ಯು. ಗೆ ಸಲ್ಲುತ್ತದೆ ಎಂದು ನನಗೆ ಹೇಳಲು ಸಂತೋಷವಾಗಿದೆ ಎಂದು ಹೇಳಿದರು.

ನಂತರ ಕಾರ್ಮಿಕರ ಸಂಘಟನೆಯ ಮುಖಂಡರಾದ ಪೀರು ರಾತೊಡ ಮಾತನಾಡಿ ದೇಶದ ಕಾರ್ಮಿಕರ ಹಿತಾಸಕ್ತಿಗಾಗಿ 1970 ಮೇ 27 ರಿಂದ 30 ರ ವರೆಗೆ ಕೊಲಕತ್ತಾದಲ್ಲಿ ಜರುಗಿದ ಕಾರ್ಮಿಕರ ಐತಿಹಾಸಿಕ ಸಮ್ಮೇಳನದಲ್ಲಿ ಜನ್ಮ ತಾಳಿದ ಕೇಂದ್ರ ಕಾರ್ಮಿಕ ಸಂಘಟನೆಯೇ ಸಿ.ಐ.ಟಿ.ಯು. ಇಂದು ನಮ್ಮನ್ನಾಳುತ್ತಿರುವ ಆಳುವ ಸರಕಾರಗಳು ಕಾರ್ಮಿಕ ವಿರೋಧಿ ಕಾನೂನನ್ನು ಸುಫ್ರೀವಾಜ್ಞೆ ಜಾರಿಗೊಳಿಸುವ ಮೂಲಕ ಕಾರ್ಮಿಕರ ಜೀವನಕ್ಕೆ ಮರಣ ಶಾಸನ ಬರೆಯುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾರ್ಮಿಕ ವಿರೋಧಿ ಸರಕಾರಗಳ ವಿರುದ್ದ ರೈತರು, ಕಾರ್ಮಿಕರು ಒಂದಾಗಿ ಹೋರಾಟ ನಡೆಸಿದಾಗ ಮಾತ್ರ ಕಾರ್ಮಿಕರಿಗೆ ಉತ್ತಮ ಬದುಕು ಮತ್ತು ನ್ಯಾಯ ಸಿಗಲು ಸಾಧ್ಯ ಎಂದು ಹೇಳಿದರು.

ಮಡಿವಾಳ ಸಮಾಜದ ಅಧ್ಯಕ್ಷರಾದ ದೇವಪ್ಪ ಮಡಿವಾಳರ ಅವರು ಮಾತನಾಡಿ ಕಾರ್ಮಿಕ ಸಂಘಟನೆಯ ಸಂಕೇತವಾಗಿರುವ ಕೆಂಬಾವುಟದ ಕುಡಗೋಲು ರೈತರ ಬೆಳೆಗಳ ಕತ್ತರಿಸಲು ಮಾತ್ರ ಸೀಮಿತವಲ್ಲದೇ ಈಗಿನ ಕೆಟ್ಟ ರಾಜಕೀಯ ವ್ಯವಸ್ಥೆಯನ್ನು ಕತ್ತರಿಸಲು ಬಳಸುವ ಸಂಕೇತವಾಗಿ ನೋಡಬೇಕು ಎಂದರು.

ಈಗಿನ ವಲಸೆ ಕಾರ್ಮಿಕರ ಹೀನಾಯವಾದ ಬದುಕಿನ ಪರಿಸ್ಥಿತಿ ಭಾರತದಲ್ಲಿ ಗುಲಾಮಗಿರಿಯ ವ್ಯವಸ್ಥೆಯ ಸಂಕೇತದಂತಿದೆ ಇಂತಹ ವ್ಯವಸ್ಥೆಯನ್ನು ಸಮಾನತೆಯ ಪ್ರಜಾಪ್ರಭುತ್ವ ದೇಶದಲ್ಲಿ ಆಳುವ ಸರ್ಕಾರಗಳು ಕಾರ್ಪೋರೇಟ್ ಕಂಪನಿಗಳ ಬೂಟು ನೆಕ್ಕಿದ ಪರಿಣಾಮ ಹೀಗಾಗಿದೆ ಎಂದು ಕೇಧ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪೀರು ರಾಠೋಡ, ಬಾಲು ರಾಠೋಡ, ರುದ್ರಪ್ಪ ರಾಠೋಡ, ಅಲ್ಲಾಭಕ್ಷಿ ಮುಚ್ಚಾಲಿ, ಚೌಡಮ್ಮ ಯಲ್ಪು, ಕನಕಮ್ಮ ಮಾದರ, ರೇವಣಪ್ಪ ರಾಠೋಡ, ಶಾರದಮ್ಮ ರಾಠೋಡ, ಶಿವಾನಂದ ಬಡಿಗೇರ, ಸರಸ್ವತಿ ರಾಠೋಡ, ಅಶೋಕ ಪತ್ತಾರ, ಶಿವಾನಂದ ಮಡಿವಾಳರ, ಚಂದ್ರು ರಾಠೋಡ, ಗಣೇಶ ರಾಠೋಡ, ಶಿವಾನಂದ ಭೊಸಲೆ, ಕಳಕೇಶ ರಾಠೋಡ, ಈರವ್ವ ಮಾಳೋತ್ತರ, ಶರಣಪ್ಪ ಬಡ್ಡಿ, ಗುರುಶಾಂತ ಹಿರೇಮಠ, ಮಲ್ಲಪ್ಪ ಮಾವಿನಗಿಡದ ಉಪಸ್ಥಿತರಿದ್ದರು.











ಗೋಪಿ ಮತ್ತು ಸೀತಾಯಣ

ಕವನ

ಮೊನ್ನೆ ಹೀಗಾಯಿತು ನೋಡಿ, ನಮ್ಮೂರ
ಕೃಷ್ಣ ಭಟ್ಟರ ಮಗ ಗೋಪಿ ಬೆಳಗಾಗೆದ್ದು
ಹಾಸಿಗೆಯಲ್ಲಿ ಅಂಗೈ ನೋಡಿ 'ಕರಾಗ್ರೇ
ವಸತಿ ಲಕ್ಷ್ಮಿ ಕರಮಧ್ಯೇ ಜನಾರ್ಧನ' ಎಂದು

ಸರಾಗ ಬೇಸೂರು ಬಿಚ್ಚುತ್ತಿದ್ದ ಹಾಗೆ ಕೊಟ್ಟಿಗೆಯಲ್ಲಿ
ಲಕ್ಷ್ಮಿ ಕೆಂದೆತ್ತಿನ ಗಂಗೆದೊಲಿನ ಉಣ್ಣೆಗಳ–
ನೊಂದೊಂದಾಗಿ ಚಿವುಟ ಉದುರಿಸುವ ಕಾಯದಲ್ಲಿ
ಗರ್ಕಾಕಿ; ಸೀತೊಡ್ಡಿ ಗೋಮಯ ಚೆಲ್ಲಿ ಹೋದದ್ದನ್ನೂ

ಮರೆತು ಮೆಲ್ಲ ಮೆಲುದನಿಯಲ್ಲುಲಿದಾಗ
ಕತ್ತಲೆಯ ಮೂಲೆಯಲ್ಲಿ ಬಾವುಲಿ ಕಿಚಕ್ಕೆಂದು ನಕ್ಕಿತು.
ನಾಗಸಂಪಿಗೆ ಮರದಡಿಯಿಂದ ಕೆರೆಗೆ ನಡೆದ
ಗೋಪಿ ಉಹುಹು ಎಂದು ಮೂರು ಮುಳುಗು ಹೊಡೆದ

ಬೆನ್ನುರಿಯಲ್ಲಿ ತುರಿಕೆಯೆದ್ದಂತಾಗಿ ಜನಿವಾರವನ್ನೆರಡು
ಕೈಯಲ್ಲಿಡಿದು ಗಸ ಗಸ ತಿಕ್ಕಿ ಒದ್ದೆ ಕೋಮಣದಲ್ಲೆ
ದೇವರ ಕೋಣೆಯ ಮಂದಾರ ಪೀಠದ ಎದುರು ಪದ್ಮಾಸನದಲ್ಲಿ
ಮೂರು ಬಲಿದು "ಕೇಶವಾನಂತ ಗೋವಿಂದಾಯ" ಗಂಟೆ ಬಡಿದ
ಸೀತಾಯಣದ ಪೋಲಂಕಿ ಹಿಂದೂ ಸಂಸ್ಕೃತಿಗಪಚಾರ
ಮಾಡಿದರೆಂದು
ತುಂಡ್ಲುಪ್ಪು ಹೊಡೆದ ಸಾಹಸವನ್ನು ಸಾಭಿನಯವಾಗಿ ಅಪ್ಪಯ್ಯಂಗೆ
ವರ್ಣಿಸಿ, ಲಚ್ಚಿ ತೆರಕಿನ ಕಲ್ಲಿ ಹಿಡಿದು ಬೇಣಕ್ಕೆ ಹೊರಟದ್ದ ಕಂಡು
ನೇವಾಳ ಸಡಿಲಿಸಿ ತೋಟದ ಸಂಧಿಯಿಳಿಜಾರಿನಲ್ಲಿ ಮರೆಯಾದ

ಮತ್ತೆ ಹೊತ್ತು ಮಾರುದ್ದ ಬಂದಾಗ ಊಟಕ್ಕೆ ಕುಂತು
ಹುಳಿಗೆ ಖಾರ ಸಾಕಾತ್ತಿಲ್ಲೆ ಎಂದು ಬಡಿಸಲು ಬಂದ
ಹೆಂಡತಿಯ ಮುಡಿ ಹಿಡಿದು "ಹಡಬೆ ರಂಡೆ ಹಾಳಾಗಿ ಹೋಗು"
ಎನ್ನುತ್ತ ಬಡಿದೇ ಬಡಿದ: ಆಪೋಶನ ತಕ್ಕಂಡು ಕವಳ ಜಗಿದ

–ಜಿ.ಎಸ್. ಅವಧಾನಿ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**